ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೨೬

# ಪಟ್ಟಿ – ೦೪

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**

**ಶುಕ್ರವಾರ, ದಿನಾಂಕ : ೩೦ನೇ ಜನವರಿ, ೨೦೨೬**

---

## ಸಮೂಹ – V

೧. ಸಮಾಜ ಕಲ್ಯಾಣ ಸಚಿವರು
೨. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು
೩. ಕೃಷಿ ಸಚಿವರು
೪. ಕಾರ್ಮಿಕ ಸಚಿವರು
೫. ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು
೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು
೭. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

---

## ರಾಜ್ಯದಲ್ಲಿ ಇರುವ ವಲಸೆ ಕಾರ್ಮಿಕರಿಗೆ ನೀಡುವ ಸೌಲಭ್ಯಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೨ (೪೧೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇರುವಂತಹ ವಲಸೆ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ವಲಸೆ ಕಾರ್ಮಿಕರಿಗೆ ಸರ್ಕಾರದಿಂದ ಒದಗಿಸುತ್ತಿರುವ ಸಹಾಯಕ/ ಸೌಲಭ್ಯಗಳು ಯಾವುವು ; (ಸಂಪೂರ್ಣ ವಿವರ ಒದಗಿಸುವುದು)

(ಇ) ೨೦೨೩–೨೪ನೇ ಸಾಲಿನಲ್ಲಿ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರಿಗೆ ತಾತ್ಕಾಲಿಕ ವಸತಿಗಳನ್ನು ನೀಡಲು ಘೋಷಿಸಿದ್ದು, ಅದು ಯಾವ ಹಂತದಲ್ಲಿದೆ ; ಯಾವ ಯಾವ ಜಿಲ್ಲೆಗಳಲ್ಲಿ ನಿರ್ಮಿಸಲಾಗುತ್ತಿದೆ ;

(ಈ) ಸದರಿ ಕಾರ್ಮಿಕರಿಗೆ ನಿರ್ಮಿಸುತ್ತಿರುವ ಕಟ್ಟಡಗಳ ಕಾಮಗಾರಿಯು ಪ್ರಸ್ತುತ ಯಾವ ಹಂತಗಳಲ್ಲಿವೆ ; ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುತ್ತದೆ ? (ಸಂಪೂರ್ಣ ವಿವರ ಒದಗಿಸುವುದು)

## ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ (ನರೇಗಾ) ಯೋಜನೆಯಲ್ಲಿ ಸೃಷ್ಟಿಯಾಗಿರುವ ಗೊಂದಲಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೩ (೪೧೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನರೇಗಾ ಯೋಜನೆಯಡಿ ಗ್ರಾಮೀಣ ಕಾರ್ಮಿಕರಿಗೆ ನೀಡುತ್ತಿರುವ ಯೋಜನೆಗಳು ಯಾವುವು ; ರಾಜ್ಯದಲ್ಲಿ ನರೇಗಾ ಯೋಜನೆಯನ್ನು

ಪಡೆಯುತ್ತಿರುವ ಕಾರ್ಮಿಕರ ಸಂಖ್ಯೆ ಎಷ್ಟು; (ಸಂಪೂರ್ಣ ಮಾಹಿತಿ ಒದಗಿಸುವುದು)

(ಆ) ಈ ಯೋಜನೆಯಡಿಯಲ್ಲಿ ಉದ್ಯೋಗ ಚೀಟಿ ಪಡೆಯಲು ಇರುವ ಮಾನದಂಡಗಳು ಯಾವುವು ; ನರೇಗಾ ಕಾರ್ಮಿಕರಿಗೆ ದಿನ ಕೂಲಿ ಮೊತ್ತವನ್ನು ಯಾವ ಮನದಂಡಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ; ಪ್ರಸ್ತುತ ನೀಡುತ್ತಿರುವ ದಿನ ಕೂಲಿ ಮೊತ್ತವೆಷ್ಟು ;

(ಇ) ನರೇಗಾ ಯೋಜನೆಯೆಂಬ ಕಾಯ್ದೆಯನ್ನು ಪ್ರಸ್ತುತ ಕೇಂದ್ರ ಸರ್ಕಾರ ವಿವಿಜಿ ರಾಮ್ ಜಿ ಕಾಯ್ದೆ ಎಂದು ಬದಲಾಯಿಸಲು ಇರುವ ಪ್ರಮುಖ ಕಾರಣಗಳು ಯಾವುವು ; ಬದಲಾವಣೆಯಿಂದ ಆಗುವ ವ್ಯತ್ಯಾಸಗಳು ಯಾವುವು ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಈ) ಸದರಿ ಕಾಯ್ದೆ ಬದಲಾವಣೆಯಿಂದಾಗಿ ಸಾರ್ವಜನಿಕರಲ್ಲಿ ತೀವ್ರ ಗೊಂದಲ ಸೃಷ್ಟಿಯಾಗಿದ್ದು, ಈ ಗೊಂದಲಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳು ಯಾವುವು ?

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ನಿಗಮ ಸಂಸ್ಥೆಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೪ (೪೧೪) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ನಿಗಮ ಸಂಸ್ಥೆಗಳು ಯಾವುವು ;

(ಆ) ಸದರಿ ನಿಗಮ ಸಂಸ್ಥೆಗಳ ಮೂಲಕ ಒದಗಿಸಲಾಗುತ್ತಿರುವ ಯೋಜನೆಗಳು ಯಾವುವು ;

(ಇ) ಕಳೆದ ಎರಡು ವರ್ಷಗಳಲ್ಲಿ ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳು ಯಾವುವು ;

(ಈ) ಅನುಷ್ಠಾನಗೊಂಡ ಯೋಜನೆಗಳ ಪೈಕಿ ಪೂರ್ಣಗೊಂಡ ಹಾಗೂ ಬಾಕಿ ಇರುವ ಯೋಜನೆಗಳು ಯಾವುವು ?

## ದಾವಣಗೆರೆ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೫ (೪೧೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಾವಣಗೆರೆ ಜಿಲ್ಲೆಯಲ್ಲಿರುವ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ಒದಗಿಸುವುದು)

(ಆ) ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; (ಹುದ್ದೆವಾರು ಮಾಹಿತಿ ಒದಗಿಸುವುದು)

(ಇ) ಸದರಿ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳಲ್ಲಿ ಸರ್ಕಾರಿ ಮತ್ತು ಖಾಸಗಿ ನೌಕರರ ಸಂಖ್ಯೆ ಎಷ್ಟು;

(ಈ) ಗ್ರಾಮ ಪಂಚಾಯಿತಿಗಳ ನಿರ್ವಹಣೆ ಕಾರ್ಯ ಹೇಗೆ ನಡೆಯುತ್ತದೆ ನಿರ್ವಣೆಗೆ ಇರುವ ಮಾನದಂಡಗಳಾವುವು ;

(ಉ) ಗ್ರಾಮ ಪಂಚಾಯಿತಿಗಳಲ್ಲಿ ಅಧ್ಯಕ್ಷರ ಅಧಿಕಾರಗಳು ದುರ್ಬಳಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಅಂತಹವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳಾವುವು ?

## ಖಾಸಗಿ ಟ್ರಸ್ಟ್‌ಗಳ ವಸತಿ ಮತ್ತು ಮಕ್ಕಳ ಶಿಕ್ಷಣ ನೀಡುವುದರ ಬಗ್ಗೆ

**ಶ್ರೀ ಹೆಚ್. ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೬ (೪೧೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಖಾಸಗಿ ಟ್ರಸ್ಟ್‌ಗಳಲ್ಲಿ ವಸತಿ ಮತ್ತು ಶಿಕ್ಷಣವನ್ನು ಮಕ್ಕಳ ತಂದೆ ತಾಯಿಯವರ ಒಪ್ಪಿಗೆಯೊಂದಿಗೆ ವಿದ್ಯಾಭ್ಯಾಸ ಮಾಡಲು ಅವಕಾಶವಿದೆಯೇ; ಇದ್ದಲ್ಲಿ ಮಾರ್ಗ ಸೂಚಿಗಳಾವುವು ;

(ಆ) ಸ್ಥಳೀಯ ಶಾಲೆಗಳಲ್ಲಿ ಪ್ರವೇಶ ಪಡೆಯುತ್ತಿರುವ ಮಕ್ಕಳಿಗೆ ಖಾಸಗಿ ಟ್ರಸ್ಟ್‌ಗಳಲ್ಲಿ ವಸತಿ ಮತ್ತು ವಿದ್ಯಾಭ್ಯಾಸ ಮಾಡಲು ಅವಕಾಶ ಇದೆಯೇ ; (ವಿವರ ನೀಡುವುದು)

(ಇ) ೧೮ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಮಠಗಳು ಮತ್ತು ಧಾರ್ಮಿಕ ಸಂಸ್ಥೆಗಳು ನಡೆಸುವ ಉಚಿತ ಹಾಸ್ಟೆಲ್‌ಗಳಲ್ಲಿ ವಸತಿ ಮತ್ತು ಅಭ್ಯಾಸ ಮಾಡಲು ಅವಕಾಶವಿದೆಯೇ ;

(ಈ) ಸರ್ಕಾರದ ಅನುಮತಿಯನ್ನು ಪಡೆದು ನಡೆಸುತ್ತಿರುವ ಖಾಸಗಿ ಟ್ರಸ್ಟ್‌ಗಳು ಎಷ್ಟು ; (ವಿವರ ನೀಡುವುದು)

(ಉ) ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಖಾಸಗಿ ಟ್ರಸ್ಟ್‌ಗಳ ಮಕ್ಕಳಿಗೆ ವಸತಿ ಕಲ್ಪಿಸಲು ಯಾವ ಯಾವ ನಿರ್ದೇಶನವಿದೆ?

## ಬೆಂಗಳೂರು ನಗರ ಜಿಲ್ಲೆಯ ನರೇಗಾ ಅನುದಾನ ಮತ್ತು ಕಾಮಗಾರಿಯ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೭ (೪೧೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ಬೆಂಗಳೂರು ನಗರಕ್ಕೆ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳಾವುವು; (ಸಂಪೂರ್ಣ ವಿವರ ವರ್ಷವಾರು ನೀಡುವುದು)

(ಆ) ಕಳೆದ ೫ ವರ್ಷಗಳಲ್ಲಿ ಈ ಯೋಜನೆಗೆ ಕೇಂದ್ರ ಸರ್ಕಾರದಿಂದ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ಮೊತ್ತ ಎಷ್ಟು;

(ಇ) ಬಿಡುಗಡೆಯಾಗಿದ್ದ ಅನುದಾನದಲ್ಲಿ ಎಷ್ಟು ಯೋಜನೆಗಳನ್ನು ಮತ್ತು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ಮತ್ತು ಪ್ರಸ್ತುತ ಎಷ್ಟು ಕಾಮಗಾರಿಗಳು ಚಾಲ್ತಿಯಲ್ಲಿವೆ ; ಎಷ್ಟು ಅನುದಾನವನ್ನು ಖರ್ಚು ಮಾಡಲಾಗಿದೆ ಮತ್ತು ಯಾವ ಯಾವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ ;

(ಈ) ನರೇಗಾ ಯೋಜನೆಯಿಂದ ಪ್ರಸ್ತುತ ಯಾವ ಯಾವ ಕಾಮಗಾರಿ ಚಾಲ್ತಿಯಲ್ಲಿವೆ ಮತ್ತು ಕ್ರಿಯಾ ಯೋಜನೆ ಸಲ್ಲಿಸುವರ ಕಾಮಗಾರಿ ಯಾವುವು; ಎಷ್ಟು ಅನುಧಾನವನ್ನು ಖರ್ಚು ಮಾಡಲಾಗುತ್ತಿದೆ? (ವಿವರ ನೀಡುವುದು)

## ರಾಜ್ಯದಲ್ಲಿ ಖಾಲಿ ಇರುವ PDO ಹುದ್ದೆಗಳ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೮ (೪೧೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಗ್ರಾಮ ಪಂಚಾಯಿತಿಗಳಲ್ಲಿ ಖಾಲಿ ಇರುವ ಪಿ.ಡಿ.ಓ ಹುದ್ದೆಗಳು ಎಷ್ಟು;

(ಆ) ಇವುಗಳನ್ನು ಭರ್ತಿ ಮಾಡಲು ಸರ್ಕಾರದಿಂದ ಕ್ರಮ ವಹಿಸಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ ಪಿ.ಡಿ.ಓ ನೇಮಕಾತಿ ಮಾಡಿಕೊಳ್ಳಲು ಸರ್ಕಾರಕ್ಕೆ ಇರುವ ತೊಂದರೆಗಳೇನು ;

(ಇ) ಸರ್ಕಾರದ ವಿವಿಧ ಯೋಜನೆಗಳನ್ನು ಸಮರ್ಪಕವಾಗಿ ತಲುಪಿಸುವ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿ ಕೆಲಸ ಮಾಡುತ್ತಿದ್ದು, ಪಿ.ಡಿ.ಓ ಹುದ್ದೆಗಳು ಖಾಲಿ ಇರುವುದರಿಂದ ಈ ಸೇವೆಗಳು ಸಾರ್ವಜನಿಕರಿಗೆ ಸಮರ್ಪಕವಾಗಿ ತಲುಪದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಶೀಘ್ರವಾಗಿ ಹುದ್ದೆಗಳನ್ನು ತುಂಬಲು ಸರ್ಕಾರ ಕ್ರಮ ವಹಿಸುವುದೇ ?

## ಗೃಹಲಕ್ಷ್ಮಿ ಯೋಜನೆ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೬೯ (೪೧೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ನೋಂದಾಯಿಸಿಕೊಂಡಿರುವವರ ಸಂಖ್ಯೆ ಎಷ್ಟು; ಈ ಪೈಕಿ ಸ್ವೀಕೃತಗೊಂಡಿರುವ ಮತ್ತು ತಿರಸ್ಕೃತ ಗೊಂಡಿರುವ ಅರ್ಜಿಗಳೆಷ್ಟು: (ವಿವರ ನೀಡುವುದು)

(ಆ) ಈ ಪೈಕಿ ಎಷ್ಟು ಫಲಾನುಭವಿಗಳಿಗೆ ಪ್ರತಿ ತಿಂಗಳು ಹಣ ಜಮೆಯಾಗುತ್ತಿದೆ ; ಇದಕ್ಕೆ ಆಗುತ್ತಿರುವ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ಅರ್ಜಿ ಸ್ವೀಕೃತ ಗೊಂಡಿದ್ದರೂ ಸಾವಿರಾರೂ ಜನ ಫಲಾನುಭವಿಗಳಿಗೆ ಹಣ ಬಿಡುಗಡೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಹಣ ಬಿಡುಗಡೆಯಾಗದಿರಲು ಕಾರಣಗಳೇನು ; ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು ;

(ಈ) ಅರ್ಜಿ ಸ್ವೀಕೃತಗೊಂಡಿರುವ ಎಲ್ಲಾ ಫಲಾನುಭವಿಗಳ ಖಾತೆಗೆ ತಕ್ಷಣ ಹಣ ಜಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ನೋಂದಾಯಿಸಿಕೊಂಡಿರುವ ಫಲಾನುಭವಿಗಳ ಪೈಕಿ ಡಿಸೆಂಬರ್ ೨೦೨೫ರ ವರೆಗೆ ಎಷ್ಟು ಫಲಾನುಭವಿಗಳು ಮರಣ ಹೊಂದಿದ್ದಾರೆ ? (ಜಿಲ್ಲಾವಾರು ವಿವರ ನೀಡುವುದು)

## ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ಕುರಿತು

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೦ (೪೨೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯ ಇರುವಕ್ಕಿ ಶಿವಮೊಗ್ಗ ಇದರ ಅಧೀನದಲ್ಲಿರುವ ವಲಯ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರ ಬ್ರಹ್ಮಾವರದ ೩೫೦ ಎಕರೆ ಕೃಷಿ ಆವರಣದಲ್ಲಿ ಆಧುನಿಕ ವ್ಯವಸ್ಥೆಯುಳ್ಳ ಡಿಪ್ಲೋಮಾ ಕೃಷಿ ಮಹಾವಿದ್ಯಾಲಯವನ್ನು ಯಾವಾಗ ಪ್ರಾರಂಭಮಾಡಲಾಯಿತು ;

(ಆ) ಡಿಪ್ಲೋಮಾ ಕಾಲೇಜು ಕಟ್ಟಡ ನಿರ್ಮಾಣಕ್ಕೆ ನಬಾರ್ಡ್ ಸಂಸ್ಥೆಯಿಂದ ರೂ.೫.೦೦ ಕೋಟಿ ವಿದ್ಯಾರ್ಥಿ ನಿಲಯಕ್ಕೆ ರೂ.೫.೦೦ ಕೋಟಿ ಹಾಗೂ ವಿದ್ಯಾರ್ಥಿನಿಯರ ನಿಲಯಕ್ಕೆ ರೂ.೫.೦೦ ಕೋಟಿ ವ್ಯಹಿಸಲಾಗಿರುವುದು ಹಾಗೂ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಹೈಟೆಕ್ ತಂತ್ರಜ್ಞಾನವನ್ನು ಒಳಗೊಂಡಿರುವ ತರಗತಿ ಕೊಠಡಿ, ಪ್ರಯೋಗಾಲಯ, ಗ್ರಂಥಾಲಯ, ಗಣಕಯಂತ್ರದ ಕೊಠಡಿಗಳನ್ನು ಹೊಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ಕೃಷಿ ಡಿಪ್ಲೋಮಾ ಕಾಲೇಜು ೨೦೨೩–೨೪ನೇ ಸಾಲಿನ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯ ಮಾರ್ಗಸೂಚಿಯಂತೆ ಸ್ಥಗಿತಗೊಳಿಸಲಾಗಿದ್ದು, ಮುಂದಿನ ಶೈಕ್ಷಣಿಕ ವರ್ಷದಲ್ಲಿ ಇದೇ ಕಟ್ಟಡದಲ್ಲಿ ಕೃಷಿ ಕಾಲೇಜನ್ನು ಪ್ರಾರಂಭಿಸುವ ಯೋಜನೆ ಅಥವಾ

ಡಿಪ್ಲೋಮಾ ಕೃಷಿ ಕಾಲೇಜನ್ನು ಪುನರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ ಸರ್ಕಾರದ ನೀತಿಯಿಂದ ರೈತರ ಮಕ್ಕಳಿಗೆ ಅನ್ಯಾಯವಾಗದಂತೆ ಸರ್ಕಾರ ಸೂಕ್ತ ಕ್ರಮ ವಹಿಸುವುದೇ ?

## ಕೃಷಿ ಯಾಂತ್ರೀಕರಣಕ್ಕೆ ಬಿಡುಗಡೆ ಮಾಡಿದ ಅನುದಾನದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೩೭೧ (೪೨೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ರಾಜ್ಯ ಸರ್ಕಾರ ಕೃಷಿ ಯಾಂತ್ರೀಕರಣಕ್ಕಾಗಿ ಮೀಸಲಿರಿಸಿದ ಅನುದಾನವೆಷ್ಟು ಮತ್ತು ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಕೃಷಿ ಯಂತ್ರೋಪಕರಣಗಳ ಸಬ್ಸಿಡಿ ಪಡೆಯಲು ರೈತರಿಗೆ ಇರಬೇಕಾದ ಅರ್ಹತೆಯೇನು ; ಯಾವ ರೀತಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಲಾಗುವುದು ;

(ಇ) ಕೃಷಿ ಯಾಂತ್ರೀಕರಣಕ್ಕಾಗಿ ರೈತರಿಗೆ ನೀಡುವ ಸಬ್ಸಿಡಿಯ ಮೊತ್ತವೆಷ್ಟು ;

(ಈ) ಕಳೆದ ಐದು ವರ್ಷಗಳಲ್ಲಿ ತುಮಕೂರು ಜಿಲ್ಲೆಯಲ್ಲಿ ಕೃಷಿ ಯಂತ್ರೋಪಕರಣಗಳ ಸಬ್ಸಿಡಿಗಾಗಿ ಬಂದ ಅರ್ಜಿಗಳ ಸಂಖ್ಯೆ ಎಷ್ಟು; ಕೋರಿದ ಮೊತ್ತವೆಷ್ಟು; ಸರ್ಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು; (ವರ್ಷವಾರು, ತಾಲ್ಲೂಕುವಾರು ವಿವರ ನೀಡುವುದು)

(ಉ) ಕೃಷಿ ಯಾಂತ್ರೀಕರಣ ಪ್ರೋತ್ಸಾಹಿಸಲು ಮತ್ತು ಯುವಕರನ್ನು ಕೃಷಿಯತ್ತ ಆಕರ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ವಿಕಲಚೇತನ ಮಕ್ಕಳ ಶಿಕ್ಷಣ ಮತ್ತು ಪ್ರೋತ್ಸಾಹಧನದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೩೭೨ (೪೨೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಆಟಿಸಂ ಭೌತಿಕ ವಿಕಲತೆ ಮತ್ತು ಬಹುವಿಧ ಅಂಗವಿಕಲತೆಯಿಂದ ಬಳಲುತ್ತಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ವಿಕಲಚೇತನರ ಸಂಖ್ಯೆ ಎಷ್ಟು; ಮತ್ತು ಅನಕ್ಷರಸ್ಥ ವಿಕಲಚೇತನರ ಸಂಖ್ಯೆ ಎಷ್ಟು;

(ಇ) ಆಟಿಸಂ ಮತ್ತು ಬೌದ್ಧಿಕ ವಿಕಲತೆಯಿಂದ ಬಳಲುತ್ತಿರುವ ಮಕ್ಕಳನ್ನು ಗುರುತಿಸಲು ಅವರಿಗೆ ವಿಶೇಷ ಶಿಕ್ಷಣ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಲು ಇರುವ ಸರ್ಕಾರದ ಯೋಜನೆಗಳು ಯಾವುವು ;

(ಈ) ವಿಕಲಚೇತನ ಮಕ್ಕಳಿಗಾಗಿ ರಾಜ್ಯದಲ್ಲಿರುವ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಆಟಿಸಂ ಬೌದ್ಧಿಕ ವಿಕಲತೆ ಮತ್ತು ಬಹುವಿಧ ಅಂಗವಿಕಲತೆ ಹೊಂದಿದ ಮಕ್ಕಳ ಆರೈಕೆದಾರರಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹಧನಕ್ಕಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು; ಎಷ್ಟು ಜನರಿಗೆ ಪ್ರೋತ್ಸಾಹ ಧನ ನೀಡಲಾಗುತ್ತಿದೆ ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನದ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೩೭೩ (೪೨೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಆರು ವರ್ಷಗಳಲ್ಲಿ ಪಟ್ಟಣ ಪಂಚಾಯಿತಿ ಮತ್ತು ಪುರಸಭೆಯಾಗಿ ಉನ್ನತೀಕರಣಗೊಂಡ ಗ್ರಾಮ ಪಂಚಾಯತಿಗಳ ಸಂಖ್ಯೆ ಎಷ್ಟು ;

(ಆ) ಸದರಿ ಗ್ರಾಮ ಪಂಚಾಯಿತಿಗಳ ಉನ್ನತೀಕರಣಕ್ಕೆ ಅಧಿಸೂಚನೆ ಹೊರಡಿಸಿದ್ದ ದಿನಾಂಕ ಮತ್ತು ಗ್ರಾಮ ಪಂಚಾಯಿತಿಗಳು ದಾಖಲೆಗಳನ್ನು ಹಸ್ತಾಂತರ ಮಾಡಿದ ದಿನಾಂಕದ ವಿವರ ನೀಡುವುದು ;

(ಇ) ಗ್ರಾಮ ಪಂಚಾಯಿತಿಗಳ ಆಡಳಿತದ ಅವಧಿ ನಗರ ಸ್ಥಳೀಯ ಸಂಸ್ಥೆಯ ಪ್ರಾರಂಭಿಸಲು ಅಧಿಸೂಚನೆ ಹೊರಡಿಸಿದ ಕೂಡಲೇ ರದ್ದಾಗುತ್ತದೆಯೋ ಅಥವಾ ದಾಖಲೆಗಳ ಹಸ್ತಾಂತರದ ನಂತರ ಆಡಳಿತದ ಅವಧಿ ಕೊನೆಯಾಗುತ್ತದೆಯೋ ;

(ಈ) ಅಧಿಸೂಚನೆ ಹೊರಡಿಸಿದ್ದ ದಿನಾಂಕಕ್ಕೆ ಮೊದಲು ಅರ್ಜಿ ಸಲ್ಲಿಸಿದ್ದು, ಶುಲ್ಕವನ್ನು ಪಾವತಿಸಿದ್ದಲ್ಲಿ ಅಧಿಸೂಚನೆಗೆ ಮೊದಲೇ ಸಾಮಾನ್ಯ ಸಭೆಯಲ್ಲಿ ನಿರ್ಣಯ ಅನುಮೋದನೆ ಆಗಿದ್ದಲ್ಲಿ, (ಉದಾರಣೆಗೆ ಖಾತೆಗಾಗಿ, ಜನರಲ್ ಲೈಸೆನ್ಸ್ ಗಾಗಿ ಪಾವತಿಸಿದ ಮೊತ್ತ) ಗ್ರಾಮ ಪಂಚಾಯಿತಿಯು ಅಧಿಸೂಚನೆಯ ನಂತರ ಅಧಿಕಾರ ಹಸ್ತಾಂತರಕ್ಕೆ ಮುನ್ನ ಸೇವೆಯನ್ನು ಒದಗಿಸಬಹುದೇ ; ಸೇವೆಯನ್ನು ಒದಗಿಸಲು ಅವಕಾಶವಿಲ್ಲದೆ ಇದ್ದಲ್ಲಿ ಸದರಿ ಶುಲ್ಕವನ್ನು ಹಿಂತಿರುಗಿಸಲಾಗುವುದೇ ; ಹಿಂತಿರುಗಿಸುವುದಾದರೆ ಪಡೆಯುವ ಬಗೆ ಹೇಗೆ ?

## ವಿದ್ಯಾರ್ಥಿಗಳಿಗೆ ಉಚಿತವಾಗಿ ನೀಡುವ ಲ್ಯಾಪ್‌ಟಾಪ್ ವಿತರಣೆ ಮಾಡದೇ ಇರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೪ (೪೨೫) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳ ಉನ್ನತ ತಾಂತ್ರಿಕ ಹಾಗೂ ಡಿಜಿಟಲ್ ಶಿಕ್ಷಣಕ್ಕೆ ನೆರವಾಗುವ ಉಚಿತ ಲ್ಯಾಪ್‌ಟಾಪ್ ವಿತರಣೆ ಯೋಜನೆ ಚಾಲ್ತಿಯಲ್ಲಿದೆಯೇ ; ಅಥವಾ ಸ್ಥಗಿತಗೊಂಡಿದೆಯೇ ;

(ಆ) ಕಳೆದ ೫ ವರ್ಷದಿಂದ ಈ ಯೋಜನೆ ಚಾಲ್ತಿಯಲ್ಲಿದ್ದರೆ ಇಲ್ಲಿವರೆಗೂ ಎಷ್ಟು ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ; ಹಾಗೂ ಸ್ಥಗಿತಗೊಂಡಿದ್ದರೆ ಅದಕ್ಕೆ ಕಾರಣಗಳೇನು ;

(ಇ) ೨೦೧೮ ರಲ್ಲಿ ರಾಜ್ಯದ ೧೫೨೦ ಆಯಾ ಐಟಿಐ ಕಾಲೇಜಿನವರು ಒಂದು ಬಾರಿ ಮಾತ್ರ ಲ್ಯಾಪ್‌ಟಾಪ್ ವಿತರಿಸಿದ್ದಾರೆ ; ಅದಾದ ನಂತರ ಲ್ಯಾಪ್‌ಟಾಪ್ ವಿತರಣೆ ಮಾಡಿಲ್ಲದಿರುವುದು ನಿಜವೇ ;

(ಈ) ಯೋಜನೆ ಪ್ರಾರಂಭಗೊಂಡ ವರ್ಷದಿಂದ ಇಲ್ಲಿಯವರೆಗೂ ಲ್ಯಾಪ್‌ಟಾಪ್‌ಗಾಗಿ ಎಷ್ಟು ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ ; ಇದರಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ವಿತರಣೆ ಮಾಡಲಾಗಿದೆ ; ಇನ್ನು ಎಷ್ಟು ಬಾಕಿ ಇದೆ ?

## ವಿದ್ಯಾರ್ಥಿ ವೇತನವನ್ನು ಬಾಕಿ ಉಳಿಸಿಕೊಂಡಿರುವ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೫ (೪೨೬) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಿಂದ ಇಲಾಖೆಯ ವತಿಯಿಂದ ಮೆಟ್ರಿಕ್ ನಂತರದ ಕೋರ್ಸ್ ವಿದ್ಯಾರ್ಥಿಗಳಿಗೆ ನೀಡಿರುವ ವಿದ್ಯಾರ್ಥಿವೇತನದ ಮೊತ್ತವೆಷ್ಟು ;

(ಆ) ಇಲಾಖೆಯಲ್ಲಿ ಅನುದಾನದ ಕೊರತೆಯಿಂದ ಕಳೆದ ೪ ವರ್ಷಗಳಿಂದ ಸುಮಾರು ೨೬೩.೫೯ ಕೋಟಿ ರೂ ವಿದ್ಯಾರ್ಥಿ ವೇತನವನ್ನು ಬಾಕಿ ಉಳಿಸಿಕೊಂಡಿರುವುದು ನಿಜವೇ;

(ಇ) ಕಳೆದ ೪ ವರ್ಷದಿಂದ ಇಲ್ಲಿಯವರೆಗೂ ವಿದ್ಯಾರ್ಥಿ ವೇತನಕ್ಕಾಗಿ ಬಂದಂತಹ ಅರ್ಜಿಗಳ ಸಂಖ್ಯೆ ಎಷ್ಟು, ಇದರಲ್ಲಿ ಅರ್ಹತೆವುಳ್ಳವರು ಹಾಗೂ ಅರ್ಹತೆ ಇಲ್ಲದವರ ಸಂಖ್ಯೆ ಎಷ್ಟು ಹಾಗೂ ಅರ್ಹತೆಯುಳ್ಳ ಎಲ್ಲಾ ವಿದ್ಯಾರ್ಥಿಗಳಿಗೂ ವಿದ್ಯಾರ್ಥಿ ವೇತನ ನೀಡಲಾಗಿದೆಯೇ ;

(ಈ) ಮೆಟ್ರಿಕ್ ನಂತರದ ಕೋರ್ಸ್‌ಗಳ ವಿದ್ಯಾರ್ಥಿಗಳು ಯಾವ ಯಾವ ಯೋಜನೆಯಡಿಯಲ್ಲಿ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಾಗಿರುತ್ತಾರೆ ?

## ರಾಜ್ಯದಲ್ಲಿ ರೈತರ ಆತ್ಮಹತ್ಯೆ ಪ್ರಕರಣ ಹೆಚ್ಚಾಗಿರುವ ಕುರಿತು

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೬ (೪೨೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೩ ವರ್ಷದಿಂದೀಚೆಗೆ ನಡೆದಿರುವ ರೈತರ ಆತ್ಮಹತ್ಯೆ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಕಾರಣ ಸಹಿತ ವಿವರ ನೀಡುವುದು)

(ಆ) ಆತ್ಮಹತ್ಯೆಮಾಡಿಕೊಂಡ ರೈತರ ಕುಟುಂಬದವರಿಗೆ ಸರ್ಕಾರದಿಂದ ನೀಡಲಾಗಿರುವ ಪರಿಹಾರದ ಮೊತ್ತ ಎಷ್ಟು ಹಾಗೂ ರೈತರ ಆತ್ಮಹತ್ಯೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು ; (ಪರಿಹಾರದ ವಿವರ ನೀಡುವುದು)

(ಇ) ರಾಜ್ಯದಲ್ಲಿ ಕಳೆದ ೩ ವರ್ಷದ ಅವಧಿಯಲ್ಲಿ ೨೪೮೬ ಮಂದಿ ರೈತರು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ರೈತರು ಆತ್ಮಹತ್ಯೆಯನ್ನು ಯಾವ ಕಾರಣಗಳಿಂದ ಮಾಡಿಕೊಳ್ಳುತ್ತಿದ್ದಾರೆ ಎಂಬುದರ ಕುರಿತು ಸರ್ಕಾರ ಪರಿಶೀಲಿಸಿದೆಯೇ ;

(ಉ) ಕಳೆದ ೩ ವರ್ಷದಿಂದ ಎಷ್ಟು ಮೊತ್ತದ ರೈತರ ಸಾಲವನ್ನು ಸರ್ಕಾರ ಮನ್ನಾ ಮಾಡಿದೆ ; ಕೇಂದ್ರ ಸರ್ಕಾರದಿಂದ ಎಷ್ಟು ಫಲಾನುಭವಿಗಳಿಗೆ ಆರ್ಥಿಕ ನೆರವನ್ನು ವರ್ಗಾವಣೆ ಮಾಡಲಾಗಿದೆ ;

(ಊ) ರೈತರ ನೆರವಿಗೆ ರಾಜ್ಯ ಸರ್ಕಾರದಿಂದ ಹಾಗೂ ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿರುವ ಯೋಜನೆಗಳಾವುವು ?

## ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನಿವೇಶನಗಳ ನಕ್ಷೆಗೆ ಅನುಮತಿ ನೀಡುವ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೭ (೪೨೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಲೇಔಟ್/ನಿವೇಶನಗಳ ನಕ್ಷೆಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಾಧಿಕಾರ ಯಾವುದು ; ತಾಂತ್ರಿಕ ಮತ್ತು ಆಡಳಿತಾತ್ಮಕ ಅನುಮೋದನೆ ನೀಡುವಾಗ ಅನುಸರಿಸುವ ಕ್ರಮಗಳೇನು ; (ವಿವರ ನೀಡುವುದು)

(ಆ) ಗ್ರಾಮೀಣ ಭಾಗಗಳಲ್ಲಿ ಅಕ್ರಮವಾಗಿ ಲೇಔಟ್/ನಿವೇಶನ ನಕ್ಷೆಗಳಿಗೆ ಅನುಮೋದನೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಬಂದಿದ್ದಲ್ಲಿ, ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಅಧಿಕಾರವಾರು ಮಾಹಿತಿ ನೀಡುವುದು)

(ಈ) ಗ್ರಾಮೀಣ ಭಾಗಗಳಲ್ಲಿ ನಿವೇಶನ ನಕ್ಷೆಗಳಿಗೆ ಅಕ್ರಮವಾಗಿ ಅನುಮೋದನೆ ನೀಡುತ್ತಿರುವುದನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ನೀಡುವುದು)

## ಫಸಲ್ ಭೀಮಾ ಕೃಷಿ ವಿಕಾಸ ಯೋಜನೆಗಳಿಗೆ ಅನುದಾನ ಬಿಡುಗಡೆ ಬಗ್ಗೆ

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೮ (೪೩೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪–೨೫ ನೇ ಸಾಲಿನಲ್ಲಿ ಡಾ॥ ಡಿ.ಎಂ ನಂಜುಂಡಪ್ಪ ವರದಿಯ ವಿಶೇಷ ಅಭಿವೃದ್ಧಿ ಯೋಜನೆಯಡಿ ಮಹತ್ವಕಾಂಕ್ಷಿ ತಾಲ್ಲೂಕುಗಳಿಗೆ ಕೃಷಿ ಇಲಾಖೆಯವತಿಯಿಂದ ಪ್ರಧಾನ ಮಂತ್ರಿ ಫಜಲ್ ಭೀಮಾ ಯೋಜನೆ, ಕೃಷಿ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಗಳಿಗೆ ಮೀಸಲಿರಿಸಿದ ಮತ್ತು ಬಿಡುಗಡೆ ಮಾಡಿರುವ ಅನುದಾನ ವೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಬಿಡುಗಡೆಯಾದ ಅನುದಾನವನ್ನು ಯಾವ ಉದ್ದೇಶಗಳಿಗೆ ಬಳಸಲಾಗಿದೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಸದರಿ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕೃಷಿ ಆಯುಕ್ತರಿಂದ ಸಲ್ಲಿಸಿರುವ ಕ್ರಿಯಾಯೋಜನೆ ಏನು ? (ತಾಲ್ಲೂಕುವಾರು ಪ್ರತ್ಯೇಕವಾಗಿ ಮಾಹಿತಿ ನೀಡುವುದು)

## ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕರಿಗೆ ನೀಡುವ ಸೌಲಭ್ಯಗಳ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೭೯ (೫೪೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ಗ್ರಾಚ್ಯುಟಿ ಹಾಗೂ ESI ಸೌಲಭ್ಯ ನೀಡುವ ಪ್ರಸ್ತಾವ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಇವರನ್ನು ಈ ಯೋಜನೆಯಡಿಯಲ್ಲಿ ತರಲಾಗುವುದು ; ಇಲ್ಲದಿದ್ದಲ್ಲಿ ಅವರಿಗೆ ಗ್ರಾಚ್ಯುಟಿ ಹಾಗೂ ESI ಸೌಲಭ್ಯ ನೀಡಲು ಇರುವ ತೊಂದರೆಗಳೇನು ;

(ಆ) ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರಿಗೆ ನೀಡುತ್ತಿರುವ ಗೌರವಧನ ಹಾಗೂ ರಾಜ್ಯದ ಅಂಗನವಾಡಿಗಳಲ್ಲಿ ಪ್ರತಿ ಮಗುವಿಗೆ ನೀಡುತ್ತಿರುವ ಯೂನಿಟ್ ದರ ಹೆಚ್ಚಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ೨೦೧೭-೧೮ನೇ ಸಾಲಿನಲ್ಲಿ ಪ್ರಾರಂಭಿಸಿದ ೧೦೦ ಅಂಗನವಾಡಿ ಕೇಂದ್ರಗಳಿಗೆ ಕೇಂದ್ರದಿಂದ ಅನುದಾನ ನೀಡದಿರಲು ಕಾರಣಗಳೇನು ; ಕೇಂದ್ರ ಅನುದಾನಕ್ಕೆ ಒಳಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಯಾವ ಕಾಲ ಮಿತಿಯಲ್ಲಿ ಸದರಿ ಅಂಗನವಾಡಿ ಕೇಂದ್ರಗಳನ್ನು ಕೇಂದ್ರ ಅನುದಾನಕ್ಕೆ ಒಳಪಡಿಸಲಾಗುವುದು ?

## ರೈತರ ರಾಗಿ ಮಾರಾಟದ ಕುರಿತು

**ಡಾ|| ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :-**

೩೮೦ (೪೩೧) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಬಲ ಬೆಲೆಯಲ್ಲಿ ರೈತರಿಂದ ಖರೀದಿಸಿರುವ ರಾಗಿಯ ಪ್ರಮಾಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರೈತರಿಂದ ಖರೀದಿಸಿದ ಸಾವಿರಾರು ಮೂಟೆ ರಾಗಿ ದಾಸ್ತಾನು ಗೋದಾಮಿನಲ್ಲಿ ಕೊಳೆಯುತ್ತಿದ್ದು ನಿರ್ವಹಣೆಯ ಕೊರತೆಯಿಂದ ಈಗಾಗಲೇ ಭಾಗಶಃ ಬಳಕೆಗೆ ಯೋಗ್ಯವಲ್ಲದ ಸ್ಥಿತಿ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರೈತರು ರಾಗಿ ಮಾರಾಟ ಮಾಡಲು ತಂದ ರಾಗಿಯನ್ನು ವಾಹನದಿಂದ ಇಳಿಸಲು ಹಣ ಕೊಡಬೇಕಾಗಿದ್ದು ಹಾಗೂ ಗೋದಾಮಿನ ಮೇಲ್ವಿಚಾರಕರು ಲಂಚದ ರೂಪದಲ್ಲಿ ೫೦ ರಿಂದ ೬೦ ಕೆಜಿ ರಾಗಿಯನ್ನೇ ಪಡೆಯುತ್ತಿರುವ ಬಗ್ಗೆ ರೈತರಿಂದ ದೂರುಗಳು ಬಂದಿವೆಯೇ ;

(ಈ) ಅಧಿಕಾರಿಗಳ ನಿರ್ಲಕ್ಷ್ಯ ಲಂಚಾವತಾರದಿಂದ ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಉಂಟಾಗುತ್ತಿರುವುದರ ಬಗ್ಗೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ?

**ನಿಗಮ ಮಂಡಳಿಗಳು ಕಾರ್ಯನಿರ್ವಹಿಸುತ್ತಿರುವ ಬಗ್ಗೆ**

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೩೮೧ (೪೩೨) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಎಷ್ಟು ನಿಗಮ ಮಂಡಳಿಗಳು ಕಾರ್ಯ ನಿರ್ವಹಿಸುತ್ತಿದೆ ; (ಎಲ್ಲಾ ನಿಗಮ ಮಂಡಳಿಗಳ ಹೆಸರು ವಿಳಾಸ ಹಾಗೂ ದೂರವಾಣಿಯ ವಿವರಗಳನ್ನು ಒದಗಿಸುವುದು)

(ಆ) ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೂ ಎಲ್ಲಾ ನಿಗಮ ಮಂಡಳಿಗಳಿಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ಪ್ರತ್ಯೇಕ ಮಾಹಿತಿ ಒದಗಿಸುವುದು)

(ಇ) ಬಿಡುಗಡೆಯಾಗಿರುವ ಅನುದಾನದಲ್ಲಿ ಎಷ್ಟು ಜನರಿಗೆ ಸಾಲವನ್ನು ನೀಡಲಾಗಿದೆ ; ಇನ್ನು ಎಷ್ಟು ಬಾಕಿ ಇದೆ ;

(ಈ) ಹಲವಾರು ನಿಗಮದಲ್ಲಿ ಅನುದಾನ ಇಲ್ಲದ ಪರಿಣಾಮ ಜಿಲ್ಲಾ ಕಛೇರಿಗಳ ನಿರ್ವಹಣೆ, ಸಮಸ್ಯೆಯಾಗಿ ವಿದ್ಯುತ್ ಬಿಲ್, ದೂರವಾಣಿ ಇಂಟರ್ನೆಟ್ ಸೌಲಭ್ಯಗಳು ಕಡಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿಯೇ ;

(ಉ) ಕಛೇರಿಗಳಲ್ಲಿರುವ ಶೌಚಾಲಯ ಸ್ವಚ್ಚತಾ ಮತ್ತು ಕಸ ಗುಡಿಸುವ ಸಿಬ್ಬಂದಿಗೆ ಹಣ ನೀಡಲಾಗದಂತೆ ಪರಿಸ್ಥಿತಿ ಹಾಗೂ ಕುಡಿಯುವ ನೀರು ತರಲು ವಾಹನ ದುರಸ್ತಿಗೆ ಹಣ ಇಲ್ಲದಂತೆ ಪರಿಸ್ಥಿತಿ ಇರುವುದು ನಿಜವೇ ; ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ?

## ರಾಜ್ಯಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಸಲ್ಲಿಸಿರುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೩೮೨ (೪೩೩) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಕ್ಕೆ ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನ ದೊರಕಿರುವುದು ನಿಜವೇ ; ಹಾಗಿದ್ದಲ್ಲಿ ಸ್ಥಾನಮಾನ ಪಡೆದು ಎಷ್ಟು ವರ್ಷಗಳಾಗಿವೆ ;

(ಆ) ಪ್ರಸ್ತುತ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಎಲ್ಲಿ ಕಾರ್ಯನಿರ್ವಹಿಸುತ್ತಿದೆ ಹಾಗೂ ಶಾಸ್ತ್ರೀಯ ಭಾಷೆಯ ಸ್ಥಾನಮಾನ ನೀಡುವ ಉದ್ದೇಶ ಮತ್ತು ಇದರಿಂದಾಗುವ ಅನುಕೂಲಗಳೇನು ;

(ಇ) ಅಧ್ಯಯನ ಕೇಂದ್ರಕ್ಕಾಗಿ ಸರ್ಕಾರ ಎಷ್ಟು ಎಕರೆ ಜಾಗವನ್ನು ಮಂಜೂರು ಮಾಡಿದೆ ; ಮಂಜೂರು ಮಾಡಿದ್ದಲ್ಲಿ, ಯಾವ ಜಿಲ್ಲೆ ಮತ್ತು ಸ್ಥಳದ ಮಾಹಿತಿಯನ್ನು ಒದಗಿಸುವುದು ;

(ಈ) ಇದುವರೆಗೂ ಎಷ್ಟು ರಾಜ್ಯಗಳು ಶಾಸ್ತ್ರೀಯ ಸ್ಥಾನಮಾನ ಪಡೆದುಕೊಂಡಿದೆ ; ಅಧ್ಯಯನಕ್ಕಾಗಿ ಕರ್ನಾಟಕವನ್ನು

ಒಳಗೊಂಡಂತೆ ಹಲವು ರಾಜ್ಯಗಳಿಗೆ ಕೇಂದ್ರ ಸರ್ಕಾರ ಒದಗಿಸಿರುವ ಅನುದಾನವೆಷ್ಟು ; ಇದರಲ್ಲಿ ರಾಜ್ಯ ಸರ್ಕಾರದ ಪಾಲು ಎಷ್ಟು ;

(ಉ) ಕೇಂದ್ರ ಸರ್ಕಾರ ಒದಗಿಸಿರುವ ಅನುದಾನದಲ್ಲಿ ಬೇರೆ ರಾಜ್ಯಗಳ ಭಾಷೆಯ ಕುರಿತು ಸಾಕಷ್ಟು ಅಧ್ಯಯನ ಸಂಶೋಧನೆ ನಡೆಸುತ್ತಿದ್ದು, ಕನ್ನಡ ಕೇಂದ್ರ ಮಾತ್ರ ಇನ್ನೂ ಬಾಲಾವಸ್ಥೆಯಲ್ಲೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದಕ್ಕೆ ಕಾರಣಕರ್ತರು ಯಾರು ; (ಇದರ ಪೂರ್ಣ ಮಾಹಿತಿ ಒದಗಿಸುವುದು)

(ಊ) ಕನ್ನಡ ಶಾಸ್ತ್ರೀಯ ಭಾಷೆಯ ಸ್ಥಾನಮಾನ ಪಡೆದ ನಂತರ ಅಭಿವೃದ್ಧಿ ಮತ್ತು ಅಧ್ಯಯನಕ್ಕಾಗಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದಿಂದ ಹೆಚ್ಚಿನ ಅನುದಾನಕ್ಕಾಗಿ ಆಡಳಿತ ಮಂಡಳಿ ಸಲ್ಲಿಸಿರುವ ಪ್ರಸ್ತಾವನೆಯ ಕಾಗದ ಪತ್ರಗಳ ವ್ಯವಹಾರ ಪ್ರತಿಯನ್ನು ಹಾಗೂ ಆಡಳಿತ ಮಂಡಳಿಯ ಸದಸ್ಯರ ವಿವರಗಳನ್ನು ಒದಗಿಸುವುದು ?

## ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೩೮೩ (೪೩೪) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗಡಿ ಅಭಿವೃದ್ಧಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳೇನು ; ಪ್ರಸ್ತುತ ಎಷ್ಟು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ;

(ಆ) ಕಳೆದ ೩ ವರ್ಷದಿಂದ ಪ್ರಾಧಿಕಾರಕ್ಕೆ ಬಿಡುಗಡೆಯಾಗಿರುವ ಅನುದಾನವೆಷ್ಟು ; ಇದನ್ನು ಯಾವ ಯಾವ ಕಾರ್ಯಕ್ರಮಗಳಿಗೆ ಬಳಸಿಕೊಳ್ಳಲಾಗಿದೆ ಹಾಗೂ ಎಷ್ಟು ಸಂಘ ಸಂಸ್ಥೆಗಳಿಗೆ ಸಹಾಯಧನ ನೀಡಲಾಗಿದೆ ;

(ಇ) ಕಳೆದ ೩ ವರ್ಷಗಳಿಂದ ಹೊರ ರಾಜ್ಯದಲ್ಲಿರುವ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಾಧಿಕಾರದ ವತಿಯಿಂದ ಎಷ್ಟು ರಾಜ್ಯಗಳಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಹಾಗೂ ಇದಕ್ಕೆ ಎಷ್ಟು ಅನುದಾನ ಖರ್ಚಾಗಿದೆ ; (ಪತ್ಯೇಕವಾಗಿ ವಿವರಗಳನ್ನು ಒದಗಿಸುವುದು)

(ಈ) ಹೊರ ರಾಜ್ಯಗಳಲ್ಲಿರುವ ಕನ್ನಡ ಸಂಘಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಹಾಯಧನಕ್ಕಾಗಿ ಪ್ರಾಧಿಕಾರಕ್ಕೆ ಎಷ್ಟು ಕನ್ನಡ ಸಂಘಗಳು ಮನವಿ ಮಾಡಿಕೊಂಡಿದೆ ? (ಪೂರ್ಣ ವಿವರಗಳನ್ನು ಒದಗಿಸುವುದು)

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಧನ ಸಹಾಯಕ್ಕಾಗಿ ಸ್ವೀಕೃತಗೊಂಡ ಅರ್ಜಿಗಳ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೩೮೪ (೪೩೫) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ಸಂಘ ಸಂಸ್ಥೆಗಳಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಧನ ಸಹಾಯಕ್ಕಾಗಿ ಎಷ್ಟು ಅರ್ಜಿಗಳು ಬಂದಿವೆ ; (ಮಾಹಿತಿ ನೀಡುವುದು) ರಾಜ್ಯದಲ್ಲಿ ಎಷ್ಟು ಸಾಂಸ್ಕೃತಿಕ ಸಂಘ ಸಂಸ್ಥೆಗಳಿವೆ ;

(ಆ) ಇಲಾಖೆಯು ೨೦೨೪–೨೫ ನೇ ಸಾಲಿನ ಧನ ಸಹಾಯ ಮಂಜೂರಾತಿಗೆ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಂದ ಈವರೆಗೂ ಅರ್ಜಿ ಆಹ್ವಾನಿಸದಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಆಹ್ವಾನಿಸದಿರಲು ಇರುವ ಕಾರಣಗಳೇನು ;

(ಇ) ಕಳೆದ ೩ ವರ್ಷದಿಂದ ನಿಯಮಬದ್ಧವಾಗಿ ಸಂಘ ಸಂಸ್ಥೆಗಳು ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ್ದರೂ ಸಹ ಕೆಲವೊಂದು ಸಂಘ ಸಂಸ್ಥೆಗಳಿಗೆ (ಹೊರ ರಾಜ್ಯಗಳು ಒಳಗೊಂಡಂತೆ) ಸಹಾಯಧನ ನೀಡದಿರಲು ಕಾರಣಗಳೇನು ; ಸರ್ಕಾರದಿಂದ ಕಳೆದ ೪ ವರ್ಷದಿಂದ ಎಷ್ಟು ಅನುದಾನ ಬಿಡುಗಡೆಗೊಂಡಿದೆ ; (ವರ್ಷವಾರು ವಿವರಗಳನ್ನು ಒದಗಿಸುವುದು)

(ಈ) ಕಳೆದ ಮೂರು ವರ್ಷಗಳಿಂದ ಹೊರ ರಾಜ್ಯ ಕನ್ನಡ ಸಂಘ–ಸಂಸ್ಥೆಗಳಿಗೆ ನೀಡಲಾಗಿರುವ ಸಹಾಯಧನವೆಷ್ಟು ; ಹೊರ ರಾಜ್ಯ ಸಂಘ ಸಂಸ್ಥೆಗಳ ಮಾಹಿತಿ ಒದಗಿಸುವುದು ?

## ಗ್ರಾಮೀಣಾಭಿವೃದ್ಧಿ ಇಲಾಖೆಗೆ ಆಯವ್ಯಯದಲ್ಲಿ ಮೀಸಲಿಟ ಅನುದಾನದ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೮೫ (೪೩೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಎಷ್ಟು ಹಣ ಮೀಸಲಿಟ್ಟಿತ್ತು ; (ವರ್ಷವಾರು ವಿವರ ಒದಗಿಸುವುದು)

(ಆ) ಮೀಸಲಿಟ್ಟಿರುವ ಹಣದಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿವರ ಒದಗಿಸುವುದು)

(ಇ) ಬಂದ ಅನುದಾನದಲ್ಲಿ ಇದುವರೆಗೂ ಎಷ್ಟು ಅನುದಾನವನ್ನು ವೆಚ್ಚ ಮಾಡಲಾಗಿದೆ ; ಯಾವ ಯಾವ ಯೋಜನೆಗೆ ವೆಚ್ಚ ಮಾಡಲಾಗಿದೆ ;

(ಈ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಗ್ರಾಮೀಣಾಭಿವೃದ್ಧಿ ಇಲಾಖೆಯಲ್ಲಿ ಎಷ್ಟು ಎಲ್ ಓ ಸಿ ಪಾವತಿ ಮಾಡಲಾಗಿದೆ ;

(ಉ) ಇಲಾಖೆ ವತಿಯಿಂದ ರಸ್ತೆ ಅಭಿವೃದ್ಧಿ ಮತ್ತು ಡಾಂಬರೀಕರಣ ಹೊರತುಪಡಿಸಿ ಇತರ ಯಾವ ಮೂಲಭೂತ ಸೌಕರ್ಯಗಳಿಗೆ ಅನುದಾನವನ್ನು ನೀಡಲಾಗಿದೆ ?

## ಮನರೇಗಾ ಯೋಜನೆಯ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) :–**

೩೮೬ (೪೩೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮನರೇಗಾ ಯೋಜನೆಗೆ ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಅನುದಾನ ಎಷ್ಟು ; (೨೦೧೪ ರಿಂದ ೨೦೨೫ರ ವರೆಗೆ ವಾರ್ಷಿಕ ವಾರು ಮಾಹಿತಿ ಒದಗಿಸುವುದು)

(ಆ) ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಇದುವರೆಗೂ ಬರಬೇಕಾದ ಬಾಕಿ ಅನುದಾನ ಎಷ್ಟು ; ಮನರೇಗಾ ಕಾಮಗಾರಿಗಳಿಗೆ ರಾಜ್ಯದಿಂದ ಪಾವತಿಸಬೇಕಾದ ಬಾಕಿ ಅನುದಾನ ಎಷ್ಟು ;

(ಇ) ಮನರೇಗಾ ಯೋಜನೆಯಡಿ ಅಕ್ರಮ ಎಸಗಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಪ್ರಕರಣಗಳಿಗೆ ಕ್ರಮ ಕೈಗೊಳ್ಳಲಾಗಿದೆ ;

(ಈ) ಮನರೇಗಾ ಯೋಜನೆ ಅಡಿ ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೊರಗುತ್ತಿಗೆ ನೌಕರರಿಗೆ ಇಲ್ಲಿಯವರೆಗೆ ವೇತನ ಹಾಗೂ ಪ್ರಯಾಣ ಭತ್ಯೆ ನೀಡಲಾಗಿದೆಯೇ ? (ಜಿಲ್ಲಾವಾರು ಮಾಹಿತಿ ಒದಗಿಸುವುದು)

## ಪತ್ರಿಕಾ ವರದಿಗಾರರಿಗೆ ಕಾರ್ಮಿಕ ಇಲಾಖೆಯಿಂದ ನೀಡುವ ಸೌಲಭ್ಯದ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) :–**

೩೮೭ (೪೪೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾಧ್ಯಮ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಿಕಾ ಮಾನ್ಯತಾ ಚೀಟಿ ಹೊಂದಿಲ್ಲದ ವರದಿಗಾರರು ಹಾಗೂ ಕ್ಯಮೆರಾ ಮೆನ್‌ಗಳಿಗೆ ಕಾರ್ಮಿಕ ಇಲಾಖೆಯಿಂದ ಕಲ್ಪಿಸಿರುವ ಸೌಲಭ್ಯಗಳು ಯಾವುದು ;

(ಆ) ಕಾರ್ಮಿಕ ಇಲಾಖೆಯಡಿ ಅಸಂಘಟಿತ ಕಾರ್ಮಿಕರಿಗೆ ಒದಗಿಸಲಾಗಿರುವ ಸೌಲಭ್ಯಗಳನ್ನು ಇದುವರೆಗೆ ಒದಗಿಸುವ ಚಿಂತನೆ ಸರ್ಕಾರದ ಮುಂದಿದೆಯೇ ?

## ರಾಜ್ಯದ ಕೃಷಿ ವಿಶ್ವವಿದ್ಯಾಲಗಳ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) :–**

೩೮೮ (೪೪೧) ಮಾನ್ಯ ಕೃಷಿ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ :–

ರಾಜ್ಯದಲ್ಲಿ ಎಷ್ಟು ಕೃಷಿ ವಿಶ್ವವಿದ್ಯಾಲಯಗಳು ಚಾಲ್ತಿಯಲ್ಲಿವೆ ; ಇಲ್ಲಿ ಅಗತ್ಯವಿರುವ ಭೌತಿಕ ಬೋಧಕರು ಮತ್ತು ಬೋಧಕೇತರ ಹುದ್ದೆಯ ಸಂಖ್ಯೆ ಎಷ್ಟು ; ಪ್ರಸ್ತುತ ಎಷ್ಟು ಹುದ್ದೆ ಖಾಲಿ ಇವೆ ; ಈ ಹುದ್ದೆಗಳನ್ನು ಭರ್ತಿ ಮಾಡಲು ಕೈಗೊಂಡಿರುವ ಕ್ರಮಗಳೇನು ?

## ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವ್ಯಾಸಂಗಕ್ಕಾಗಿ ಸರ್ಕಾರದ ಕಾರ್ಯಕ್ರಮಗಳ ಕುರಿತು

**ಶ್ರೀ ಶಿವಕುಮಾರ್ ಕೆ. (ನಾಮನಿರ್ದೇಶನ ಹೊಂದಿದವರು) :–**

೩೮೯ (೪೪೨) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಉನ್ನತ ವ್ಯಾಸಂಗಕ್ಕಾಗಿ ಸರ್ಕಾರ ರೂಪಿಸಿರುವ ವಿದ್ಯಾರ್ಥಿ ವೇತನ ಸಂಬಂಧ ಕಾರ್ಯಕ್ರಮಗಳು ಯಾವುದು ಹಾಗೂ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗುತ್ತಿದೆ ;

(ಆ) ಐ.ಎ.ಎಸ್ ಮತ್ತು ಕೆ.ಎ.ಎಸ್ ತರಬೇತಿಗೆ ಎಷ್ಟು ಸಂಸ್ಥೆಗೆ ಯಾವ ಮಾನದಂಡದ ಆಧಾರದಲ್ಲಿ ಕಾರ್ಯಾದೇಶ ನೀಡಲಾಗಿದೆ ; ಇದಕ್ಕಾಗಿ ಒದಗಿಸಿರುವ ಅನುದಾನದ ವಿವರ ನೀಡುವುದು ;

(ಇ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ವಿದೇಶಿ ವ್ಯಾಸಂಗಕ್ಕೆ ಎಷ್ಟು ಅರ್ಜಿಗಳು ಆಹ್ವಾನಿತವಾಗಿದ್ದವು ; ಇಲ್ಲಿಯವರೆಗೆ ವಿದೇಶಿ ವ್ಯಾಸಂಗಕ್ಕಾಗಿ ಎಷ್ಟು ವಿದ್ಯಾರ್ಥಿಗಳಿಗೆ ಎಷ್ಟು ಅನುದಾನ ನೀಡಲಾಗಿದೆ ?

## ಕಲ್ಯಾಣ ಕರ್ನಾಟಕದಲ್ಲಿ ಕಲುಷಿತ ನೀರಿನಿಂದ ಆಗುತ್ತಿರುವ ಸಾವುಗಳ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೩೯೦ (೪೪೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ನೀರಿನಲ್ಲಿ ನೈಸರ್ಗಿಕವಾಗಿ ಆರ್ಸೆನಿಕ್ ಮತ್ತು ಫ್ಲೋರೈಡ್ ಅಂಶ ಹೆಚ್ಚಿರುವ ಕಾರಣದಿಂದ ಐದು ವರ್ಷಗಳಲ್ಲಿ ಆಗಿರುವ ಸಾವುಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಆ) ಈ ಭಾಗದ ಏಳು ಜಿಲ್ಲೆಗಳಲ್ಲಿ ಸ್ಥಾಪಿಸಿದ ಶುದ್ಧ ಕುಡಿಯುವ ನೀರಿನ ಘಟಕಗಳಲ್ಲಿ ಅರ್ಧದಷ್ಟು ಘಟಕಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವುಗಳನ್ನು ಪುನಃ ಪ್ರಾರಂಭಿಸಲು ಕೈಗೊಂಡಿರುವ ಕ್ರಮಗಳೇನು ;

(ಇ) ಕಲುಷಿತ ನೀರಿನಿಂದ ಈ ಭಾಗದ ಜನರು ಡೆಂಗ್ಯೂ, ಅತಿಸಾರ, ಟೈಫಾಯಿಡ್, ಹೆಪಟೈಟಿಸ್–ಎ ಅಂತಹ ಮಾರಕ ರೋಗಗಳಿಗೆ ಬಲಿಯಾಗುತ್ತಿರುವುದರಿಂದ ಈ ಕುರಿತು ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಈ ನಿಟ್ಟಿನಲ್ಲಿ ಗ್ರಾಮ ಪಂಚಾಯಿತಿಯ ಪ್ರತಿನಿಧಿಗಳು ಮತ್ತು ಆಡಳಿತ ಸಿಬ್ಬಂದಿಯ ಸೇವೆಯನ್ನು ಬಳಸಲಾಗುತ್ತಿದೆಯೇ ?

## ಕಲಬುರಗಿಯಲ್ಲಿ ಆರಂಭಿಸಿರುವ ತೊಗರಿ ಮಂಡಳಿಯ ಕಾಯಕಲ್ಪ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೩೯೧ (೪೪೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಆರ್ಥಿಕತೆಯ ಬೆನ್ನೆಲುಬಾದ ತೊಗರಿ ಬೆಳೆಯನ್ನು ಪ್ರತಿ ವರ್ಷ ಎಷ್ಟು ಹೆಕ್ಟೇರ್‌ನಲ್ಲಿ ಬೆಳೆಯಲಾಗುತ್ತಿದೆ ; (ಐದು ವರ್ಷಗಳ ವಿವರ ನೀಡುವುದು)

(ಆ) ಜಿಲ್ಲೆಯ ತೂಗರಿ ಬೆಳೆಗಾರರಿಗೆ ಉತ್ತೇಜನ ನೀಡಲು ಸ್ಥಾಪನೆಯಾದ ತೊಗರಿ ಮಂಡಳಿಗೆ ಒದಗಿಸಿದ ಸಿಬ್ಬಂದಿ ಮತ್ತು ಭೌತಿಕ ಸೌಕರ್ಯಗಳೇನು ; (ವಿವರ ನೀಡುವುದು)

(ಇ) ಜಿಲ್ಲೆಯ ತೊಗರಿ ಮಂಡಳಿಯು ಅನುದಾನ ಮತ್ತು ಇತರೆ ಸೌಕರ್ಯಗಳ ಕೊರತೆಯಿಂದ ಬಳಲುತ್ತಿದ್ದು, ಮಂಡಳಿಗೆ ಕಾಯಕಲ್ಪ ನೀಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಉತ್ಕೃಷ್ಟ ತೊಗರಿ ಬೆಳೆಯುವ ಕಲಬುರಗಿ ಜಿಲ್ಲೆಗೆ ಒಂದು ಬ್ರಾಂಡಿಂಗ್ ಹಂತಕ್ಕೆ ಒಯ್ದು ಅಲ್ಲಿನ ರೈತರ ಬದುಕಿಗೆ ಆಧಾರವಾಗಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳಲಿದೆ ?

## ಧಾರವಾಡದಲ್ಲಿ ಡಾ: ಗಂಗೂಬಾಯಿ ಹಾನಗಲ್ ಹುಟ್ಟಿದ ಮನೆ ಪಾಳು ಬಿದ್ದಿರುವ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೩೯೨ (೪೪೫) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇಡೀ ವಿಶ್ವಕ್ಕೆ ಹಿಂದುಸ್ತಾನಿ ಸಂಗೀತದ ಇಂಪು ನೀಡಿದ ಹೆಮ್ಮೆಯ ಡಾ: ಗಂಗೂಬಾಯಿ ಹಾನಗಲ್ ಹುಟ್ಟಿದ ಧಾರವಾಡ ಮನೆ ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ೨೦೦೭ ರಲ್ಲಿ ಕರ್ನಾಟಕ ಸರ್ಕಾರ ಆ ಮನೆಯನ್ನು ಖರೀದಿ ಮಾಡಿ ವಸ್ತು ಸಂಗ್ರಹಾಲಯವಾಗಿ ಪರಿವರ್ತಿಸಿ, ಈಗ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮನೆ ತುಂಬೆಲ್ಲ ಜೇಡರ ಬಲೆ, ಹಾವು–ಚೇಳು, ಬೀದಿ ನಾಯಿಗಳು ಮುರಿದು ಬಿದ್ದ ನಾಮಫಲಕ (ಬೋರ್ಡ್) ಇದೆಲ್ಲಾ ತುಂಬಿರುವ ಖ್ಯಾತ ಸಂಗೀತಗಾರ್ತಿ ಹುಟ್ಟಿದ ಮನೆಗೆ ಪುನರುಜೀವನ ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ;

(ಈ) ಈ ವಸ್ತು ಸಂಗ್ರಹಾಲಯವನ್ನು ತಕ್ಷಣವೇ ದುರಸ್ತಿಗೊಳಿಸಿ ಸಾರ್ವಜನಿಕರಿಗೆ ಮತ್ತು ಡಾ: ಗಂಗೂಬಾಯಿ ಹಾನಗಲ್ ಅಭಿಮಾನಿಗಳಿಗೆ ಅವರು ಹುಟ್ಟಿದ ಮನೆ ನೋಡಿ ಸಂತೋಷಪಡಲು ಬೇಕಾದ ಯಾವ ಕ್ರಮಗಳನ್ನು ಸರ್ಕಾರ ಕೈಗೊಳ್ಳುವುದು ?

## ಗಡಿನಾಡ ಕನ್ನಡಿಗರ ಹಿತರಕ್ಷಣೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೩ (೪೪೭) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೆರೆ ರಾಜ್ಯವಾದ ಕೇರಳ ಸರ್ಕಾರ ತನ್ನ ಕನ್ನಡ ವಿರೋಧಿ ಧೋರಣೆಯನ್ನು ಮುಂದುವರೆಸಿದ್ದು, ಗಡಿನಾಡಾಗಿರುವ ಕಾಸರಗೋಡು ಕನ್ನಡಿಗರ ಮೇಲೆ ಮಲಯಾಳಿ ಹೇರಿಕೆಯ ಪ್ರಯತ್ನ ನಡೆಯುತ್ತಲೇ ಇದ್ದು, ಅದರ ಭಾಗವಾಗಿ ಈಗ ಕೇರಳ ಸರ್ಕಾರ ರಾಜ್ಯದಲ್ಲಿ ಮಲಯಾಳಿ ಭಾಷಾ ಮಸೂದೆಯ ಜಾರಿಗೆ ಮುಂದಾಗಿರುವುದರಿಂದ ಗಡಿನಾಡ ಕನ್ನಡಿಗರು ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯವನ್ನೇ ಕಳೆದುಕೊಳ್ಳಲಿದ್ದು, ಗಡಿನಾಡಿನ ಭಾಷಾ ಅಲ್ಪಸಂಖ್ಯಾತರ ಮೂಲಭೂತ ಹಕ್ಕನ್ನೇ ಕಳೆದುಕೊಳ್ಳುವ ಸಂಕಷ್ಟಕ್ಕೆ ಅವರನ್ನು ದೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕರ್ನಾಟಕ ಸರ್ಕಾರ ಗಡಿನಾಡ ಕನ್ನಡಿಗರ ರಕ್ಷಣೆಯ ತನ್ನ ಹೊಣೆಗಾರಿಕೆಯನ್ನು ನಿಭಾಯಿಸುವಲ್ಲಿ ಇದುವರೆಗೆ ಯಾವುದೇ ಬದ್ಧತೆ ಮತ್ತು ಇಚ್ಛಾಶಕ್ತಿಯನ್ನು ಪ್ರದರ್ಶಿಸದಿರಲು ಕಾರಣಗಳೇನು ;

(ಇ) ಈ ರೀತಿಯಲ್ಲಿ ಗಡಿನಾಡ ಕನ್ನಡಿಗರ ಮೂಲಭೂತ ಹಕ್ಕಿಗೆ ಕೊಡಲಿ ಪೆಟ್ಟು ಹಾಕುವ ದುಸ್ಸಾಹಸಕ್ಕೆ ಇಳಿದಿರುವ ಕೇರಳ ಸರ್ಕಾರಕ್ಕೆ ತನ್ನ ವಿರೋಧ, ಪ್ರತಿಭಟನೆ ಸೂಚಿಸುವುದರ ಜೊತೆಗೆ ಗಡಿನಾಡ ಕನ್ನಡಿಗರ ಹಿತರಕ್ಷಣೆಯ ಹೊಣೆಗಾರಿಕೆ ತನ್ನ ಆದ್ಯ ಕರ್ತವ್ಯ ಎಂಬ ಸ್ಪಷ್ಟ ನಿಲುವು ತಿಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಗಡಿನಾಡ ಕನ್ನಡಿಗರ ಹಿತರಕ್ಷಣೆ ಹಾಗೂ ಸಮಸ್ತ ಕನ್ನಡಿಗರ ಅಸ್ಮಿತೆಯ ಪ್ರಶ್ನೆಯಾಗಿರುವ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಗಡಿನಾಡ ಕನ್ನಡಿಗರಿಗೆ ತಮ್ಮ ಮಾತೃಭಾಷಾ ಕಲಿಕೆಯ ಸ್ವಾತಂತ್ರ್ಯದ ಹಕ್ಕನ್ನು ದೊರಕಿಸಿಕೊಡಲು ಸರ್ಕಾರ ಈ ಕೂಡಲೇ ಅಗತ್ಯ ಹಾಗೂ ತ್ವರಿತ ಕ್ರಮ ವಹಿಸುವುದೇ ?

# ಮಕ್ಕಳು ಆನ್‌ಲೈನ್ ಗೀಳಿಗೆ ಸಿಲುಕುತ್ತಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೪ (೪೪೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧೪ ರಿಂದ ೧೮ ವರ್ಷದ ಮಕ್ಕಳು ಅತಿಹೆಚ್ಚು ಆನ್‌ಲೈನ್ ಗೀಳಿಗೆ ಸಿಲುಕುತ್ತಿರುವ ಆಘಾತಕಾರಿ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಮಕ್ಕಳ ಆನ್‌ಲೈನ್ ಸುರಕ್ಷತೆ ಕುರಿತು ಕಾರ್ಯಾಚರಣೆ ವಿಧಾನವನ್ನು ರೂಪಿಸುವ ತುರ್ತು ಅಗತ್ಯವಿದ್ದರೂ ಸರ್ಕಾರ ಇದುವರೆಗೆ ಈ ಕುರಿತು ಅಗತ್ಯ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ಮಕ್ಕಳು ಇತ್ತೀಚೆಗೆ ಅತಿಹೆಚ್ಚು ಆನ್‌ಲೈನ್ ಗೀಳಿಗೆ ಒಳಗಾಗುತ್ತಿರುವುದನ್ನು ತಪ್ಪಿಸಲು ಸರ್ಕಾರ ಇದುವರೆಗೆ ಕೈಗೊಂಡಿರುವ ಪರಿಹಾರಗಳೇನು ;

(ಈ) ಅತಿಯಾದ ಆನ್‌ಲೈನ್ ಗೀಳು ಲಕ್ಷಾಂತರ ಮಕ್ಕಳ ಮೇಲೆ ನಕಾರತ್ಮಕ ಪರಿಣಾಮ ಬೀರುತ್ತಿರುವ ಸಂಕೀರ್ಣ ಸಮಸ್ಯೆಯಾಗಿದ್ದು, ಮಕ್ಕಳ ದೈಹಿಕ, ಭಾವನಾತ್ಮಕ ಮತ್ತು ಮಾನಸಿಕ ಯೋಗಕ್ಷೇಮದ ಮೇಲೆ ದೂರಗಾಮಿ ಪರಿಣಾಮ ಬೀರುತ್ತಿದ್ದು, ಮಕ್ಕಳು ಬಳಸುವ ಮೊಬೈಲ್‌ಗಳಲ್ಲಿ ಅಸುರಕ್ಷಿತ, ಅಶ್ಲೀಲ App ಗಳಿಗೆ ಸಂಪೂರ್ಣವಾಗಿ ಕಡಿವಾಣ ಹಾಕಲೇಬೇಕಾದ ಕುರ್ತು ಅನಿವಾರ್ಯತೆ ಸೃಷ್ಟಿಯಾಗಿದ್ದು, ಈ ಕುರಿತು ಸರ್ಕಾರ ವಹಿಸಿರುವ ಕ್ರಮಗಳೇನು ;

(ಉ) ಮಕ್ಕಳ ಆನ್‌ಲೈನ್ ಗೀಳಿನ ಪರಿಣಾಮಕಾರಿ ತಡೆಗೆ ಕಾರ್ಯಪಡೆ ರಚನೆ, ಮಕ್ಕಳ ಸುರಕ್ಷತೆಯನ್ನು ಆನ್‌ಲೈನ್‌ನಲ್ಲಿ ಖಚಿತಪಡಿಸಿಕೊಳ್ಳಲು ಜಾಗೃತಿ ಮೂಡಿಸುವುದು, ಡಿಜಿಟಲ್

ಸಾಕ್ಷರತೆ, ವಯಸ್ಸಿಗೆ ಅನುಗುಣವಾಗಿ ಟೂಲ್‌ಕಿಟ್ ಅಭಿವೃದ್ಧಿ ಸೇರಿದಂತೆ ಮಕ್ಕಳಿಗೆ ಅತ್ಯಂತ ಸುರಕ್ಷಿತ ಡಿಜಿಟಲ್ ಪರಿಸರವನ್ನು ಸೃಷ್ಟಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಕಾರ್ಮಿಕರಿಗೆ ಸಂಬಂಧಿಸಿದ ಯೋಜನೆಗಳ ಟೆಂಡರ್‌ಗಳ ಮರು ಪರಿಶೀಲನೆ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೫ (೪೪೯) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರಿಗೆ ಆರ್.ಪಿ.ಎಲ್. ತರಬೇತಿಯನ್ನು ನಡೆಸುತ್ತಿದ್ದು, ಸದರಿ ತರಬೇತಿಯನ್ನು ಮಾನದಂಡಗಳಿಗೆ ಅನುಗುಣವಾಗಿ ಸರಿಯಾಗಿ ನಿರ್ವಹಿಸದೆ, ಕಾರ್ಮಿಕರಿಗೆ ನೈಜವಾಗಿ ಸಿಗಬೇಕಾದ ತರಬೇತಿಯನ್ನು ಸಹ ನೀಡದೆ ಮಂಡಳಿಗೆ ಹಾಗೂ ಕಾರ್ಮಿಕರಿಗೆ ವಂಚಿಸುತ್ತಿರುವುದಾಗಿ ಜಿಲ್ಲೆಯಾದ್ಯಂತ ಹಲವು ಕಾರ್ಮಿಕರಿಂದ ದೂರುಗಳು ಕೇಳಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಅದೇ ರೀತಿಯಲ್ಲಿ ಕಟ್ಟಡ ನಿರ್ಮಾಣ ಕಾರ್ಮಿಕರು ಹಾಗೂ ಅವರ ಅವಲಂಬಿತರಿಗೆ ಒದಗಿಸುವ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್‌ಅಪ್ ಯೋಜನೆಯಲ್ಲಿಯೂ ಕೂಡ ಕಾರ್ಮಿಕರಿಗೆ ಸರಿಯಾದ ತಪಾಸಣೆ ನಡೆಸದಿರುವುದು ಹಾಗೂ ತಪಾಸಣೆ ಮಾಡಿದ ನಂತರ ತಪಾಸಣೆಯ ವರದಿಯನ್ನು ಕಾರ್ಮಿಕರಿಗೆ ನೀಡದಿರುವುದು ಹಾಗೂ ಕಾರ್ಮಿಕರು ಕೆಲವೊಂದು ಖಾಯಿಲೆಗಳಿಂದ ಬಳಲುತ್ತಿದ್ದರೂ ಸದರಿ ತಪಾಸಣೆಯ ವರದಿಗಳಲ್ಲಿ ಆ ರೋಗದ ಬಗ್ಗೆ ಯಾವುದೇ ಉಲ್ಲೇಖ ಮಾಡದಿರುವುದರ ಬಗ್ಗೆ ಹಲವಾರು ಕಾರ್ಮಿಕರಿಂದ ಸತತವಾಗಿ ದೂರುಗಳು ಕೇಳಿ ಬಂದಿದ್ದು ಈ ಕುರಿತು ಸರ್ಕಾರ ವಹಿಸಿರುವ ಕ್ರಮಗಳೇನು ;

(ಇ) ಕಟ್ಟಡ ಕಾರ್ಮಿಕರ ಹಿತದೃಷ್ಟಿಯಿಂದ ಆರ್.ಪಿ.ಎಲ್ ತರಬೇತಿ ಟೆಂಡರ್ ಹಾಗೂ ಪ್ರಿವೆಂಟಿವ್ ಹೆಲ್ತ್ ಕೇರ್ ಚೆಕ್‌ಅಪ್ ಯೋಜನೆಯ ಟೆಂಡರ್‌ಗಳ ಮರು ಪರಿಶೀಲನೆಗೆ ಸರ್ಕಾರ ಈ ಕೂಡಲೇ ಮುಂದಾಗುವುದೇ ?

## ಕಾರ್ಮಿಕರು ತಮ್ಮದಲ್ಲದ ತಪ್ಪಿಗೆ ಸಹಾಯಧನಗಳಿಂದ ವಂಚಿತರಾಗುತ್ತಿರುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೩೯೬ (೪೫೦) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯು ನೂತನವಾಗಿ ಅಭಿವೃದ್ಧಿ ಪಡಿಸಿದ ತಂತ್ರಾಂಶದಲ್ಲಿ ತಾಂತ್ರಿಕ ದೋಷ ಇದ್ದ ಕಾರಣ, ದಿನಾಂಕ:೧೭.೧೦.೨೦೨೩ ರಿಂದ ದಿನಾಂಕ: ೧೦.೦೬.೨೦೨೪ರವರೆಗೆ ಕಾರ್ಮಿಕರಿಗೆ ತಮ್ಮ ಗುರುತಿನ ಚೀಟಿಯ ನವೀಕರಣ ಮಾಡಲು ಸಾಧ್ಯವಾಗದಿರುವುದರಿಂದ ಹಲವಾರು ಕಾರ್ಮಿಕರು ವಿವಿಧ ಸಹಾಯಧನಗಳಿಗೆ ನಿಗಧಿತ ಅವಧಿಯೊಳಗೆ ಅರ್ಜಿ ಸಲ್ಲಿಸಲು ಸಾಧ್ಯವಾಗದೆ ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅರ್ಜಿ ಸಲ್ಲಿಸಲು ಸಾಧ್ಯವಾಗದವರಿಗೆ ಮಂಡಳಿಯು ಹೆಚ್ಚುವರಿ ಕಾಲಾವಕಾಶವನ್ನು ನೀಡಿದ್ದು, ಆಗ ಅರ್ಜಿ ಸಲ್ಲಿಸಿದವರಿಗೆ ಹಲವಾರು ಆರ್ಥಿಕವಾದ ಕಾರಣಗಳನ್ನು ನೀಡಿ ಮದುವೆಯ ಸಹಾಯಧನವನ್ನು ತಿರಸ್ಕೃತಗೊಳಿಸಿದ್ದು ಹಲವಾರು ಕಾರ್ಮಿಕರಿಗೆ ಅನ್ಯಾಯವಾಗಿರುವುದನ್ನು ಸರಿಪಡಿಸಲು ಸರ್ಕಾರ ವಹಿಸಿರುವ ಕ್ರಮಗಳೇನು ;

(ಇ) ತಾಂತ್ರಿಕ ದೋಷ ಇದ್ದ ಅವಧಿಯಲ್ಲಿ ನವೀಕರಣ ಇಲ್ಲದೇ ಇರುವ ಕಾರ್ಮಿಕರು ನಂತರದಲ್ಲಿ ಅರ್ಜಿ ಸಲ್ಲಿಸಿದ್ದು ಈ

ಕಾರ್ಮಿಕರಿಗೆ ಯಾವುದೇ ಕಾರಣಕ್ಕೂ ಸಹಾಯಧನವನ್ನು ನಿರಾಕರಿಸದೆ ಮಂಜೂರು ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

## ಗ್ರಾಮ ಪಂಚಾಯಿತಿಗಳಲ್ಲಿ ಸ್ವಂತ ನಿವೇಶನ ಹಾಗೂ ಕಟ್ಟಡಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯೭ (೪೫೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

(ಅ) ರಾಜ್ಯದ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಸ್ವಂತ ನಿವೇಶನ ಹಾಗೂ ಸ್ವಂತ ಕಟ್ಟಡಗಳಿವೆ ; ಸ್ವಂತ ಕಟ್ಟಡಗಳಿಲ್ಲದ ಗ್ರಾಮ ಪಂಚಾಯಿತಿಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಅನುದಾನವನ್ನು ಯಾವ ಮಾನದಂಡದಡಿ ಮಂಜೂರು ಮಾಡಲಾಗುತ್ತಿದೆ ; (ಸಂಪೂರ್ಣ ವಿವರ ಒದಗಿಸುವುದು)

(ಆ) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯಿತಿಗಳಿಗೆ ಸ್ವಂತ ನಿವೇಶನ ಹಾಗೂ ಸ್ವಂತ ಕಟ್ಟಡಗಳಿವೆ ; ಈ ಜಿಲ್ಲೆಗಳಲ್ಲಿ ಸ್ವಂತ ಕಟ್ಟಡಗಳಿಲ್ಲದೆ ಎಷ್ಟು ಗ್ರಾಮ ಪಂಚಾಯಿತಿಗಳಿಗೆ ಕಟ್ಟಡ ನಿರ್ಮಾಣಕ್ಕಾಗಿ ಅನುದಾನ ಮಂಜೂರು ಮಾಡಲಾಗಿದೆ ; ಉಳಿದವುಗಳಿಗೆ ಯಾವ ಕಾಲಮಿತಿಯೊಳಗೆ ಸ್ವಂತ ನಿವೇಶನ ಪಡೆಯಲು ಮತ್ತು ಕಟ್ಟಡ ನಿರ್ಮಿಸಲು ಅನುದಾನವನ್ನು ಮಂಜೂರು ಮಾಡಲು ಕ್ರಮ ವಹಿಸಲಾಗುವುದು ;

(ಇ) ಗ್ರಾಮ ಪಂಚಾಯಿತಿಗಳಲ್ಲಿ ಸಮರ್ಪಕ ಮೂಲಭೂತ ಸೌಲಭ್ಯ ನೀಡಲು ಹಾಗೂ ಆಡಳಿತ ವೆಚ್ಚವನ್ನು ಕಡಿಮೆ ಮಾಡಲು ೧೫ಕಿಂತ

ಕಡಿಮೆ ಸದಸ್ಯರಿರುವ ಗ್ರಾಮ ಪಂಚಾಯಿತಿಗಳನ್ನು ಒಗ್ಗೂಡಿಸಿ ಗ್ರಾಮ ಪಂಚಾಯಿತಿಗಳಾಗಿ ಮರುವರ್ಗೀಕರಿಸಲು ಯಾವ ಕಾಲಮಿತಿಯೊಳಗೆ ಕ್ರಮ ಕೈಗೊಳ್ಳಲಾಗುವುದು ;

(ಈ) ಸ್ವಂತ ನಿವೇಶನ ಪಡೆಯಲು ಹಾಗೂ ಇತರ ಸಾರ್ವಜನಿಕ ಆಸ್ತಿ ಸೃಜನೆಗಾಗಿ ಗ್ರಾಮ ವಂಚಾಯಿತಿಗಳಿಂದ ಕಂದಾಯ ಇಲಾಖೆಗೆ ಸಲ್ಲಿಸಲಾದ ಒಟ್ಟು ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಈ ಪೈಕಿ ಜಿಲ್ಲಾಧಿಕಾರಿಗಳಿಂದ ಮಂಜೂರಾಗಿ ಪಹಣಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಬಾಕಿ ಪ್ರಕರಣಗಳಲ್ಲಿ ಯಾವ ಕಾಲಮಿತಿಯೊಳಗೆ ಪಹಣಿಯಲ್ಲಿ ಗ್ರಾಮ ಪಂಚಾಯಿತಿಯ ಹೆಸರನ್ನು ದಾಖಲಿಸಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ?

## ಇ–ಸ್ವತ್ತು ೨.೦ ತಂತ್ರಾಂಶದ ಆಡಳಿತಾತ್ಮಕ ಮತ್ತು ತಾಂತ್ರಿಕ ತೊಂದರೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೬೮ (೪೫೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಇ–ಸ್ವತ್ತು ೨.೦ ತಂತ್ರಾಂಶ ಜಾರಿಯಾದ ದಿನಾಂಕದಿಂದ ಈವರೆಗೆ ವಿತರಿಸಲಾದ ಇ–ಸ್ವತ್ತು ನಮೂನೆ ೯, ೧೧ಎ ಹಾಗೂ ೧೧ಬಿ ಖಾತೆಗಳ ಸಂಖ್ಯೆ ಎಷ್ಟು ; ಎಷ್ಟು ಜಿಲ್ಲೆಗಳಲ್ಲಿ ಇ–ಸ್ವತ್ತು ನಮೂನೆ ಮೂಲಕ ವಿತರಣೆ ಮಾಡಲಾಗಿದೆ, ಪ್ರಸ್ತುತ ಇ–ಸ್ವತ್ತು ನಮೂನೆಗಳ ವಿತರಣೆ ಸಂಖ್ಯೆಯಲ್ಲಿ ಕಡಿಮೆಯಾಗಲು ಕಾರಣಗಳೇನು ;

(ಆ) ಇ–ಸ್ವತ್ತು ೨.೦ ತಂತ್ರಾಂಶ ಜಾರಿಯಾದ ಬಳಿಕ ಜಿಲ್ಲಾ ಪಂಚಾಯಿತಿ ಕಛೇರಿಗಳಲ್ಲಿ ಹಾಗೂ ಹೆಲ್ಪ್ ಲೈನ್‌ಗಳ ಮೂಲಕ ಸ್ವೀಕೃತವಾದ

ಒಟ್ಟು ದೂರುಗಳೆಷ್ಟು; ಆ ಪೈಕಿ ಪರಿಹಾರ ಒದಗಿಸಲಾಗಿರುವ ದೂರುಗಳ ಸಂಖ್ಯೆ ಎಷ್ಟು; ಪರಿಹರಿಸಲು ಬಾಕಿ ಇರುವ ದೂರುಗಳೆಷ್ಟು;

(ಇ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಇ-ಸ್ವತ್ತು ೨.೦ ತಂತ್ರಾಂಶದ ತಾಂತ್ರಿಕ ದೋಷಗಳಿಗೆ ಸಂಬಂಧಿಸಿದಂತೆ ಸ್ವೀಕೃತವಾದ ದೂರುಗಳಿಗೆ ಯಾವ ರೀತಿಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲಾಗಿದೆ; ಸಮಸ್ಯೆಗಳನ್ನು ಬಗೆಹರಿಸಲು ಯಾವ ಕಾಲಮಿತಿಯನ್ನು ನಿಗದಿಪಡಿಸಿದೆ;

(ಈ) ಇ-ಸ್ವತ್ತು ಜಾರಿಯಾದಾಗಿನಿಂದ ಈವರೆಗೆ ಕಡಿಮೆ ರಸ್ತೆ ಅಗಲ, ಜಾಗದ ಮಾಲಿಕತ್ವ, ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಭೂಪರಿವರ್ತನೆ ಮಾಡಲಾಗದೆ ಕೃಷಿ ಭೂಮಿಯಲ್ಲಿ ನಿರ್ಮಾಣಗೊಂಡು ಕಟ್ಟಡ ಸಂಖ್ಯೆ/ವಿದ್ಯುತ್ ಸಂಪರ್ಕ ಪಡೆದಿದ್ದರೂ ಆಸ್ತಿ ದಾಖಲೆಯಿಲ್ಲದ ಮನೆಗಳು/ಕಟ್ಟಡಗಳಿಗೆ ನಮೂನೆ ೧೧ಬಿ ಖಾತೆ ನೀಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಇಂತಹ ಆಸ್ತಿಗಳನ್ನು ತಂತ್ರಾಂಶದಲ್ಲಿ ದಾಖಲಿಸಲು ಯಾವಾಗ ಅವಕಾಶ ಕಲ್ಪಿಸಲಾಗುವುದು; ಇವುಗಳನ್ನು ಅಧಿಕೃತ ಆಸ್ತಿಗಳಾಗಿ ಪರಿವರ್ತಿಸಲು ಸರ್ಕಾರದ ನೀತಿ/ಯೋಜನೆಗಳಾವುವು;

(ಉ) ಪ್ರಸ್ತುತ ಇ-ಸ್ವತ್ತು ವ್ಯವಸ್ಥೆಯಡಿ ವಿವಿಧ ಆಸ್ತಿ ವರ್ಗಗಳಿಗೆ ಅನುಗುಣವಾಗಿ ಸಲ್ಲಿಸಬೇಕಾದ ದಾಖಲೆಗಳು ಯಾವುವು; ಈ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗಳು ಪ್ರಾಯೋಗಿಕವಾಗಿ ಹಾಗೂ ಸಮರ್ಪಕವಾಗಿ ವಿತರಿಸುತ್ತಿವೆಯೇ; ಇದರಿಂದಾಗಿ ತಂತ್ರಾಂಶದಲ್ಲಿ ಉಂಟಾಗಿರುವ ಅಡಚಣೆಗಳನ್ನು ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

## ಕೃಷಿ ವಿಶ್ವವಿದ್ಯಾಲಯದ ಅಭಿವೃದ್ಧಿ ಯೋಜನೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೩೯ (೪೫೭) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ಇರುವಕ್ಕಿ ಆವರಣದಲ್ಲಿ ಐ.ಡಿ.ಪಿ (IDP) ಯೋಜನೆಯಡಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ಮಂಜೂರಾದ ಅನುದಾನವೆಷ್ಟು, ಈ ಅನುದಾನದಡಿ ಇದುವರೆಗೆ ಕೈಗೊಂಡು ಪೂರ್ಣಗೊಳಿಸಿರುವ ಹಾಗೂ ಪ್ರಗತಿಯಲ್ಲಿರುವ ಅಭಿವೃದ್ಧಿ ಯೋಜನೆಗಳು ಯಾವುವು ;

(ಆ) ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಶಿವಮೊಗ್ಗದ ವ್ಯಾಪ್ತಿಯಲ್ಲಿರುವ ಒಟ್ಟು ಜಮೀನಿನ ವಿಸ್ತೀರ್ಣ ಎಷ್ಟು ; ಈ ಜಮೀನನ್ನು ಯಾವ ವಿವಿಧ ಉದ್ದೇಶಗಳಿಗೆ ಮೀಸಲಿಡಲಾಗಿದೆ ; ಈ ಜಮೀನಿನಲ್ಲಿ ಕೈಗೊಂಡಿರುವ ಸಂಶೋಧನಾ ಚಟುವಟಿಕೆಗಳಾವುವು ; ಸಂಶೋಧನೆಗೆ ಬಳಸದೆ ಉಳಿದ ಜಮೀನುಗಳಲ್ಲಿ ಬೆಳೆ ಬೆಳೆಸಲು ವರ್ಷವಾರು ಖರ್ಚು ಮಾಡಿದ ಅನುದಾನದ ಮೊತ್ತ ಎಷ್ಟು ; ಅವುಗಳಿಂದ ವರ್ಷವಾರು ಬಂದ ಆದಾಯ ಎಷ್ಟು ;

(ಇ) ಸದರಿ ವಿಶ್ವವಿದ್ಯಾಲಯಕ್ಕೆ ಸರ್ಕಾರದಿಂದ ಹಾಗೂ ಅಂತರಿಕ ಸಂಪನ್ಮೂಲಗಳಿಂದ (Internal Resources) ಬಂದ ವರ್ಷವಾರು ಅನುದಾನಗಳೆಷ್ಟು ; ವರ್ಷವಾರು ಆಯವ್ಯಯ ಪಟ್ಟಿ (Budget & Expenditure Statement) ಯ ವಿವರಗಳೇನು ; ಅನುದಾನದ ಬಳಕೆಯಲ್ಲಿ ಕರ್ನಾಟಕ ಟ್ರೆಜರಿ ಮತ್ತು ಹಣಕಾಸು ನಿಯಮಗಳ (KTPP /ಹಣಕಾಸು ನಿಯಮಗಳು) ಅನುಸಾರವಾಗಿ ಕೈಗೊಂಡಿರುವ ವೆಚ್ಚಗಳಾವುವು ;

(ಈ) ಈ ವಿಶ್ವವಿದ್ಯಾಲಯದ ಅಧೀನದಲ್ಲಿರುವ ಬ್ರಹ್ಮಾವರದ ವಲಯ ಕೃಷಿ ಮತ್ತು ತೋಟಗಾರಿಕೆ ಸಂಶೋಧನಾ ಕೇಂದ್ರದಲ್ಲಿ ಅಕ್ರಮವಾಗಿ ಮರಗಳನ್ನು ಕಡಿದಿರುವ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಈ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಸರ್ಕಾರ ಕೈಗೊಂಡ ಶಿಸ್ತು ಕ್ರಮಗಳೇನು ? (ವಿವರ ಒದಗಿಸುವುದು)

## ರಾಜ್ಯದಲ್ಲಿ ಅವಧಿ ಮುಗಿದಿರುವ ಗ್ರಾಮ ಪಂಚಾಯಿತಿಗಳ ಆಡಳಿತ ನಿರ್ವಹಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೦ (೪೫೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯದಲ್ಲಿ ಅವಧಿ ಮುಗಿಯುತ್ತಿರುವ ಗ್ರಾಮ ಪಂಚಾಯಿತಿಗಳ ಆಡಳಿತ ನಿರ್ವಹಣೆಗೆ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು ; ರಾಜ್ಯದಲ್ಲಿ ಗ್ರಾಮ ಪಂಚಾಯಿತಿಗಳ ಅವಧಿ ಯಾವಾಗ ಮುಕ್ತಾಯಗೊಳ್ಳಲಿದೆ ; ಈ ಪೈಕಿ ಎಷ್ಟು ಗ್ರಾಮ ಪಂಚಾಯಿತಿಗಳಲ್ಲಿ ಆಡಳಿತಾಧಿಕಾರಿಗಳನ್ನು (Administrator) ನೇಮಕ ಮಾಡಲು ಪ್ರಕ್ರಿಯೇ ; ಪ್ರಾರಂಭಿಸಿದೆ ; ಗ್ರಾಮ ಪಂಚಾಯಿತಿಗಳಿಗೆ ನೇಮಿಸಲಾಗುವ ಆಡಳಿತಾಧಿಕಾರಿಗಳಿಗೆ ಗ್ರಾಮ ಪಂಚಾಯಿತಿ ಆಡಳಿತದ ಬಗ್ಗೆ ತರಬೇತಿ ನೀಡಲಾಗಿದೆಯೇ ?

(ಆ) ವಿಕೇಂದ್ರಿಕೃತ ಆಡಳಿತ ವ್ಯವಸ್ಥೆಯು ದೃಷ್ಟಿಯಿಂದ "ಆಡಳಿತಾಧಿಕಾರಿಗಳ ನೇಮಕ" ಮತ್ತು "ಆಡಳಿತ ಸಮಿತಿ"

(Administrative Committee) ನೇಮಕ ಈ ಎರಡರ ಪೈಕಿ ಆಡಳಿತಾತ್ಮಕವಾಗಿ ಯಾವುದು ಹೆಚ್ಚು ಪರಿಣಾಮಕಾರಿಯೆಂದು ಸರ್ಕಾರ ಪರಿಗಣಿಸಿದೆ ; ಈ ಕುರಿತು ಸರ್ಕಾರದ ನಿಲುವೇನು ;

(ಇ) ಗ್ರಾಮ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳ ನೇಮಕದ ಬದಲಾಗಿ ಈಗಿರುವ ಆಡಳಿತ ಮಂಡಳಿಯನ್ನೇ ಅಲ್ಪಾವಧಿಗೆ ಮುಂದುವರಿಸುವಂತೆ ಜನಪ್ರತಿನಿಧಿಗಳು ಮತ್ತು ಪಂಚಾಯತ್ ರಾಜ್ ಒಕ್ಕೂಟದ ಪದಾಧಿಕಾರಿಗಳು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆಯೇ ; ಈ ಕುರಿತು ಸರ್ಕಾರ ವಹಿಸುವ ಕ್ರಮಗಳೇನು ;

(ಈ) ಆಡಳಿತಾಧಿಕಾರಿಗಳ ನೇಮಕದ ಬದಲಾಗಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಗ್ರಾಮ ಪಂಚಾಯಿತಿಗಳ ಆಡಳಿತ ನಿರ್ವಹಣೆಗೆ "ಆಡಳಿತ ಸಮಿತಿ" (Administrative Committee) ಯನ್ನು ನೇಮಕ ಮಾಡಲು ಅವಕಾಶವಿದೆಯೇ ; ಅವಕಾಶವಿದ್ದರೆ ಮುಂದಿನ ದಿನಗಳಲ್ಲಿ ಯಾವ ಕಾಲಮಿತಿಯೊಳಗೆ ಆದೇಶ ಹೊರಡಿಸಲಾಗುವುದು ;

(ಉ) ಸುಗಮ ಆಡಳಿತ ಮತ್ತು ಸ್ಥಳೀಯ ಜನಪ್ರತಿನಿಧಿಗಳ ಭಾಗವಹಿಸುವಿಕೆಯನ್ನು ಖಚಿತಪಡಿಸುವ ಉದ್ದೇಶದಿಂದ ಈಗಿರುವ ಗ್ರಾಮ ಪಂಚಾಯಿತಿ ಸದಸ್ಯರನ್ನೇ "ಆಡಳಿತ ಸಮಿತಿ" ಗೆ(Administrative Committee) ನೇಮಕ ಮಾಡುವ ಬಗ್ಗೆ ಸರ್ಕಾರದ ನಿಲುವೇನು ; ಈ ಕುರಿತು ಜಿಲ್ಲಾವಾರು ; ಮಾರ್ಗಸೂಚಿ/ಆದೇಶವನ್ನು ಹೊರಡಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು ?

# ರಾಜ್ಯದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೧ (೪೫೯) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡಿ ವಿತರಿಸಲಾಗುತ್ತಿದೆಯೇ ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ಮೊತ್ತದಂತೆ ಯಾವ್ಯಾವ ವಿಭಾಗದ ಎಷ್ಟು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಿಸಲಾಗದೆ ಬಾಕಿಯಿರುತ್ತದೆ ; (ವಿದ್ಯಾರ್ಥಿಗಳ ಸಂಖ್ಯೆ ಹಾಗೂ ವರ್ಷವರು ಮಾಹಿತಿ ಒದಗಿಸುವುದು)

(ಆ) ವಿದ್ಯಾರ್ಥಿವೇತನ ವಿತರಣೆಯಲ್ಲಿ ವಿಳಂಬವಾಗಲು ಅಥವಾ ಬಾಕಿ ಉಳಿಯಲು ಕಾರಣಗಳೇನು ; ಬಾಕಿ ಇರುವ ಎಲ್ಲಾ ಅರ್ಹ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಯಾವಾಗ ವಿತರಿಸುವ ನಿರೀಕ್ಷೆಯಿದೆ ; ಈ ಸಂಬಂಧ ಸರ್ಕಾರದ ಕಾಲಮಿತಿಯ ಪ್ರಸ್ತಾವನೆ ಏನಾದರೂ ಇದೆಯೇ ; ಬಾಕಿ ಮೊತ್ತ ಬಿಡುಗಡೆಗೆ ಸಂಬಂಧಿಸಿದಂತೆ ಈವರೆಗೆ ಎಷ್ಟು ಮೊತ್ತದ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಗೆ ಕಳುಹಿಸಲಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಹಿಂದುಳಿದ ವರ್ಗದ ವಿದ್ಯಾರ್ಥಿವೇತನ ಪಡೆಯಲು ಸರ್ಕಾರ ನಿಗದಿಪಡಿಸಿರುವ ಮಾನದಂಡಗಳು (ಆದಾಯ ಅಂಕಿ, ದಾಖಲಾತಿ ಇತ್ಯಾದಿ) ಯಾವುವು ; ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿ ವೇತನಕ್ಕಾಗಿ ಸಲ್ಲಿಸಲಾದ ಒಟ್ಟು ಅರ್ಜಿಗಳ ಸಂಖ್ಯೆ ಎಷ್ಟು: ಅವುಗಳಲ್ಲಿ ಮಾನದಂಡಗಳನ್ನು ಪೂರೈಸದೆ ಕಾರಣ ಎಷ್ಟು ಅರ್ಜಿಗಳನ್ನು ತಿರಸ್ಕರಿಸಲಾಗಿದೆ ; ತಿರಸ್ಕಾರಕ್ಕೆ ಮುಖ್ಯ ಕಾರಣಗಳೇನು ;

(ಈ) ಎಲ್ಲಾ ದಾಖಲೆಗಳು ಸರಿಯಾಗಿ ಸಲ್ಲಿಸಿ, ಮಾನದಂಡಗಳನ್ನು ಪೂರೈಸಿರುವ ಉಳಿದ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ನೀಡಲಾಗುತ್ತದೆಯೇ ; ಇಲ್ಲದಿದ್ದರೆ ಕಾರಣವೇನು ;

(ಉ) ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ವಿತರಣೆಯಲ್ಲಿ ಪಾರದರ್ಶಕತೆ ಮತ್ತು ಕಾಲಮಿತಿ ಕಾಪಾಡಲು ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳು ಯಾವುವು ; ಹಾಗೂ ಮುಂದಿನ ದಿನಗಳಲ್ಲಿ ಕೈಗೊಳ್ಳಲಿರುವ ಯೋಜಿತ ಕ್ರಮಗಳೇನು ?

## ರಸ್ತೆ ಕಾಮಗಾರಿ ಕಳಪೆ ಕುರಿತು

**ಶ್ರೀ ಭೀಮರಾವ್ ಬಸವರಾಜ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೨ (೪೬೦) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆ, ಹುಮನಾಬಾದ ಮತಕ್ಷೇತ್ರ ಎನ್ ಹೆಚ್ ೬೫ ದಿಂದ ಸದಲಾಪೂರ ಗ್ರಾಮ ಮತ್ತು ಹಂದ್ರಾಳ ದಿಂದ ನೀರಗುಡಿವರೆಗೆ ನಿರ್ಮಾಣವಾದ ರಸ್ತೆ ಡಾಂಬರೀಕರಣ ಪೂರ್ತಿಯಾಗಿ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಕಳಪೆ ಕಾಮಗಾರಿ ಕುರಿತು ಮಾಧ್ಯಮಗಳಲ್ಲಿ ಮತ್ತು ಜನರು ಹೋರಾಟ ಮಾಡಿದ್ದರೂ ಸರ್ಕಾರ ಟೆಂಡರ್ ಪಡೆದಿರುವ ಗುತ್ತಿಗೆದಾರರ ಮೇಲಾಗಲಿ ಮತ್ತು ಅಧಿಕಾರಿಗಳ ಮೇಲಾಗಲಿ ಕ್ರಮ ಕೈಗೊಳ್ಳದಿರಲು ಕಾರಣವೇನು ? (ಮಾಹಿತಿ ನೀಡುವುದು)

## ಪ್ರಧಾನ ಮಂತ್ರಿ "ಜಲ ಸಿಂಚಾಯಿ" ಯೋಜನೆಯ ಬಗ್ಗೆ

**ಶ್ರೀ ಬಿ. ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೩ (೪೬೨) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನಲ್ಲಿ ಬರುವ ತಡೋಳಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಪ್ರಧಾನ ಮಂತ್ರಿ "ಜಲ ಸಿಂಚಾಯಿ" ಯೋಜನೆಯ ಕಾಮಗಾರಿಗಳು ಯಾವುವು ; ನಿಗದಿ ಪಡಿಸಿರುವ ಅನುದಾನ ಎಷ್ಟು ; ಪ್ರಾರಂಭಿಸಿದ ವರ್ಷ ಯಾವುದು ; ಯಾವ ಹಂತದಲ್ಲಿವೆ ಹಾಗೂ ಯಾವಾಗ ಪೂರ್ಣಗೊಳಿಸಲಾಗುವುದು ;

(ಆ) "ಜಲ ಸಿಂಚಾಯಿ" ಯೋಜನೆಯ ಕಾಮಗಾರಿಗಳು ನಿಗದಿತ ಸಮಯದಲ್ಲಿ ಪೂರ್ಣಗೊಳ್ಳದಿರಲು ಕಾರಣವೇನು ; ಕೃಷಿ ಉಪಕರಣಗಳನ್ನು ರೈತರಿಗೆ ಹಂಚಲು ವಿಳಂಬವಾಗಲು ಕಾರಣವೇನು ; ಯಾವಾಗ ಹಂಚಲಾಗುವುದು ;

(ಇ) "ಜಲ ಸಿಂಚಾಯಿ" ಯೋಜನೆಯ ಉಸ್ತುವಾರಿಗೆ ಅನುಷ್ಠಾನ ಸಮಿತಿ ರಚಿಸಲಾಗಿದೆಯೇ ; ಇದರ ಕಾರ್ಯ ವ್ಯಾಪ್ತಿಯೇನು ಹಾಗೂ ಸಮಿತಿ ಸಕ್ರಿಯವಾಗಿಲ್ಲದೆ ಇರುವುದರಿಂದ ಯೋಜನೆಯ ಕಾಮಗಾರಿಗಳು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ಅನುಷ್ಠಾನ ಸಮಿತಿ ರಚನೆಯ ಪತ್ರ ನೀಡುವುದು)

## ಹುಬ್ಬಳ್ಳಿ–ಧಾರವಾಡದಲ್ಲಿರುವ ಐಟಿ–ಬಿಟಿ ಕಂಪನಿಗಳ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೪ (೪೬೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ನಗರ ಪ್ರದೇಶದಲ್ಲಿರುವ ಐಟಿ–ಬಿಟಿ ಕಂಪನಿಗಳ ಸಂಖ್ಯೆ ಎಷ್ಟು ;

(ಆ) ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ–ಧಾರವಾಡಕ್ಕೆ ಐಟಿ ಬಿಟಿ ಇಲಾಖೆಯಡಿ ಬರುವ Karnataka Digital

Economy Mission ಹಾಗೂ Beyond Bengaluru Initiative ಯೋಜನೆಯಡಿ ತಂದಿರುವ ಐಟಿ ಬಿಟಿ ಕಂಪನಿಗಳೆಷ್ಟು ಹಾಗೂ ಯಾವುವು ; ಸದರಿ ಕಂಪನಿಗಳನ್ನು ಸಬಲೀಕರಿಸಲು ನೀಡಲಾಗುತ್ತಿರುವ ಸೌಲಭ್ಯಗಳೇನು ?

## ಧಾರವಾಡ ನಗರ ಪ್ರದೇಶದಲ್ಲಿರುವ ಅಂಗನವಾಡಿಗಳು ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೫ (೪೬೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ;

(ಆ) ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಹೊಸದಾಗಿ ಮಂಜೂರು ಮಾಡಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; ಹಾಗೂ ಅಂಗನವಾಡಿಗಳ ಮಕ್ಕಳಿಗೆ ನೀಡಲಾಗುತ್ತಿರುವ ಸೌಲಭ್ಯಗಳೇನು ;

(ಇ) ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಪ್ರಧಾನ ಮಂತ್ರಿ ಮಾತೃ ವಂದನಾ ಯೋಜನೆಯಡಿ (PMMVY Scheme) ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ; (ವರ್ಷವಾರು ವಿವರ ನೀಡುವುದು) ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಡಿ ಗರ್ಭಿಣಿ ಸ್ತ್ರೀಯರಿಗೆ ನೀಡಲಾಗುವ ಸೌಲಭ್ಯಗಳೇನು ?

## ಧಾರವಾಡ ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಕೈಗೊಂಡಿರುವ ಕಾಮಗಾರಿಗಳು ಹಾಗೂ ಅನುದಾನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೬ (೪೬೫) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಧಾರವಾಡ ನಗರ ಪ್ರದೇಶದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಬರುವ SCP & TSP ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಾವುವು ;

(ಆ) ಕಳೆದ ಮೂರು ವರ್ಷಗಳಿಂದ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಸಮಾಜ ಕಲ್ಯಾಣ ಇಲಾಖೆಯಡಿ ಬರುವ SCP & TSP ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಾವುವು ;

(ಇ) ಸದರಿ ಕಾಮಗಾರಿಗಳಿಗೆ ಪೂರ್ಣ ಪ್ರಮಾಣದ ಅನುದಾನ ಬಿಡುಗಡೆಯಾಗಿದೆಯೇ ? (ವರ್ಷವಾರು ವಿವರ ನೀಡುವುದು)

## ಧಾರವಾಡ ನಗರ ಪ್ರದೇಶಕ್ಕೆ ಕಾರ್ಮಿಕ ಇಲಾಖೆಯಡಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೦೭ (೫೪೫) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಮಿಕ ಕಾರ್ಡ್ ಹೊಂದಿರುವ ಫಲಾನುಭವಿಗಳಿಗೆ ಇಲಾಖೆಯಿಂದ ನೀಡಲಾಗುತ್ತಿರುವ ಸೌಲಭ್ಯಗಳೇನು ;

(ಆ) ಕಳೆದ ಮೂರು ವರ್ಷಗಳಿಂದ ಧಾರವಾಡ ನಗರ ಪ್ರದೇಶ ಹಾಗೂ ಹುಬ್ಬಳ್ಳಿ ಸೆಂಟ್ರಲ್ ವಿಧಾನಸಭಾ ಕ್ಷೇತ್ರಕ್ಕೆ ಇಲಾಖೆಯಿಂದ ಬಿಡುಗಡೆ ಮಾಡಲಾಗಿರುವ ಅನುದಾನ ಎಷ್ಟು ;

(ಇ) ಸದರಿ ಅನುದಾನವನ್ನು ಯಾವ ಕಾರಣಕ್ಕಾಗಿ ವಿನಿಯೋಗಿಸಲಾಗುತ್ತಿದೆ ?

## ರಾಜ್ಯದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಂಬಂಧ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೪೦೮ (೪೬೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ವತಿಯಿಂದ ಬೆಂಗಳೂರಿನಲ್ಲಿ ನಡೆದ BTS ೨೦೨೫ರ ಸಮ್ಮೇಳನದಲ್ಲಿ ಎಷ್ಟು ಮಂದಿ ಪ್ರತಿನಿಧಿಗಳು ಮತ್ತು ಎಷ್ಟು ಪ್ರವಾಸಿಗರು ವಿವಿಧ ದೇಶಗಳಿಂದ ಭಾಗಿಯಾಗಿದ್ದರು ; ಇದರಿಂದ ರಾಜ್ಯದ ಜಾಗತಿಕ ಹೂಡಿಕೆಗೆ ಪೂರಕವಾದ ಅಂಶಗಳು ಯಾವುವು ;

(ಆ) BTS ೨೦೨೫ರ ಸಮ್ಮೇಳನದಿಂದ ಕರ್ನಾಟಕಕ್ಕೆ ಆದ ಮತ್ತು ಆಗುವ ಲಾಭಗಳೇನು ; ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಂಗಳೂರಿಗೆ ಮತ್ತು ಕರ್ನಾಟಕಕ್ಕೆ ಯಾವ ರೀತಿಯ ಖ್ಯಾತಿ ಬಂದಿರುತ್ತದೆ ; ಇದರಿಂದ ಅಂತರಾಷ್ಟ್ರೀಯ ಮಟ್ಟದಲ್ಲಿ ಬ್ರಾಂಡ್ ಮೌಲ್ಯ ಬೆಳೆದಿದೆಯೇ ;

(ಇ) ಕರ್ನಾಟಕ ಜಾಗತಿಕ ಸಾಮರ್ಥ್ಯ ಕೇಂದ್ರ ನೀತಿ ಯಾವಾಗ ಪ್ರಕಟಗೊಂಡಿರುತ್ತದೆ ಮತ್ತು KATALYST ಯೋಜನೆ ಕರ್ನಾಟಕದಲ್ಲಿ ಎಂದಿನಿಂದ ಜಾರಿಯಾಗಿರುತ್ತದೆ: ಹೊಸ ಬಂಡವಾಳ ತೊಡಗಿಸುವಿಕೆಗೆ ಯಾವ ರೀತಿ ಕರ್ನಾಟಕಕ್ಕೆ ಅನುಕೂಲವಾಗಿದೆ ;

(ಈ) ಇನ್ನೋವೇಟ್ ಕರ್ನಾಟಕ ಮೂಲಕ ಯಾವ ಯಾವ ವಲಯದಲ್ಲಿ ಉದ್ಯೋಗಾವಕಾಶಗಳು ಉಂಟಾಗಿರುತ್ತವೆ ಮತ್ತು ಇದರಿಂದ

ಕರ್ನಾಟಕದ ಎಷ್ಟು ಯುವಕರಿಗೆ ಉದ್ಯೋಗಾವಕಾಶ ದೊರೆಯುತ್ತದೆ ?

## ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿನ ಸಮಾಜ ಕಲ್ಯಾಣ ಇಲಾಖೆಯ ವಸತಿ ಶಾಲೆಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೪೦೯ (೪೬೭) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಮಾದರಿ, ಅಟಲ್ ಬಿಹಾರಿ ವಾಜಪೇಯಿ, ಡಾಕ್ಟರ್ ಅಂಬೇಡ್ಕರ್ ಮತ್ತು ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳ ಸಂಖ್ಯೆ ಎಷ್ಟು ; ಈ ಶಾಲೆಗಳಲ್ಲಿ ಇರುವ ದಾಖಲಾತಿ ಎಷ್ಟು ; (ಪೂರ್ಣ ಮಾಹಿತಿಯನ್ನು ಒದಗಿಸುವುದು)

(ಆ) ಸಮಾಜ ಕಲ್ಯಾಣ ಇಲಾಖೆಯು ಸರ್ಕಾರಿ ಆದೇಶ ದಿನಾಂಕ:೦೪.೦೧.೨೦೨೧ ರಂತೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಲಾಗಿದೆಯೇ ; (ವಿವರಗಳನ್ನು ಒದಗಿಸುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ವಸತಿ ಶಾಲೆಗಳಿಗೆ ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳು ಎಷ್ಟು ಬಾರಿ ಪರಿವೀಕ್ಷಣೆ ಮಾಡಿರುತ್ತಾರೆ ; (ವಿವರಗಳನ್ನು ಒದಗಿಸುವುದು)

(ಈ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಮೇಲನಹಳ್ಳಿಯಲ್ಲಿ ಇರುವ ಮೊರಾರ್ಜಿ ವಸತಿ ಶಾಲೆಯಲ್ಲಿ ಎಷ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ ; ಈ ವಸತಿ ಶಾಲೆಯಲ್ಲಿ ಸೌಲಭ್ಯಗಳ ಕೊರತೆಯ ಕುರಿತು ಸರ್ಕಾರಕ್ಕೆ ಎಷ್ಟು ದೂರುಗಳು ಬಂದಿವೆ ; ಈ ಶಾಲೆಯಲ್ಲಿ ನಿಯಮಾನುಸಾರ ರಿಜಿಸ್ಟರ್‌ಗಳನ್ನು ನಿರ್ವಹಣೆ ಮಾಡಲಾಗಿದೆಯೇ ? (ವಿವರಗಳನ್ನು ಒದಗಿಸುವುದು)

## ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯ ವಸತಿ ಶಾಲೆಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೪೧೦ (೪೬೮) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಇಲಾಖೆಯವತಿಯಿಂದ ಎಷ್ಟು ವಸತಿ ಶಾಲೆಗಳು ನಡೆಯುತ್ತಿವೆ ; ಈ ಶಾಲೆಯಲ್ಲಿ ಯಾವ ಯಾವ ವರ್ಗದ ವಿದ್ಯಾರ್ಥಿಗಳು ದಾಖಲಾತಿಯನ್ನು ಎಷ್ಟು ಪ್ರಮಾಣದಲ್ಲಿ ಪಡೆದಿರುತ್ತಾರೆ ; (ವಿದ್ಯಾರ್ಥಿಗಳ ಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಹಿಂದುಳಿದ ವರ್ಗಗಳ ಇಲಾಖೆಯವತಿಯಿಂದ ನಡೆಯುತ್ತಿರುವ ವಸತಿ ಶಾಲೆಗಳಲ್ಲಿ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗಿದೆಯೇ ; (ಪೂರ್ಣ ವಿವರಗಳನ್ನು ಒದಗಿಸುವುದು)

(ಇ) ತುಮಕೂರು ಜಿಲ್ಲೆಯ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿಗಳು, ಚಿಕ್ಕನಾಯಕನಹಳ್ಳಿ ತಾಲ್ಲೂಕು ವಸತಿ ಶಾಲೆಗಳಿಗೆ ಕಳೆದ ಮೂರು ವರ್ಷಗಳಲ್ಲಿ ಪರಿವೀಕ್ಷಣೆಗೆ ಭೇಟಿ ನೀಡಿದ್ದಾರೆಯೇ ; (ವಿವರಗಳನ್ನು ಒದಗಿಸುವುದು)

(ಈ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ವಸತಿ ಶಾಲೆಗಳಲ್ಲಿ ಎಷ್ಟು ಶಾಲೆಗಳಿಗೆ ಸ್ವಂತ ಕಟ್ಟಡ ಇರುತ್ತದೆ; ಎಷ್ಟು ವಸತಿ ಶಾಲೆಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿವೆ; (ವಿವರಗಳನ್ನು ಒದಗಿಸುವುದು)

(ಉ) ಸದರಿ ವಸತಿ ಶಾಲೆಗಳಲ್ಲಿ ಪೂರ್ಣ ಪ್ರಮಾಣದ ವಾರ್ಡನ್‌ಗಳ ನೇಮಕ ಆಗಿದೆಯೇ; ಖಾಲಿ ಇರುವ ಅಥವಾ ನಿಯೋಜನೆ ಮೇರೆಗೆ ಇರುವ ವಾರ್ಡನ್‌ಗಳು ಎಷ್ಟು?

## ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :-**

೪೧೧ (೪೬೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ತುಮಕೂರು ಜಿಲ್ಲೆ, ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ಇರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು; ಈ ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕರು. ಸಹಾಯಕಿಯರ ಸಂಖ್ಯೆ ಎಷ್ಟು; ಯಾವ ಯಾವ ವರ್ಗದ ಎಷ್ಟು ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ; (ಪೂರ್ಣ ವಿವರಗಳನ್ನು ಒದಗಿಸುವುದು)

(ಆ) ಸದರಿ ತಾಲ್ಲೂಕಿನಲ್ಲಿ ಎಷ್ಟು ಅಂಗನವಾಡಿ ಶಿಕ್ಷಕರ ಮತ್ತು ಸಹಾಯಕಿಯರ ಹುದ್ದೆ ಖಾಲಿ ಇರುತ್ತದೆ; ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿರುತ್ತದೆ;

(ಇ) ಸದರಿ ತಾಲ್ಲೂಕಿನ ಅಂಗನವಾಡಿ ಕೇಂದ್ರಗಳಲ್ಲಿ ಇತರೆ ತಾಲ್ಲೂಕಿನ ಎಷ್ಟು ಶಿಕ್ಷಕರು ಮತ್ತು ಸಹಾಯಕಿಯರು

ಕಾರ್ಯನಿರ್ವಹಿಸುತ್ತಿದ್ದಾರೆ ; ಇದ್ದಲ್ಲಿ, ಸ್ಥಳೀಯರಿಗೆ ಅವಕಾಶ ನೀಡದಿರಲು ಕಾರಣವೇನು ;

(ಈ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಎಷ್ಟು ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವ ಪ್ರಾಥಮಿಕ ಶಾಲೆಗಳನ್ನು ತೆರೆಯಲಾಗಿರುತ್ತದೆ ; ದಾಖಲಾಗಿರುವ ಮಕ್ಕಳ ಸಂಖ್ಯೆ ಎಷ್ಟು ; (ವಿವರ ಒದಗಿಸುವುದು)

(ಉ) ಕಳೆದ ಮೂರು ವರ್ಷಗಳಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಜಿಲ್ಲಾ ನಿರ್ದೇಶಕರು ಪರಿವೀಕ್ಷಣೆ ಮಾಡಿರುತ್ತಾರೆ ? (ವಿವರಗಳನ್ನು ಒದಗಿಸುವುದು)

## ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿರುವ ಪ್ರಾಧಿಕಾರಗಳ ಮಾಹಿತಿ ಕುರಿತು

**ಶ್ರೀ ರಮೇಶ್ ಬಾಬು (ನಾಮನಿರ್ದೇಶನ ಹೊಂದಿದವರು) :–**

೪೧೨ (೪೭೦) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಡಿಯಲ್ಲಿ ಒಟ್ಟು ಎಷ್ಟು ಪ್ರಾಧಿಕಾರಗಳು ಕಾರ್ಯನಿರ್ವಹಿಸುತ್ತಿವೆ ; ಇವುಗಳಿಗೆ ಕಳೆದ ೩ ವರ್ಷಗಳಲ್ಲಿ ರಾಜ್ಯ ಸರ್ಕಾರ ನೀಡಿರುವ ವಾರ್ಷಿಕ ಅನುದಾನವೆಷ್ಟು ; ಬಳಕೆಯಾಗಿರುವ ಅನುದಾನವೆಷ್ಟು ; (ಪೂರ್ಣ ಮಾಹಿತಿಯನ್ನು ಒದಗಿಸುವುದು)

(ಆ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿಯಲ್ಲಿ ಬರುವ ಅಕಾಡೆಮಿಗಳಿಗೆ ಅಧ್ಯಕ್ಷರನ್ನು ಮತ್ತು ಸದಸ್ಯರನ್ನು ನೇಮಿಸಲಾಗಿದೆಯೇ ; ಅವರ ಕಾಲಾವಧಿ ಎಷ್ಟು ; (ವಿವರಗಳನ್ನು ನೀಡುವುದು)

(ಇ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಅಡಿಯಲ್ಲಿ ಬರುವ ಅಕಾಡೆಮಿಗಳಿಗೆ ಅನುದಾನಗಳನ್ನು/ಸಹಾಯಧನಗಳನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಯಾವಾಗ ಕಾರ್ಯಗತ ಮಾಡಲಾಗುವುದು ;

(ಈ) ಈ ಇಲಾಖೆ ಅಡಿಯಲ್ಲಿ ಬರುವ ಅಕಾಡೆಮಿಗಳ ಎಷ್ಟು ಅಧ್ಯಕ್ಷರಿಗೆ ಸಂಪುಟ ಸಚಿವರ ಸ್ಥಾನಮಾನ ನೀಡಲಾಗಿದೆಯೇ ; ಉಳಿದ ಅಧ್ಯಕ್ಷರಿಗೆ ಸಂಪುಟ ಸಚಿವ ಸ್ಥಾನ ನೀಡುವ ಪ್ರಸ್ತಾವನೆ ಇದೆಯೇ ;

(ಉ) ಸದರಿ ಇಲಾಖೆ ಅಡಿಯಲ್ಲಿ ಬರುವ ಅಕಾಡೆಮಿಗಳ ಎಲ್ಲಾ ಸದಸ್ಯರಿಗೆ ಗೌರವಧನ ನೀಡಲಾಗುತ್ತಿದೆಯೇ ; ಇದನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ?

## ವಿದ್ಯಾರ್ಥಿ ವೇತನ ಸೌಲಭ್ಯದಿಂದ ವಂಚಿತರಾಗಿರುವ ವಿದ್ಯಾರ್ಥಿಗಳ ಕುರಿತು

**ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೪೧೩ (೪೮೦) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪದವಿ ಪೂರ್ವ, ಸ್ನಾತಕ, ಸ್ನಾತಕೋತ್ತರ ಪದವಿ ಸೇರಿದಂತೆ ಮೆಟ್ರಿಕ್ ನಂತರದ ಕೋರ್ಸ್ ಓದುತ್ತಿರುವ ರಾಜ್ಯದ ಹಿಂದುಳಿದ ವರ್ಗಗಳ ಮಕ್ಕಳ ವಿದ್ಯಾರ್ಥಿ ವೇತನ ಪಾವತಿಗೆ ರೂಪಿಸಿರುವ ಯೋಜನೆಗಳು ಯಾವುವು ; ಕೇಂದ್ರ ಮತ್ತು ರಾಜ್ಯ ಸರ್ಕಾರದ ಪುರಸ್ಕೃತ ಯೋಜನೆಗಳು ಯಾವುವು ; ಅನುದಾನದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಪಾಲು ಎಷ್ಟು ;

(ಆ) ೨೦೧೩–೧೪, ೨೦೧೪–೧೫, ೨೦೧೫–೧೬ನೇ ಆರ್ಥಿಕ ವರ್ಷಗಳಲ್ಲಿ ವಿದ್ಯಾರ್ಥಿ ವೇತನ ಸೌಲಭ್ಯಕ್ಕೆ ಎಲ್ಲಾ ಯೋಜನೆಗಳಲ್ಲಿ

ಅರ್ಜಿ ಸಲ್ಲಿಸಿದ ಮತ್ತು ಅರ್ಹತೆ ಪಡೆದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು; ಎಷ್ಟು ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ ಸಹಾಯಧನ ಪಾವತಿಸಲಾಗಿದೆ ; ಎಷ್ಟು ವಿದ್ಯಾರ್ಥಿಗಳಿಗೆ ಪಾವತಿಗೆ ಬಾಕಿಯಿದೆ ; ಬಾಕಿ ಇರಲು ಕಾರಣಗಳೇನು ; ಆರ್ಥಿಕ ವರ್ಷವಾರು ಸಂಪೂರ್ಣ ಮಾಹಿತಿ ನೀಡುವುದು ;

(ಇ) ಹಿಂದಿನ ಆರ್ಥಿಕ ವರ್ಷದಲ್ಲಿ ಜಾರಿಯಲ್ಲಿದ್ದ ಸ್ಕಾಲರ್‌ಶಿಪ್ ಯೋಜನೆಗಳನ್ನು ನಿಲ್ಲಿಸಲಾಗಿದೆಯೇ ; ಸ್ಕಾಲರ್‌ಶಿಪ್ ಯೋಜನೆಗಳಲ್ಲಿ ಅರ್ಹತೆ ಹೊಂದಲು ಸರ್ಕಾರ ನಿಗದಿಪಡಿಸಿದ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಮಾನ್ಯ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ನಿಗಮಗಳು ಮತ್ತು ಯೋಜನೆಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೪೧೪ (೪೭೫) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಾ॥ ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಭೋವಿ ನಿಗಮ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಹಲವಾರು ನಿಗಮಗಳಿಗೆ ಹಂಚಿಕೆಯಾದ ಅನುದಾನವನ್ನು ಖರ್ಚು ಮಾಡದೇ ಬೃಹತ್ ಪ್ರಮಾಣದಲ್ಲಿ ಉಳಿಸಿಕೊಂಡಿರುವುದು ನಿಜವೇ ;

(ಆ) 'ಅಂತರಜಾತಿ ವಿವಾಹ' ಮತ್ತು "ಸರಳ ವಿವಾಹ' ಯೋಜನೆಯ ಸ್ಥಿತಿಗತಿ ಏನು ಮತ್ತು ಈ ಯೋಜನೆಯಡಿ ೨೦೨೫ನೇ ಸಾಲಿನ ಎಷ್ಟು ಅರ್ಜಿಗಳು ಬಾಕಿ ಇವೆ ಮತ್ತು ಆ ಅರ್ಜಿಗಳನ್ನು ಯಾವ ಕಾಲಮಿತಿಯೊಳಗೆ ವಿಲೇ ಮಾಡಲಾಗುವುದು ;

(ಇ) ಸಮಾಜ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ ಎಷ್ಟು; ಅರಣ್ಯವಾಸಿ, ಪರಿಶಿಷ್ಟ ಜಾತಿ ಮತ್ತು

ಪರಿಶಿಷ್ಟ ಪಂಗಡಗಳ ಸಮುದಾಯಗಳಿಗೆ ಈ ಹಿಂದೆ ಭರವಸೆ ನೀಡಿದ ವಿಶೇಷ ನೇರ ನೇಮಕಾತಿಯ ಸ್ಥಿತಿಗತಿ ಏನು ;

(ಈ) ಜಿಲ್ಲಾಮಟ್ಟದಲ್ಲಿ ಸಾಂತ್ವನ ಕೇಂದ್ರಗಳು ಮತ್ತು ವಸತಿ ಶಾಲೆಗಳ ತಪಾಸಣಾ ವರದಿಗಳನ್ನು ಎಷ್ಟು ಬಾರಿ ಮೇಲ್ವಿಚಾರಣೆ ಮಾಡಲಾಗುತ್ತದೆ ; ಅಕ್ರಮಗಳು ಅಥವಾ ಸುರಕ್ಷತಾ ಸಮಸ್ಯೆಗಳು ವರದಿಯಾಗಿರುವ ಕೇಂದ್ರಗಳ ನಿರ್ವಹಣೆಯ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ?

## ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೪೧೫ (೪೭೬) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಈ ಹಿಂದೆ ನಡೆದ ಅಧಿವೇಶನದಲ್ಲಿ ಕಾಡುಗೊಲ್ಲ ಸಮುದಾಯದ ಜನರಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಸ್ಪರ್ಧಿಸಲು ಅನುವಾಗುವಂತೆ ಹಿಂದುಳಿದ 'ಪ್ರವರ್ಗ–ಎ' ರಡಿ ಸೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಲಾಗಿತ್ತು ; ಪ್ರಸ್ತುತ, ಸದರಿ ಪ್ರಸ್ತಾವನೆಯ ಸ್ಥಿತಿಗತಿ ಏನು ;

(ಆ) ದಿನಾಂಕ ೨೨.೦೮.೨೦೨೫ರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:೧೩೨೯ರಲ್ಲಿ ಉತ್ತರಿಸಿರುವಂತೆ, ಗ್ರಾಮ ಪಂಚಾಯಿತಿಗಳು, ಕೇಂದ್ರ ಮತ್ತು ರಾಜ್ಯ ಹಣಕಾಸು ಆಯೋಗದ ಅನುದಾನ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಲಭ್ಯವಾಗುವ ಅನುದಾನದಲ್ಲಿ ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ಯಾವ ಯಾವ ಕಾಡುಗೊಲ್ಲರ ಹಟ್ಟಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ ? (ಜಿಲ್ಲಾವಾರು ಮಾಹಿತಿ ನೀಡುವುದು)

## ಕಾರ್ಮಿಕರಿಗೆ ಕನಿಷ್ಠ ವೇತನ ಮತ್ತು ಕೆಲಸದ ಸ್ಥಳಗಳಲ್ಲಿ ಅಪಘಾತಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೪೧೬ (೪೭೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಏಪ್ರಿಲ್ ೧. ೨೦೨೫ ರಿಂದ ಜಾರಿಗೆ ಬರುವಂತೆ ಕನಿಷ್ಠ ವೇತನವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಕಾರ್ಮಿಕ ಇಲಾಖೆ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ; ವಿಶೇಷವಾಗಿ, ಹೆಚ್ಚಳವನ್ನು ವಿರೋಧಿಸುತ್ತಿರುವ ಎಂ.ಎಸ್.ಎಂ.ಇ ಕ್ಷೇತ್ರಗಳಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಆ) ಕಟ್ಟಡ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಬಾಕಿ ಇರುವ ಅರ್ಜಿಗಳು (ಉದಾ: ವೈದ್ಯಕೀಯ ನೆರವು, ಶಿಕ್ಷಣ, ವಿದ್ಯಾರ್ಥಿ ವೇತನ) ಪ್ರಸ್ತುತ ಯಾವ ಹಂತದಲ್ಲಿವೆ ;

(ಇ) ನಿರ್ಮಾಣ ಮತ್ತು ಉತ್ಪಾದನೆಯಲ್ಲಿ ಕೆಲಸದ ಸ್ಥಳಗಳಲ್ಲಿ ಅಪಘಾತಗಳು ಇತ್ತೀಚೆಗೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ತಪಾಸಣಾ ಕಾರ್ಯವಿಧಾನವನ್ನು ಬಲಪಡಿಸಲು ಇಲಾಖೆಯು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ?

## ಕಾಡುಗೊಲ್ಲ ಸಮುದಾಯವನ್ನು ಅಲೇಮಾರಿ ಮತ್ತು ಅರೇ ಅಲೇಮಾರಿ ವರ್ಗಕ್ಕೆ ಸೇರಿಸುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೪೧೭ (೪೭೮) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ತಲೆಮಾರುಗಳಿಂದ ಸ್ಥಾಪಿತವಾಗಿರುವ ಗೊಲ್ಲರಹಟ್ಟಿ ಗ್ರಾಮಗಳಲ್ಲಿ ವಾಸಿಸುವ ಕಾಡುಗೊಲ್ಲರು ಸಾಮಾಜಿವಾಗಿ–

ಶೈಕ್ಷಣಿಕವಾಗಿ–ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಅತೀ ಹಿಂದುಳಿದಿದ್ದು, ಹಲವಾರು ವರ್ಷಗಳಿಂದ ಈ ಸಮುದಾಯವನ್ನು ಅಲೇಮಾರಿ ಮತ್ತು ಅರೇ ಅಲೇಮಾರಿ ವರ್ಗಕ್ಕೆ ಸೇರಿಸುವ ಬೇಡಿಕೆ ಇದ್ದು, ಸರ್ಕಾರ ಈ ಕುರಿತು ಕೈಗೊಂಡಿರುವ ಕ್ರಮವೇನು ;

(ಆ) ಈ ಸಮುದಾಯವನ್ನು ಅಲೇಮಾರಿ ಮತ್ತು ಅರೇ ಅಲೇಮಾರಿ ವರ್ಗಕ್ಕೆ ಸೇರಿಸದೇ ಇರುವುದರಿಂದ ಯಾವುದೇ ಸವಲತ್ತುಗಳು ಅಲೇಮಾರಿ ಮತ್ತು ಅರೇ ಅಲೇಮಾರಿ ವರ್ಗಕ್ಕೆ ಸರ್ಕಾರದಿಂದ ಸಿಗುವ ಮನೆಗಳು, ಶಿಕ್ಷಣ ಇಲಾಖೆಗಳಲ್ಲಿ ಮೀಸಲಾತಿಗಳು ಇನ್ನಿತರೆ ಸವಲತ್ತುಗಳು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ರಾಜ್ಯದಲ್ಲಿ ಇಲ್ಲಿಯವರೆಗೆ ಯಾವ ಜಾತಿ/ಸಮುದಾಯಗಳಿಗೆ ಯಾವ ಯಾವ ನಿಗಮಗಳನ್ನು ಸ್ಥಾಪಿಸಲಾಗಿದೆ ; ಈ ನಿಗಮಗಳಿಗೆ ವಾರ್ಷಿಕವಾಗಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗುತ್ತಿದೆ ;

(ಈ) ಸದರಿ ನಿಗಮಗಳಿಗೆ ಸರ್ಕಾರದಿಂದ ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು ; ಎಷ್ಟು ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ ಮತ್ತು ಎಷ್ಟು ಹುದ್ದೆಗಳು ಖಾಲಿ ಇವೆ ? (ಮಾಹಿತಿ ನೀಡುವುದು)

## ವಸತಿ ಶಾಲೆಗಳ ಶಿಕ್ಷಕರಿಗೆ Increment ನೀಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೪೧೮ (೪೮೧) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಮಾರ್ ನಾಯಕ್ ವರದಿಯಂತೆ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಸಹ ಶಿಕ್ಷಕರಿಗೆ ಹಾಗೂ ಉಪನ್ಯಾಸಕರಿಗೆ ಈಗಾಗಲೇ ೨೦೧೬ ರಿಂದ ಒಂದು Increment ನೀಡಿರುವಂತೆ, ವಸತಿ ಶಾಲೆಗಳ ಶಿಕ್ಷಕರಿಗೆ ನೀಡಲಾಗಿಲ್ಲ ಎಂಬುದು ನಿಜವೇ ;

(ಆ) Increment ನೀಡದೇ ಇದ್ದಲ್ಲಿ ಕಾರಣಗಳೇನು ; ಹಾಗೂ Increment ನೀಡುವ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ;

(ಇ) ವಸತಿ ಶಾಲೆಗಳಲ್ಲಿ ಸಹ ಶಿಕ್ಷಕರಿಗೆ ಸುಮಾರು ೧೩ ವರ್ಷಗಳಿಂದ ಉಪನ್ಯಾಸಕರ ಹುದ್ದೆಗೆ ಪದೋನ್ನತಿ ನೀಡದಿರಲು ಕಾರಣಗಳೇನು ; ಈ ಕುರಿತು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ; ಪ್ರಸ್ತುತ ಬಡ್ತಿ ನೀಡುವ ಬಗೆಗಿನ ಪ್ರಕ್ರಿಯೆ ಯಾವ ಹಂತದಲ್ಲಿದೆ ?

## ರಾಜ್ಯದ ಜನರಿಗೆ ಗ್ರಾಮೀಣ ಭಾಗದಲ್ಲಿ "ಪಂಚತಂತ್ರ" ದಂತಹ ಸರಳೀಕೃತ ತಂತ್ರಾಂಶವನ್ನು ಪುನ: ಪ್ರಾರಂಭಿಸುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೪೯೯ (೪೮೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಈ ಹಿಂದೆ ಇದ್ದ ಸರಳೀಕೃತವಾಗಿದ್ದ "ಪಂಚತಂತ್ರ" ತಂತ್ರಾಂಶವನ್ನು ಯಾವ ಕಾರಣಕ್ಕೆ ಕೈಬಿಡಲಾಗಿದೆ ;

(ಆ) "ಪಂಚತಂತ್ರ" ತಂತ್ರಾಂಶವನ್ನು ಕೈಬಿಟ್ಟು ಹೊಸ ತಂತ್ರಾಂಶವನ್ನು ಅಳವಡಿಸಿರುವುದರಿಂದ ರಾಜ್ಯದ ಜನರು ಗ್ರಾಮೀಣ ಭಾಗದಲ್ಲಿ ಗ್ರಾಮ ಪಂಚಾಯತ್ ಅಡಿಯಲ್ಲಿ ಇರುವ ಗ್ರಾಮದ ಹಿನ್ನಲೆಯ ಮಾಹಿತಿ, ಜನಪರ ಯೋಜನೆಗಳು, ಗ್ರಾಮದ ಪ್ರಗತಿಪರ ಕಾಮಗಾರಿಗಳು ಹಾಗೂ ಅಧಿಕಾರಿಗಳ ಮಾಹಿತಿಯನ್ನು ಪಡೆಯುವಲ್ಲಿ ಕಷ್ಟಕರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ. ಕೈಗೊಂಡ ಕ್ರಮಗಳೇನು ;

(ಇ) "ಪಂಚತಂತ್ರ" ತಂತ್ರಾಂಶದಲ್ಲಿ ಕರ್ನಾಟಕದ ನಕ್ಷೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ನಕ್ಷೆಯಲ್ಲಿ ಎಲ್ಲಾ ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿಗಳ ಮಾಹಿತಿಯನ್ನು ಅತ್ಯಂತ ಸುಲಭವಾಗಿ

ಪಡೆಯಲು ಸಹಕಾರಿಯಾಗುತ್ತಿದ್ದು, ಪ್ರಸ್ತುತ ಇರುವ ತಂತ್ರಾಂಶವೂ ಬಹಳ ಕ್ಲಿಷ್ಟಕರವಾಗಿದ್ದು ಈ ತಂತ್ರಾಂಶದಿಂದಾಗಿ ಮಾಹಿತಿ ಪಡೆಯುವಲ್ಲಿ ಸಮಸ್ಯೆಯಾಗಿರುವುದರಿಂದ ಪುನಃ ನವೀಕೃತ "ಪಂಚತಂತ್ರ" ತಂತ್ರಾಂಶವನ್ನು ಅಳವಡಿಸಿಕೊಳ್ಳುವ ಬಗ್ಗೆ ಇಲಾಖೆ ಕೈಗೊಂಡ ಕ್ರಮಗಳೇನು ;

(ಈ) ಯಾವ ಕಾಲಮಿತಿಯಲ್ಲಿ ನವೀಕೃತ "ಪಂಚತಂತ್ರ" ತಂತ್ರಾಂಶವನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗುತ್ತದೆ ?

## ರಾಜ್ಯ ಸರ್ಕಾರ ನೇಮಕಾತಿಯಲ್ಲಿ ಅಳವಡಿಸಿರುವ ೫೬% ಮೀಸಲಾತಿಯ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೪೨೦ (೪೮೩) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಶೇ. ೫೬ ಮೀಸಲಾತಿಗೆ ಸಂಬಂಧಿಸಿದಂತೆ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಒಟ್ಟು ಎಷ್ಟು ಪ್ರಕರಣಗಳು ದಾಖಲಾಗಿವೆ ; ಈ ಪ್ರಕರಣಗಳು ಯಾವ ಹಂತದಲ್ಲಿವೆ ; (ವಿವರ ನೀಡುವುದು)

(ಆ) ಶೇ. ೫೬ ಮೀಸಲಾತಿ ಪ್ರಕರಣವು ಇತ್ಯಾರ್ಥವಾಗುವವರೆಗೂ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹಳೆಯ ಶೇ. ೫೦ ಮೀಸಲಾತಿ ಮತ್ತು ರೋಸ್ಟರ್ ಅನುಸಾರವಾಗಿಯೇ ನೇಮಕಾತಿಗಳನ್ನು ಮಾಡಿಕೊಳ್ಳಬಹುದಲ್ಲವೇ ; ಈ ಕುರಿತು ಸರ್ಕಾರ ಯಾವ ನಿರ್ಧಾರ ಕೈಗೊಳ್ಳಲಿದೆ ; (ಸ್ಪಷ್ಟನೆ ನೀಡುವುದು)

(ಇ) ಮುಂದಿನ ದಿನಗಳಲ್ಲಿ ಈ ಮೀಸಲಾತಿ ಪ್ರಕರಣವನ್ನು ಬೇಗ ಇತ್ಯಾರ್ಥ ಪಡಿಸಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ ; (ವಿವರ ನೀಡುವುದು)

(ಈ) ೩೮೪ ಕೆಎಎಸ್ ಗೆಜೆಟೆಡ್ ಪ್ರೊಬೇಷನರ್ಸ್ ಹುದ್ದೆಗಳ ನೇಮಕಾತಿಯು ಪೂರ್ವಭಾವಿ ಪರೀಕ್ಷೆ, ಮುಖ್ಯ ಪರೀಕ್ಷೆ ಮತ್ತು ವ್ಯಕ್ತಿತ್ವ ಪರೀಕ್ಷೆ ಸೇರಿ ಮೂರು ಹಂತಗಳಲ್ಲಿಯೂ ರೋಸ್ಟರ್/ ಮೀಸಲಾತಿ ಅನ್ವಯವಾಗಲಿದ್ದು, ಶೇ.೫೬ ಗೆ ಸಂಬಂಧಿಸಿದ ಮಧು ಬಿ.ಎಸ್ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯವು ಅಂತಿಮವಾಗಿ ಶೇ.೫೦ ಗೆ ನಿಗದಿಪಡಿಸಲು ಆದೇಶಿಸಿದರೆ ಈ ನೇಮಕಾತಿಯಲ್ಲಿ ಯಾವ ರೀತಿಯ ಮಾರ್ಪಾಡುಗಳನ್ನು ಮಾಡಲಾಗುತ್ತದೆ ?

## ರಾಜ್ಯ ಸರ್ಕಾರವು ಕೇಂದ್ರದ ಕೆನೆಪದರ ನೀತಿಗಿಂತ ಭಿನ್ನ ಕೆನೆಪದರ ನೀತಿಯನ್ನು ಅನುಸರಿಸುತ್ತಿರುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೪೨೧ (೪೮೪) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಅಡಿಯಲ್ಲಿ ಬರುವ ಸರ್ಕಾರಿ ಹಾಗೂ ಅನುದಾನಿತ ನೌಕರರಿಗೆ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ವಿತರಣೆ ಮಾಡುವಾಗ ಅನುಸರಿಸುತ್ತಿರುವ ನಿಯಮಗಳು ಮತ್ತು ಮಾನದಂಡಗಳು ಯಾವುವು ;

(ಆ) ರಾಜ್ಯ ಸರ್ಕಾರ ಆದಾಯ ಪ್ರಮಾಣಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ ೧೯೯೩ರ ಅಧಿಸೂಚನೆಯಂತೆ ಕೃಷಿ ಮತ್ತು ವೇತನ ಆದಾಯವನ್ನು ಹೊರಗಿಟ್ಟು ಕೆನೆಪದರ ನೀತಿ ಅನುಸರಿಸಬೇಕು ಎಂಬ ನಿಯಮಗಳು ಮತ್ತು ಅಧಿಸೂಚನೆಗಳನ್ನು ಪಾಲಿಸುತ್ತಿದೆಯೇ ;

(ಇ) ಇತ್ತೀಚೆಗೆ ರಾಜ್ಯ ಕಂದಾಯ ಇಲಾಖೆಯು ಸಮಾಜ ಕಲ್ಯಾಣ ಇಲಾಖೆಯ ನಿಯಮಗಳ ನಿರ್ದೇಶನದಂತೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವಾಗ ಕೇಂದ್ರ ಸರ್ಕಾರ

ರೂಪಿಸಿರುವ ನಿಯಮ ಹಾಗೂ ಅಧಿಸೂಚನೆಗಳನ್ನು ಹೊರತುಪಡಿಸಿ ಭಿನ್ನ ಕೆನೆಪದರ ನೀತಿ ಅನ್ವಯಿಸುತ್ತಿರುವುದರಿಂದ ವೇತನದಾರರ ಮಕ್ಕಳು ಅಖಿಲ ಭಾರತ ಹಾಗೂ ರಾಜ್ಯ ಕೋಟಾದಡಿ ವೈದ್ಯಕೀಯ, ಇಂಜಿನಿಯರಿಂಗ್ ಹಾಗೂ ಇತರೆ ವೃತ್ತಿಪರ ಪ್ರವೇಶ ಪಡೆಯುವಾಗ ಅವಕಾಶ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಈ) ರಾಷ್ಟ್ರಮಟ್ಟದ ಪ್ರವೇಶ ಪರೀಕ್ಷೆ ಬರೆದು ವಿವಿಧ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಪೋಷಕರ ವೇತನ ಆದಾಯ ೮ ಲಕ್ಷಕ್ಕಿಂತ ಹೆಚ್ಚಿದ್ದರೂ ಅಂತಹ ಮಕ್ಕಳಿಗೆ ಅಖಿಲ ಭಾರತ ಕೋಟಾದಡಿ ಪ್ರವೇಶ ನೀಡಲಾಗುತ್ತಿದ್ದು, ಅದೇ ವಿದ್ಯಾರ್ಥಿಗಳು ರಾಜ್ಯದ ಕೋಟಾದಡಿ ಪ್ರವೇಶ ಪಡೆಯುವಾಗ ಕೆನೆಪದರ ನೀತಿ ಅನ್ವಯಿಸಲಾಗುತ್ತಿದ್ದು, ಅವಕಾಶ ವಂಚಿತರಾಗುವುದಕ್ಕೆ ಸರ್ಕಾರವೇ ನೇರ ಹೊಣೆಯಾಗುತ್ತಿರುವುದರಿಂದ ಈ ಬಗ್ಗೆ ಕೈಗೊಂಡ ಕ್ರಮಗಳೇನು ;

(ಉ) ಭಾರತದ ಸಂವಿಧಾನದ ಅನುಚ್ಛೇದ ೩೪೨-ಎ(೩)ನಲ್ಲಿ ತಿಳಿಸಿರುವಂತೆ **"ಉಪನಿಧಿ (೧) ಮತ್ತು (೨) ನ್ನು ಒಳಗೊಂಡಂತೆ ಯಾವುದೇ ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶವು ಕಾನೂನಿನ ಮೂಲಕ ತನ್ನ ಸ್ವಂತ ಉದ್ದೇಶಗಳಿಗಾಗಿ ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ವರ್ಗಗಳ ಪಟ್ಟಿಯನ್ನು (ಮೀಸಲಾತಿ/ ಕೆನೆಪದರ ನೀತಿಯನ್ನು) ಸಿದ್ಧಪಡಿಸಬಹುದು ಮತ್ತು ನಿರ್ವಹಿಸಬಹುದು ಹಾಗೂ ಅದರಲ್ಲಿರುವ ನಮೂದುಗಳು ಕೇಂದ್ರದ ಪಟ್ಟಿಯಿಂದ ಭಿನ್ನವಾಗಿರಬಹುದು"** ಎಂದು ತಿಳಿಸಿದ್ದು, ರಾಜ್ಯ ಸರ್ಕಾರವು ನಮ್ಮ ರಾಜ್ಯದ ಸರ್ಕಾರಿ ನೌಕರರ ಮಕ್ಕಳ ಶೈಕ್ಷಣಿಕ ಹಿತದೃಷ್ಟಿಯಿಂದ ನೌಕರರಿಗೆ ಆದಾಯ ಪ್ರಮಾಣಪತ್ರ ನೀಡುವಲ್ಲಿ ಕೇಂದ್ರ ಸರ್ಕಾರದ ೧೯೯೩ರ ಅಧಿಸೂಚನೆಯಂತೆ ಕೃಷಿ ಮತ್ತು

ವೇತನ ಆದಾಯವನ್ನು ಹೊರತುಪಡಿಸಿ ಕೆನೆಪದರ ನೀತಿಯನ್ನು ಅಳವಡಿಸಬಹುದಲ್ಲವೇ ; ಇದರಿಂದ ಸಾವಿರಾರು ಮಕ್ಕಳಿಗೆ ಅನುಕೂಲವಾಗುವುದಿಲ್ಲವೇ ; ಈ ಬಗ್ಗೆ ಸರ್ಕಾರದ ನಿಲುವೇನು ?

## ಗ್ರಾಮೀಣ ಆಸ್ತಿಗಳ ಡಿಜಿಟಲೀಕರಣ (E-Swathu) ಕುರಿತು

**ಡಾ. ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) :–**

೪೨೨ (೪೮೫) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಆಸ್ತಿಗಳ ಡಿಜಿಟಲೀಕರಣ, ಪಾರದರ್ಶಕತೆ ಮತ್ತು ವಂಚನೆ ತಡೆಯುವ ಉದ್ದೇಶದಿಂದ ಆನ್‌ಲೈನ್ ಇ–ಸ್ವತ್ತು (E-Swathu) ಪೋರ್ಟಲ್ ಮುಖಾಂತರ ಫಾರ್ಮ್–೯ ಮತ್ತು ಫಾರ್ಮ್–೧೧ (ಇ–ಖಾತೆ)ಗಳನ್ನು ಪಡೆಯಲು ಪ್ರಸ್ತುತ ಕರ್ನಾಟಕ ಸರ್ಕಾರ ಅವಕಾಶ ಮಾಡಿಕೊಟ್ಟಿದ್ದು, ಇದನ್ನು ಪಡೆಯಲು ಗ್ರಾಮ–ಒನ್ ಸೇವಾ ಕೇಂದ್ರ ಅಥವಾ ಬೇರಾವುದೇ ಸೇವಾ ಕೇಂದ್ರಗಳ ಮೂಲಕ ಇಲಾಖೆಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಗಿದೆಯೇ ; ಹಾಗಿದ್ದಲ್ಲಿ, ಫಲಾನುಭವಿಗಳು ಸೇವಾ ಕೇಂದ್ರಕ್ಕೆ ಪಾವತಿಸಲು ನಿಗದಿಪಡಿಸಿರುವ ಶುಲ್ಕವೆಷ್ಟು ; ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಶುಲ್ಕ ಪಡೆಯುತ್ತಿರುವ ಹಾಗೂ ಆ ಶುಲ್ಕದ ಪಾವತಿಸದವರ ಅರ್ಜಿಗಳನ್ನು ಇಲ್ಲಸಲ್ಲದ ಕಾರಣಗಳು ಹೇಳಿ ನಿರಾಕರಿಸುತ್ತಿರುವ ಸೇವಾ ಕೇಂದ್ರಗಳಿಗೆ ಸರ್ಕಾರ ಯಾವ ಕ್ರಮಕೈಗೊಳ್ಳಲಿದೆ ;

(ಆ) ಆನ್‌ಲೈನ್ ಇ–ಸ್ವತ್ತು (E-Swathu) ಪೋರ್ಟಲ್ ಮುಖಾಂತರ ಅರ್ಜಿ ಸಲ್ಲಿಸಲು ಆಗುತ್ತಿರುವ ತಾಂತ್ರಿಕ ವಿಳಂಬಕ್ಕೆ ಪರ್ಯಾಯವಾಗಿ, ಫಲಾನುಭವಿ ವ್ಯಕ್ತಿಗಳೇ ನೇರವಾಗಿ ಮೊಬೈಲ್ ಆಪ್ ಮೂಲಕ ಸರಳ ರೀತಿಯಲ್ಲಿ ಅರ್ಜಿ ಸಲ್ಲಿಸಲು

ಇಲಾಖೆಯಿಂದ ಅವಕಾಶ ಮಾಡಿಕೊಡಲಾಗಿದೆಯೇ ; ಆಗಿದ್ದಲ್ಲಿ, ಇದರ ಬಗ್ಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸೂಕ್ತ ಜಾಹೀರಾತು ಮುಖಾಂತರ ಪ್ರಚಾರ ಕೈಗೊಳ್ಳಬಹುದೇ ?

## ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಗೆ ರಾಜ್ಯದ ಪಾಲಿನ ಹಣ ಬಿಡುಗಡೆ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೩ (೪೮೭) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ ಆರಂಭವಾದಾಗಿನಿಂದ ರಾಜ್ಯದಲ್ಲಿ ಎಷ್ಟು ಗ್ರಾಮಗಳನ್ನು ಆಯ್ಕೆ ಮಾಡಲಾಗಿದೆ ; ಎಷ್ಟು ಗ್ರಾಮಗಳನ್ನು ಆದರ್ಶ ಗ್ರಾಮಗಳನ್ನಾಗಿ ಘೋಷಿಸಲಾಗಿದೆ ; ಆಯ್ಕೆಯಾಗಿರುವ ಎಷ್ಟು ಗ್ರಾಮಗಳಲ್ಲಿ, ಇನ್ನೂ ಕಾಮಗಾರಿಗಳು ಪ್ರಾರಂಭವಾಗಿಲ್ಲ ; (ಜಿಲ್ಲಾವಾರು, ವರ್ಷವಾರು ಮಾಹಿತಿ ಒದಗಿಸುವುದು)

(ಆ) ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಈ ಯೋಜನೆಯಡಿಯಲ್ಲಿ ಆಯ್ಕೆಯಾಗಿರುವ ಗ್ರಾಮಗಳು ಯಾವುವು ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ಒದಗಿಸುವುದು)

(ಇ) ಈ ಯೋಜನೆಯನ್ನು ಅನುಷ್ಠಾನಗೊಳಿಸಲು ಆಯ್ಕೆಯಾದ ಪ್ರತಿ ಗ್ರಾಮದ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಎಷ್ಟು ಅನುದಾನ ನೀಡಲಾಗುತ್ತಿದೆ ;

(ಈ) ೨೦೧೯–೨೦, ೨೦೨೦–೨೧, ೨೦೨೧–೨೨ ರಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುವ ಗ್ರಾಮಗಳಿಗೆ ರಾಜ್ಯದ ಪಾಲಿನ ಅನುದಾನ ಬಿಡುಗಡೆ ಆಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಎಷ್ಟು ಅನುದಾನ ಬಿಡುಗಡೆ ಮಾಡಲು ಬಾಕಿ ಇದೆ ; ಬಾಕಿ ಇರಲು ಕಾರಣಗಳೇನು ; ಬಾಕಿ ಇರುವ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು ? (ವಿವರ ಒದಗಿಸುವುದು)

## ಭವನಗಳ ಕಾಮಗಾರಿ ಆರಂಭಗೊಳ್ಳದ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೪ (೪೮೮) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರಕ್ಕೆ ಡಾ॥ ಬಿ.ಆರ್. ಅಂಬೇಡ್ಕರ್ ಭವನ/ಡಾ॥ಬಾಬು ಜಗಜೀವನ್ ರಾಮ್ ಭವನ/ಸಮುದಾಯ ಭವನಗಳ ನಿರ್ಮಾಣ ಮಾಡಲು ಮಂಜೂರಾಗಿರುವ ಅನುದಾನವೆಷ್ಟು ;

(ಆ) ಇದರಲ್ಲಿ ಎಷ್ಟು ಭವನಗಳ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ ; ಎಷ್ಟು ಭವನಗಳ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ ; ಎಷ್ಟು ಭವನಗಳ ಕಾಮಗಾರಿಗಳು ಪ್ರಾರಂಭಗೊಂಡಿಲ್ಲ ; (ವಿವರ ಒದಗಿಸುವುದು)

(ಇ) ೨೦೨೨–೨೩ ನೇ ಸಾಲಿನಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರದ ವಿವಿದೆಡೆ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ಮಂಜೂರಾಗಿದ್ದರೂ ಸಹ ಇನ್ನೂ ಕಾಮಗಾರಿಗಳನ್ನು ಪ್ರಾರಂಭಿಸದೆ ಇರಲು ಕಾರಣಗಳೇನು ; ಈ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ನಿಗದಿಪಡಿಸಿರುವ ಏಜೆನ್ಸಿ/ಇಲಾಖೆ ಯಾವುದು ;

(ಈ) ಈ ಭವನಗಳ ನಿರ್ಮಾಣ ಕಾಮಗಾರಿಗಳಿಗಾಗಿ ಮಂಜೂರಾಗಿರುವ ಮತ್ತು ಬಿಡುಗಡೆ ಆಗಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಉ) ಯಾವ ಕಾಲಮಿತಿಯಲ್ಲಿ ಈ ಭವನಗಳ ನಿರ್ಮಾಣ ಕಾಮಗಾರಿಗಳನ್ನು ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು ?

## ಪಿ.ಡಿ.ಓ ಗಳಿಗೆ ಮುಂಬಡ್ತಿ ನೀಡದಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೨೫ (೪೮೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಪಿ.ಡಿ.ಓ ಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಬಡ್ತಿ ನೀಡಲು ಬಹಳ ದಿನಗಳಿಂದ ಬಾಕಿ ಇರುವುದಕ್ಕೆ ಕಾರಣಗಳೇನು ;

(ಇ) ಪಿ.ಡಿ.ಓ. ಗಳಿಗೆ ಮುಂಬಡ್ತಿ ನೀಡಿ ತುಂಬಬಹುದಾದ ಎಷ್ಟು ಖಾಲಿ ಹುದ್ದೆಗಳಿವೆ ; ಇವುಗಳಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗಳೆಷ್ಟು ; ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕೃತ ಹುದ್ದೆಗಳೆಷ್ಟು ; ಈ ಹುದ್ದೆಗಳು ಎಲ್ಲೆಲ್ಲಿ ಖಾಲಿ ಇವೆ ; (ವಿವರ ಒದಗಿಸುವುದು)

(ಈ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಹಿರಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹುದ್ದೆಗೆ ಹಾಗೂ ಸಹಾಯಕ ನಿರ್ದೇಶಕರ ಹುದ್ದೆಗೆ ಬಡ್ತಿ ನೀಡಲು ನಿಗದಿಪಡಿಸಿರುವ ಮಾನದಂಡಗಳೇನು ;

(ಉ) ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಮುಂಬಡ್ತಿ ನೀಡುವ ಪ್ರಕ್ರಿಯೆ ವಿಳಂಬವಾಗಿರುವುದರಿಂದ ಈ ಹುದ್ದೆಯ ಕೆಳಹಂತದ ನೌಕರರು ಮುಂಬಡ್ತಿಯಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಯಾವಾಗ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ಮುಂಬಡ್ತಿ ನೀಡಲಾಗುವುದು ; ಈ ನಿಟ್ಟಿನಲ್ಲಿ ಆಗಿರುವ ಪ್ರಗತಿ ಏನು ? (ವಿವರ ಒದಗಿಸುವುದು)

## ಮೈಸೂರು/ಚಾಮರಾಜನಗರ ಜಿಲ್ಲೆಗಳಲ್ಲಿ (SCP/TCP) ಹಣ ಬಳಕೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೬ (೪೯೦) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ವಿವಿಧ ತಾಲ್ಲೂಕುಗಳಲ್ಲಿ ಎಸ್‌ಸಿಪಿ/ಟಿಎಸ್‌ಪಿ (SCP/TCP) ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಾಲೋನಿಗಳ ಅಭಿವೃದ್ಧಿಗಾಗಿ ಮಂಜೂರಾದ ಅನುದಾನದಲ್ಲಿ ಬಳಕೆಯಾಗದೆ ವಾಪಸ್ ಹೋಗಿರುವ ಮೊತ್ತ ಎಷ್ಟು ;

(ಆ) ಈ ಜಿಲ್ಲೆಗಳಲ್ಲಿ ಶಿಥಿಲಾವಸ್ಥೆಯಲ್ಲಿರುವ ಅಥವಾ ಅಪೂರ್ಣಗೊಂಡಿರುವ ಅಂಬೇಡ್ಕರ್ ಸಮುದಾಯ ಭವನಗಳ ಪುನಶ್ಚೇತನಕ್ಕೆ ಮೀಸಲಿಟ್ಟ ಹಣ ಎಷ್ಟು ?

## ನರೇಗಾ ಯೋಜನೆಯಡಿ ಕೈಗೊಂಡ ಕಾಮಗಾರಿಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೭ (೪೯೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆಯಲ್ಲಿ ಕಳೆದ ಆರ್ಥಿಕ ವರ್ಷದಲ್ಲಿ ನರೇಗಾ ಯೋಜನೆಯಡಿ ಸೃಜನೆಯಾದ ಮಾನವ ದಿನಗಳ ಸಂಖ್ಯೆ ಎಷ್ಟು;

(ಆ) ಕೂಲಿಕಾರರಿಗೆ ನೀಡಬೇಕಾದ ವೇತನ ಮತ್ತು ಸಾಮಗ್ರಿ ವೆಚ್ಚದ (Material Component) ಬಾಕಿ ಮೊತ್ತ ಎಷ್ಟು ; ಇದನ್ನು ಪಾವತಿಸಲು ಸರ್ಕಾರ ಹಾಕಿಕೊಂಡಿರುವ ಕಾಲಮಿತಿ ಯಾವುದು ;

(ಇ) ಜಿಲ್ಲೆಯ ಹುಣಸೂರು ಮತ್ತು ಎಚ್.ಡಿ.ಕೋಟೆ ತಾಲ್ಲೂಕುಗಳ ಗುಡ್ಡಗಾಡು ಪ್ರದೇಶಗಳಲ್ಲಿ ಜನ ವಲಸೆ ಹೋಗುವುದನ್ನು ತಪ್ಪಿಸಲು ನರೇಗಾ ಅಡಿ ಹಮ್ಮಿಕೊಂಡಿರುವ ವಿಶೇಷ ಕಾಮಗಾರಿಗಳಾವುವು ?

## ರಂಗಾಯಣದ ಕಲಾ ಚಟುವಟಿಕೆಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೮ (೪೯೨) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕಳೆದ ಎರಡು ವರ್ಷಗಳಲ್ಲಿ ಮೈಸೂರಿನ ರಂಗಾಯಣಕ್ಕೆ ಸರ್ಕಾರ ಬಿಡುಗಡೆ ಮಾಡಿದ ಒಟ್ಟು ಅನುದಾನ ಎಷ್ಟು ;

(ಆ) ರಂಗಾಯಣದ ಕಲಾ ಚಟುವಟಿಕೆಗಳು ಕುಂಠಿತಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಅಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಸರ್ಕಾರ ಕೈಗೊಂಡ ಕ್ರಮವೇನು ?

## ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೨೯ (೪೯೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) "ಚಾಮರಾಜನಗರ ಜಿಲ್ಲೆಯಂತಹ ಗಡಿ ಭಾಗಗಳಲ್ಲಿ ಕೆಲಸ ಮಾಡುವ ಅಸಂಘಟಿತ ಕಾರ್ಮಿಕರಿಗೆ (ಗಿರಣಿ ಕಾರ್ಮಿಕರು, ಕಲ್ಲು ಕ್ವಾರಿ ಕಾರ್ಮಿಕರು) ಸಾಮಾಜಿಕ ಭದ್ರತೆ ಒದಗಿಸಲು ಸರ್ಕಾರ ಜಾರಿಗೆ ತಂದಿರುವ ವಿಶೇಷ ಯೋಜನೆಗಳೇನು ;

(ಆ) “ಇ–ಶ್ರಮ್ (e-SHRAM) ಪೋರ್ಟಲ್‌ನಲ್ಲಿ ನೋಂದಾಯಿತವಾಗಿರುವ ಈ ಜಿಲ್ಲೆಯಗಳ ಕಾರ್ಮಿಕರಿಗೆ ಸರ್ಕಾರದ ವಿಮಾ ಯೋಜನೆಗಳ ಪ್ರಯೋಜನೆಗಳು ತಲುಪುತ್ತಿವೆಯೇ ? (ಫಲಾನುಭವಿಗಳ ವಿವರ ನೀಡುವುದು)

## ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿನ ಅಂಗನವಾಡಿ ಕೇಂದ್ರಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೩೦ (೪೯೪) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸ್ವಂತ ಕಟ್ಟಡವಿಲ್ಲದೆ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ ಎಷ್ಟು ; ಇವುಗಳಿಗೆ ಸ್ವಂತ ಕಟ್ಟಡ ನಿರ್ಮಿಸಲು ಪ್ರಸಕ್ತ ಆಯವ್ಯಯದಲ್ಲಿ ಮೀಸಲಿಟ್ಟ ಅನುದಾನವೆಷ್ಟು ;

(ಆ) ಹಳೆಯದಾಗಿರುವ ಮತ್ತು ಶಿಥಿಲಾವಸ್ಥೆಯಲ್ಲಿರುವ ಅಂಗನವಾಡಿ ಕಟ್ಟಡಗಳ ದುರಸ್ತಿಗೆ ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆ ಮಾಡಿದ ಹಣ ಎಷ್ಟು ; ದುರಸ್ತಿ ಕಾರ್ಯ ಪೂರ್ಣಗೊಂಡಿರುವ ಕಟ್ಟಡಗಳ ಸಂಖ್ಯೆ ಎಷ್ಟು ?

## ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಉನ್ನತೀಕರಿಸಿರುವ ಬಗ್ಗೆ

**ಶ್ರೀ ಐವನ್ ಡಿ’ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೧ (೪೯೯) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಾವಳಿ ಅಭಿವೃದ್ಧಿ ಮಂಡಳಿಯನ್ನು ಉನ್ನತೀಕರಿಸಿದ್ದು, ೨೦೨೪–೨೫ ಮತ್ತು ೨೦೨೫–೨೬ನೇ

ಸಾಲಿನ ಬಜೆಟ್ ನಲ್ಲಿ ಕನಿಷ್ಠ ರೂ.೧೦೦ ಕೋಟಿ ಅನುದಾನ ಒದಗಿಸಿಕೊಡಬೇಕೆಂಬ ಬೇಡಿಕೆ ಇದ್ದು, ಸರ್ಕಾರ ಕೈಗೊಂಡ ಕ್ರಮಗಳೇನು ; ಮುಂದಿನ ಬಜೆಟ್ ನಲ್ಲಿ ಈ ಅನುದಾನವನ್ನು ನೀಡಲು ಕ್ರಮ ಕೈಗೊಳ್ಳುವುದೇ ;

(ಆ) ಕರಾವಳಿ ಅಭಿವೃದ್ಧಿ ಮಂಡಳಿ ಸ್ವಂತ ಕಛೇರಿ ಸ್ಥಾಪಿಸಲು ಸರ್ಕಾರ ಕೈಗಂಡ ಕ್ರಮಗಳೇನು ; ಈ ಮಂಡಳಿಗೆ ಇಂಜಿನಿಯರ್ ಮತ್ತು ಸಿಬ್ಬಂದಿಗಳ ಕೊರತೆಯಿದ್ದು, ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಮಂಡಳಿಯಲ್ಲಿ ಶಾಸಕರು ಮತ್ತು ವಿಧಾನ ಪರಿಷತ್ ಶಾಸಕರು ಇದ್ದು, ಈ ಸದಸ್ಯರಿಗೆ ೨೦೨೪–೨೫ ಸಾಲಿನಲ್ಲಿ ನೀಡಿದ ಅನುದಾನ ಎಷ್ಟು ; (ವಿವರ ನೀಡುವುದು)

(ಈ) ಕರಾವಳಿ ಅಭಿವೃದ್ಧಿ ಮಂಡಳಿಯಲ್ಲಿ ಪ್ರಸ್ತುತ ಯಾವ ಯಾವ ಮಾನದಂಡದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ ; ಮುಂದಿನ ಯೋಜನೆಳಾವುವು ; (ವಿವರ ನೀಡುವುದು)

(ಉ) ಪ್ರವಾಸೋದ್ಯಮಕ್ಕೆ ಸಂಬಂಧಪಟ್ಟಂತೆ ಕರಾವಳಿ ಅಭಿವೃದ್ಧಿ ಪ್ರಾಧಿಕಾರದಲ್ಲಿ ನಡೆಸಲು ಸರ್ಕಾರದಿಂದ ಮಾರ್ಗದರ್ಶನ ನೀಡಲಾಗಿದೆಯೇ ; ಕರಾವಳಿ ಅಭಿವೃದ್ಧಿ ಮಂಡಳಿಯು ಪ್ರವಾಸೋದ್ಯಮ ಮಂಡಳಿಯ ಜೊತೆ ಸೇರಿ ಕೆಲಸ ಮಾಡಲು ಇಲಾಖೆ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ರಾಜ್ಯದಲ್ಲಿ ಹಿರಿಯ ಮಹಿಳಾ ನಾಗರಿಕರಿಗೆ ಸಹಾಯ ಮಾಡಲು ಇರುವ ಕಾರ್ಯಕ್ರಮಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೨ (೫೦೦) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಿರಿಯ ಮಹಿಳಾ ನಾಗರಿಕರಿಗೆ ಸಹಾಯ ಮಾಡಲು ಸರ್ಕಾರವು ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ; ಯಾವ ರೀತಿಯ ಆರ್ಥಿಕ ಸಹಾಯ ಮಾಡಲಾಗುತ್ತಿದೆ ; (ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ಎಷ್ಟು ಹಿರಿಯ ಮಹಿಳೆಯರಿಗೆ ಸಹಾಯ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಹಿರಿಯ ಮಹಿಳಾ ನಾಗರಿಕರಿಗೆ ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಲು ಇಲಾಖೆಯು ವಿಶೇಷ ಯೋಜನೆ ಹಮ್ಮಿಕೊಂಡಿದೆಯೇ ; (ವಿವರ ನೀಡುವುದು)

(ಈ) ವಿಕಲಚೇತನರ ಮತ್ತು ಹಿರಿಯ ಮಹಿಳಾ ನಾಗರಿಕರಿಗೆ ನೀಡುತ್ತಿರುವ ಗೌರವ ಧನ ಎಷ್ಟು ; ಗೌರವಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದರೆ, ಯಾವ ಕಾಲಮಿತಿಯೊಳಗಾಗಿ ಕ್ರಮ ಕೈಗೊಳ್ಳಲಾಗುವುದು ?

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸ್ಥಾಪಿತವಾದ ಹಾಸ್ಟೆಲ್‌ಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೩ (೫೦೧) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸ್ಥಾಪಿತವಾದ ಹಾಸ್ಟೆಲ್‌ಗಳ ಸಂಖ್ಯೆ ಕಡಿಮೆ ಇದ್ದು, ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು ಇರುವುದರಿಂದ ಹೆಚ್ಚುವರಿ ಹಾಸ್ಟೆಲ್ ನೀಡಬೇಕೆಂಬ ಬೇಡಿಕೆಯನ್ನು ಇನ್ನೂ ಈಡೇರಿಸದೆ ಇರಲು ಕಾರಣಗಳೇನು ;

(ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ನಡೆಯುವ ಹಾಸ್ಟೆಲ್‌ಗಳಲ್ಲಿ ಇನ್ನೂ ೧೫೦೦ ವಿದ್ಯಾರ್ಥಿಗಳಿಗೆ ಸೀಟುಗಳು ಬೇಕಾಗಿದ್ದು, ಕೈಗೊಂಡಿರುವ ಕ್ರಮಗಳೇನು ;

(ಇ) ಹೆಚ್ಚುವರಿ ಹಾಸ್ಟೆಲ್‌ಗಳನ್ನು ನೀಡುವ ಭರವಸೆ ನೀಡಿದ್ದರೂ, ಇನ್ನೂ ಕಾರ್ಯಗತಗೊಳಿಸದೇ ಇರಲು ಕಾರಣಗಳೇನು ;

(ಈ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ನಡೆಸುವ ಹಾಸ್ಟೆಲ್‌ಗಳಲ್ಲಿರುವ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಬೇಡಿಕೆ ಇರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಬೀಡಿ ಕಾರ್ಮಿಕ ಉದ್ದಿಮೆ ನಶಿಸಿ ಹೋಗುತ್ತಿರುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೪ (೫೦೨) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ದಕ್ಷಿಣ ಕನ್ನಡ ಮತ್ತು ಕರಾವಳಿ ಜಿಲ್ಲೆಗಳಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯುಲ್ಲಿ ಬೀಡಿ ಕಾರ್ಮಿಕರಿದ್ದು, ಬೀಡಿ ಕಾರ್ಮಿಕ ಉದ್ದಿಮೆಯು ನಶಿಸಿ ಹೋಗುತ್ತಿರುವುದರಿಂದ ಬೀಡಿ ಕಾರ್ಮಿಕರಿಗೆ ಬದಲಿ ವ್ಯವಸ್ಥೆಯನ್ನು ಮಾಡಬೇಕೆಂಬ ಬೇಡಿಕೆ ಇದ್ದು ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ;

(ಆ) ಬೀಡಿ ಕಾರ್ಮಿಕರು ಅನೇಕ ರೋಗಗಳಿಗೆ ಬಲಿಯಾಗುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇರುವ (dispensary) ಸರಿಯಾಗಿ ಕಾರ್ಯನಿರ್ವಹಿಸದೇ ಅವರಿಗೆ ಚಿಕಿತ್ಸೆಗೆ ಅವಕಾಶ ಆಗುತ್ತಿಲ್ಲ ಎಂಬ ದೂರುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಇ.ಎಸ್.ಐ ಆಸ್ಪತ್ರೆಗಳಲ್ಲಿಯೂ ಸಹ ವೈದ್ಯರುಗಳ ಕೊರತೆ ಇದ್ದು, ಅಲ್ಲಿ ಯಾವುದೇ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತಿಲ್ಲ ಎಂಬ ಕೂಗುಗಳಿದ್ದು, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಈ) ದಕ್ಷಿಣ ಕನ್ನಡ ಉಡುಪಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರ ಸಮಸ್ಯೆಗಳಿಗೆ ಸ್ಪಂದಿಸಲು ಸರ್ಕಾರ ಯಾವ ರೀತಿಯ ಕ್ರಮಕೈಗೊಂಡಿದೆ ; ಅವರ ಆರೋಗ್ಯದ ಪರಿಸ್ಥಿತಿ ಮತ್ತು ಅವರ ಬೇಡಿಕೆಗಳಿಗೆ ಸರ್ಕಾರ ಯಾವ ರೀತಿ ಸ್ಪಂದನೆ ಮಾಡುತ್ತಿದೆ ? (ವಿವರ ನೀಡುವುದು)

## ಕೊಂಕಣಿ ಭವನಕ್ಕೆ ಮಂಜೂರಾದ ಅನುದಾನ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೩೫ (೫೦೩) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕೊಂಕಣಿ ಭವನಕ್ಕೆ ಮಂಜೂರಾದ ಅನುದಾನ ಎಷ್ಟು ; ಖರ್ಚು ಮಾಡಿದ ಅನುದಾನ ಎಷ್ಟು ; ಬಾಕಿ ಇರುವ ಹಣ ಎಷ್ಟು ; (ವಿವರ ನೀಡುವುದು)

(ಆ) ಕೊಂಕಣಿ ಅಕಾಡೆಮಿ ಕಟ್ಟಡ ಕಾಮಗಾರಿ ಪೂರ್ಣಗೊಳಿಸದೇ ಕಳೆದ ೪ ವರ್ಷಗಳಿಂದ ಹುಲ್ಲು ಬೆಳೆದು ಕಟ್ಟಡ ಕಾಣಿಸದಿರುವ ಪರಿಸ್ಥಿತಿ ಬಂದಿದ್ದು, ಸದನದಲ್ಲಿ ಆಶ್ವಾಸನೆ ನೀಡಿದ್ದರೂ, ಸಹ ಯಾವುದೇ ಕ್ರಮ ಕೈಗೊಳ್ಳದೇ ಇರಲು ಕಾರಣವೇನು ;

(ಇ) ಕೊಂಕಣಿ ಭಾಷಿಕರನ್ನು ಉದ್ದೇಶಪೂರ್ವಕವಾಗಿ ಸರ್ಕಾರ ನಿರ್ಲಕ್ಷಿಸುತ್ತಿದೆಯೇ ; ಇದಕ್ಕೆ ಕಾರಣವೇನು ;

(ಈ) ಕೊಂಕಣಿ ಅಕಾಡೆಮಿಯ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕೊಂಕಣಿ ಕಲಿಸಲು ಮಾಡುತ್ತಿರುವ ಪ್ರಯತ್ನಗಳಾವುವು ; ಕೊಂಕಣಿ ಭಾಷೆಯನ್ನು ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಉ) ಕೊಂಕಣಿ ಅಕಾಡೆಮಿಗೆ ಮಂಜೂರಾದ ಹುದ್ದೆಗಳೆಷ್ಟು ; ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳೆಷ್ಟು ; ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಿಕೊಳ್ಳಲಾಗುವುದು ? (ವಿವರ ನೀಡುವುದು)

## ಅಲೆಮಾರಿ ಜನಾಂಗದ ಪ್ರವರ್ಗ–೧ ರ ಜಾತಿಗಳಿಗೆ ನೀಡುತ್ತಿರುವ ಸೌಲಭ್ಯಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೪೩೬ (೫೦೫) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೧ನೇ ತರಗತಿಯಿಂದ ಸ್ನಾತಕೋತ್ತರ ಪದವಿವರೆವಿಗೆ ವ್ಯಾಸಂಗ ಮಾಡುತ್ತಿರುವ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಈ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪಾವತಿ ಶುಲ್ಕವನ್ನು ಸಕಾಲದಲ್ಲಿ ಪಾವತಿಸಲಾಗುತ್ತಿದೆಯೇ ಮತ್ತು ಎಷ್ಟು ವಿದ್ಯಾರ್ಥಿ ವೇತನ ಶುಲ್ಕವನ್ನು ಪಾವತಿ ಮಾಡಲಾಗುತ್ತಿದೆ ;

(ಇ) ಹಾಲಿ ನೀಡುತ್ತಿರುವ ವಿದ್ಯಾರ್ಥಿ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆಯು ಸರ್ಕಾರದಲ್ಲಿದೆಯೇ ;

(ಈ) ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರಿಗೆ ನೀಡುತ್ತಿರುವ ಸೌಲಭ್ಯಗಳಂತೆ ಪ್ರವರ್ಗ–೧ರ ವಿದ್ಯಾರ್ಥಿಗಳಿಗೆ ನೀಡುವ ಯೋಜನೆ ಸರ್ಕಾರದಲ್ಲಿದೆಯೇ ; ಇದ್ದಲ್ಲಿ, ಯಾವ ಕ್ರಮಗಳನ್ನು ಜರುಗಿಸಲಾಗುವುದು ? (ಮಾಹಿತಿ ನೀಡುವುದು)

## ೨೦೨೫–೨೬ನೇ ಸಾಲಿನ ವಿದ್ಯಾರ್ಥಿಗಳ ಪ್ರವೇಶಾತಿ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೪೩೭ (೫೦೬) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫–೨೬ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆಯಡಿಯಲ್ಲಿ ಬರುವ ೬ನೇ ತರಗತಿ ಪ್ರವೇಶಕ್ಕೆ ಮಂಜೂರಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; (ವಸತಿ/ಶಾಲಾವಾರು ಮಾಹಿತಿ ನೀಡುವುದು)

(ಆ) ಈ ಪೈಕಿ, ಇದುವರೆವಿಗೂ ದಾಖಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ವಸತಿ/ಶಾಲಾವಾರು ಮತ್ತು ಮೀಸಲಾತಿವಾರು ಮಾಹಿತಿ ನೀಡುವುದು ;

(ಇ) ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೆ ನಿಗಧಿ ಪಡಿಸಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ; ದಾಖಲಾದ ಸಂಖ್ಯೆ ಎಷ್ಟು; (ಶಾಲಾವಾರು ಮಾಹಿತಿ ನೀಡುವುದು)

(ಈ) ಪ್ರಸಕ್ತ ಸಾಲಿನಲ್ಲಿ ವಿದ್ಯಾರ್ಥಿಗಳು ದಾಖಲಾಗದೇ ಉಳಿಕೆಯಾಗಿರುವ ಸೀಟುಗಳನ್ನು ಅಲೆಮಾರಿ ಜನಾಂಗದವರಿಗೆ ನೀಡಲು ಅವಕಾಶವಿದೆಯೇ ; ಇಲ್ಲದೇ ಇದ್ದಲ್ಲಿ, ಅಲೆಮಾರಿ ಜನಾಂಗದ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ವಂಚಿತರಾಗುವುದಿಲ್ಲವೇ ; ಇದಕ್ಕೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ರಾಜ್ಯದಲ್ಲಿರುವ ಅಂಗನವಾಡಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೪೩೮ (೫೦೭) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು; ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು ; ಅಂಗನವಾಡಿಗಳನ್ನು ವಿಂಗಡಿಸಿರುವ ವರ್ಗವಾರು ಮಾಹಿತಿ ನೀಡುವುದು ;

(ಆ) ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಸಹಾಯಕರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಅಂಗನವಾಡಿ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಶಿಕ್ಷಕರ ಮಾಸಿಕ ವೇತನ ಎಷ್ಟು ಮತ್ತು ಸಹಾಯಕರ ಮಾಸಿಕ ವೇತನ ಎಷ್ಟು ;

(ಈ) ಈ ಮಾಸಿಕ ವೇತನವನ್ನು ಹೆಚ್ಚಿಸುವ ಪ್ರಸ್ತಾಪ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಎಷ್ಟು ಹಣವನ್ನು ಹೆಚ್ಚಿಸಲಾಗುವುದು ?

## ರಾಜ್ಯದಲ್ಲಿರುವ ಅಂಗನವಾಡಿಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೪೩೯ (೫೦೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿಗಳಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಪ್ರತಿ ಅಂಗನವಾಡಿಗೆ ಮಂಜೂರು ಮಾಡುವ ಹುದ್ದೆಗಳೆಷ್ಟು ;

(ಇ) ರಾಜ್ಯದಲ್ಲಿ ಒಟ್ಟು ಎಷ್ಟು ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರು ಕಾರ್ಯ ನಿರ್ವಹಿಸುತ್ತಿದ್ದಾರೆ ಹಾಗೂ

ಅವರಿಗೆ ಪ್ರತಿ ತಿಂಗಳು ನೀಡುವ ಗೌರವಧನ ಎಷ್ಟು ಮತ್ತು ಅದನ್ನು ಯಾವ ವರ್ಷದಿಂದ ನಿಗದಿಪಡಿಸಲಾಗಿದೆ ;

(ಈ) ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ಗೌರವಧನ ಬದಲಾಗಿ ಇತರೆ ಸರ್ಕಾರಿ ನೌಕರರಿಗೆ ನೀಡುವಂತೆ ವೇತನ ಶ್ರೇಣಿ ನೀಡಲು ಸರ್ಕಾರ ಚಿಂತನೆ ನಡೆಸಿದೆಯೇ ;

(ಉ) ಅಂಗನವಾಡಿ ಕಾರ್ಯಕರ್ತೆ ಹಾಗೂ ಸಹಾಯಕಿಯರಿಗೆ ನಿವೃತಿ ಹೊಂದುವ ಸಂದರ್ಭದಲ್ಲಿ ಕೊಡುತ್ತಿರುವ ಸೌಲಭ್ಯಗಳೇನು ? (ವಿವರವಾದ ಮಾಹಿತಿ ನೀಡುವುದು)

## ರಾಜ್ಯದಲ್ಲಿ ಕಳೆದ ೫ ವರ್ಷಗಳಲ್ಲಿ ಆದ ಹದಿಹರಿಯದ ಗರ್ಭದಾರಣೆ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೪೪೦ (೫೦೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೧ ರಿಂದ ೨೦೨೬ ರವರೆಗೆ ಹದಿಹರೆಯಾದ ಹೆಣ್ಣು ಮಕ್ಕಳು ಗರ್ಭದಾರಣೆ ಹೊಂದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ನಗರ ಪ್ರದೇಶಗಳಲ್ಲಿ ಈ ಪ್ರಕರಣಗಳು ಹೆಚ್ಚಾಗುತ್ತಿರುವುದಕ್ಕೆ ಸರ್ಕಾರ ನಡೆಸಿದ ಅಧ್ಯಯನ ವರದಿ ಇದೆಯೇ ; ಇದ್ದರೆ, ಅದರ ಪ್ರಮುಖ ಕಾರಣಗಳು ಯಾವುವು ;

(ಇ) ಬಾಲ್ಯವಿವಾಹ ನಿಷೇಧ ಕಾಯ್ದೆ ಹಾಗೂ ಪೋಕ್ಸೋ ಕಾಯ್ದೆ ಜಾರಿಯಲ್ಲಿ ಜಿಲ್ಲಾವಾರು ಎಷ್ಟು ಪ್ರಕರಣಗಳು ದಾಖಲಾಗಿವೆ ; ಮತ್ತು ಎಷ್ಟು ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ ;

(ಈ) ಹದಿಹರೆಯದ ತಾಯಂದಿರ ಪುನರ್ವಸತಿ, ಆರೋಗ್ಯ ಸೇವೆ, ಶಿಕ್ಷಣ ಮುಂದುವರಿಕೆಗೆ ಸರ್ಕಾರ ಹೊಂದಿರುವ ವಿಶೇಷ ಯೋಜನೆಗಳೇನು ;

(ಉ) ಮುಂದಿನ ದಿನಗಳಲ್ಲಿ ಈ ಸಮಸ್ಯೆ ತಡೆಗಟ್ಟಲು ಸರ್ಕಾರ ಕೈಗೊಳ್ಳಲಿರುವ ಕಟ್ಟುನಿಟ್ಟಿನ ನೀತಿ, ಕ್ರಮಗಳ ರೂಪುರೇಷೆ ಏನು ?

## ನೈರ್ಮಲ್ಯ ಮತ್ತು ಕಸ ವಿಲೇವಾರಿ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೧ (೫೧೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) 'ಸ್ವಚ್ಛ ಭಾರತ್ ಮಿಷನ್–ಗ್ರಾಮೀಣ' ಅಡಿಯಲ್ಲಿ ಕಲಬುರಗಿ ಜಿಲ್ಲೆಯಲ್ಲಿ ಎಷ್ಟು ಘನತ್ಯಾಜ್ಯ ವಿಲೇವಾರಿ ಘಟಕಗಳು (Solid Waste Management Units) ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿವೆ ;

(ಆ) ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಸ ಸಂಗ್ರಹಿಸಲು ವಿತರಿಸಲಾದ ಇ–ರಿಕ್ಷಾ ಅಥವಾ ವಾಹನಗಳ ನಿರ್ವಹಣೆಗೆ ಅನುದಾನದ ಕೊರತೆ ಇದೆಯೇ ?

## ಮಹಿಳಾ ಸುರಕ್ಷತೆಗೆ ಕೈಗೊಂಡ ಕ್ರಮಗಳು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೨ (೫೧೨) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಿಂದ ಜಿಲ್ಲೆಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ತಡೆಯಲು ಇರುವ 'ಸಾಂತ್ವನ ಕೇಂದ್ರ'ಗಳಿಗೆ ಸಮರ್ಪಕವಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೇ ;

(ಆ) ಅಲ್ಲಿನ ಸಿಬ್ಬಂದಿಗಳಿಗೆ ವೇತನವನ್ನು ನಿಗದಿತ ಅವಧಿಯಲ್ಲಿ ಪಾವತಿಸಲಾಗಿದೆಯೇ ಇಲ್ಲದಿದ್ದಲ್ಲಿ, ಪಾವತಿಸಲು ಬಾಕಿ ಇರುವ ಮೊತ್ತ ಎಷ್ಟು ;

(ಇ) ಮಹಿಳೆಯರ ಸುರಕ್ಷತೆಗಾಗಿ ಕೈಗೊಂಡಿರುವ ಕ್ರಮಗಳೇನು ?

## ವಲಸೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೩ (೫೧೩) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯಿಂದ ಹೊರ ರಾಜ್ಯಗಳಿಗೆ (ಮುಂಬೈ, ಪುಣೆ, ಹೈದರಾಬಾದ್) ವಲಸೆ ಹೋಗುತ್ತಿರುವ ಕಾರ್ಮಿಕರ ಸುರಕ್ಷತೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಅಂತರರಾಜ್ಯ ವಲಸೆ ಕಾರ್ಮಿಕರ ಕಾಯ್ದೆಯಡಿ ಜಿಲ್ಲೆಯಲ್ಲಿ ಎಷ್ಟು ಜನ ಕಾರ್ಮಿಕರು ನೋಂದಾಯಿತರಾಗಿದ್ದಾರೆ ; ವಲಸೆ ಹೋಗುವ ಕಾರ್ಮಿಕರ ಮಕ್ಕಳಿಗೆ 'ಶಿಶು ವಿಹಾರ' ಅಥವಾ ಸಂಚಾರಿ ಶಾಲೆಗಳ ಸೌಲಭ್ಯವಿದೆಯೇ ?

## ಬೆಳೆ ಹಾನಿ ಮತ್ತು ಪರಿಹಾರ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೪ (೫೧೪) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಹಂಗಾಮಿನಲ್ಲಿ ಸುರಿದ ಅಕಾಲಿಕ ಮಳೆ ಅಥವಾ ಅತಿವೃಷ್ಟಿಯಿಂದಾಗಿ ಕಲಬುರಗಿ ಜಿಲ್ಲೆಯ ಪ್ರಮುಖ ಬೆಳೆಯಾದ

ತೊಗರಿ ಹಾನಿಗೊಳಗಾಗಿದ್ದು, ಎಷ್ಟು ರೈತರಿಗೆ ಇದುವರೆಗೆ ವಿಮಾ ಮೊತ್ತ (Crop Insurance) ತಲುಪಿದೆ ;

(ಆ) ವಿಳಂಬವಾಗುತ್ತಿರುವ ವಿಮಾ ಪಾವತಿಯ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ?

## ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೫ (೫೧೫) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಎಷ್ಟು ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿವೆ ; ಇದರಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಎಷ್ಟು ; ಈ ವಿದ್ಯಾರ್ಥಿ ನಿಲಯಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ ; ಇದರಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆ ಎಷ್ಟು ;

(ಆ) ತೃತೀಯ ಲಿಂಗಗಳಿಗೂ ಈ ವಿದ್ಯಾರ್ಥಿ ನಿಲಯದಲ್ಲಿ ಪ್ರವೇಶಾವಕಾಶ ಇದೆಯೇ ; ತೃತೀಯ ಲಿಂಗಗಳಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆ ಇದೆಯೇ ; ಈಗಿರುವ ಬೇಡಿಕೆಗೆ ಅನುಗುಣವಾಗಿ ಹಿಂದುಳಿದ ವರ್ಗಗಳ ಜನಸಂಖ್ಯೆಯ ಎಷ್ಟು ಪ್ರಮಾಣ ಹಾಸ್ಟೆಲ್ ಸೌಲಭ್ಯ ಹೊಂದಿದೆ ; ಪೂರ್ಣವಾಗಿ ಬೇಡಿಕೆಯನ್ನು ಈಡೇರಿಸಲು/ ಒಂದು ಹಂತಕ್ಕೆ ಮುಟ್ಟಲು ಎಷ್ಟು ಪ್ರಮಾಣಕ್ಕೆ ಹಾಸ್ಟೆಲ್ ಸಂಖ್ಯೆಯನ್ನು ಏರಿಸಬೇಕು ; ಇದಕ್ಕಾಗಿ ಬೇಕಾಗುವ ಹಾಸ್ಟೆಲ್‌ಗಳ ಒಟ್ಟು ಸಂಖ್ಯೆ ಎಷ್ಟು ;

(ಇ) ೨೦೨೩–೨೪, ೨೦೨೪–೨೫, ೨೦೨೫–೨೦೨೬ ರ ಸಾಲುಗಳಲ್ಲಿ ಎಷ್ಟು ಹಿಂದುಳಿದ ವರ್ಗಗಳ ಹಾಸ್ಟೆಲ್

ನಿರ್ಮಾಣವಾಗಿವೆ ; ಪೂರ್ಣಗೊಂಡು ಹಸ್ತಾಂತರವಾಗಿವೆಯೇ ; ಈಗಿರುವ ಒಟ್ಟು OBC ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; ಈ ಎಲ್ಲಾ ಹಾಸ್ಟೆಲ್‌ಗಳ ಸ್ಥಿತಿ–ಗತಿ ಪರಿಶೀಲಿಸಲಾಗಿದೆಯೇ ; ಅದರ ರಿಪೇರಿ ಕಾರ್ಯಕ್ಕೆ ಎಷ್ಟು ಹಣ ದೊರೆತಿದೆ ; ಒಂದೇ ಬಾರಿಗೆ ಈಗಿರುವ ಎಲ್ಲಾ ಹಾಸ್ಟೆಲ್ ಗಳನ್ನೂ ಏಕಕಾಲದಲ್ಲಿ ಸುಸ್ಥಿತಗೊಳಿಸಲು ಎಷ್ಟು ಹಣ ಬೇಕಾಗಿದೆ ;

(ಈ) ನಮ್ಮ ಅವಶ್ಯಕತೆಯನ್ನು ಪೂರೈಸಲು ಬೇಕಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; ಅದಕ್ಕೆ ಬೇಕಿರುವ ಹಣ ಎಷ್ಟು ; ಈಗಿರುವ ಹಾಸ್ಟೆಲ್‌ಗಳಲ್ಲಿ ಮೂಲಭೂತ ಸೌಲಭ್ಯ ಪೂರ್ಣಗೊಳಿಸಲು ಬೇಕಿರುವ ಹಣ ಎಷ್ಟು ;

(ಉ) ಈಗಿರುವ ಹಾಸ್ಟೆಲ್‌ಗಳಲ್ಲಿ ಮೇಲ್ವಿಚಾರಕರ ಕೊರತೆ ಇದೆಯೇ ; ಇದ್ದರೆ, ಎಷ್ಟು ; ಇನ್ನೂ ಎಷ್ಟು ಜನರನ್ನು (ಮಹಿಳಾ ಮತ್ತು ಪುರುಷ) ನಿಯುಕ್ತಿ ಮಾಡಬೇಕು ; ಸ್ವಚ್ಛತೆಗಾಗಿ ಸಿಬ್ಬಂದಿಗಳ ಕೊರತೆ ಇದೆಯೇ ; ಸಿಬ್ಬಂದಿಗಳನ್ನು ಯಾವ ಆಧಾರದ ಮೇಲೆ ನಿಯುಕ್ತಿ ಮಾಡಲಾಗುತ್ತಿದೆ ; ಅವರಿಗೆ ಕೊಡುವ ಸಂಬಳ ಎಷ್ಟು ; ಅದು ಸಾಕಾಗುತ್ತದೆಯೇ ; ಇಲ್ಲವಾದಲ್ಲಿ, ಎಷ್ಟು ಕೊಡಬೇಕು ; ಅದಕ್ಕೆ ತಗಲುವ ವೆಚ್ಚ ಎಷ್ಟು ;

(ಊ) ಹಾಸ್ಟೆಲ್‌ಗಳ ಸಮಗ್ರ ನಿರ್ವಹಣೆ, ಮೇಲ್ವಿಚಾರಕರು, ಆಹಾರ ತಯಾರಿಕಾ ಸಿಬ್ಬಂದಿ, ಸ್ವಚ್ಛತಾ ಸಿಬ್ಬಂದಿ, ರಕ್ಷಣಾ ವ್ಯವಸ್ಥೆ ಸಿಬ್ಬಂದಿ ಸೇರಿದಂತೆ ಸಮಗ್ರ ವಿವರಗಳನ್ನು ನೀಡುವುದು ?

## ಗೃಹ ಲಕ್ಷ್ಮಿ ಯೋಜನೆಯ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೪೬ (೫೧೬) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩-೨೪, ೨೦೨೪-೨೫ ಮತ್ತು ೨೦೨೫-೨೬ನೇ ಸಾಲುಗಳ ಗೃಹ ಲಕ್ಷ್ಮಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿರುವ ಒಟ್ಟು ಫಲಾನುಭವಿಗಳ ಸಂಖ್ಯೆ ಎಷ್ಟು ; ನೋಂದಣಿ ಮಾಡಿಕೊಂಡಿರುವ ಎಲ್ಲಾ ಫಲಾನುಭವಿಗಳಿಗೆ ಹಣ ಪಾವತಿ ಮಾಡಲಾಗಿದೆಯೇ ; ಯೋಜನೆ ಪ್ರಾರಂಭದಿಂದ ಇಲ್ಲಿಯವರೆಗೆ ಎಷ್ಟು ಫಲಾನುಭವಿಗಳಿಗೆ ಎಷ್ಟು ಮೊತ್ತ ಪಾವತಿ ಮಾಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಗೃಹ ಲಕ್ಷ್ಮಿ ಯೋಜನೆಯಲ್ಲಿ ನೋಂದಣಿ ಮಾಡಿಕೊಂಡಿರುವ ಸಾಮಾನ್ಯ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಜನಾಂಗದ ಫಲಾನುಭವಿಗಳ ಸಂಖ್ಯೆ ಎಷ್ಟು ; ಸದರಿ ಫಲಾನುಭವಿಗಳಿಗೆ ಬಳಕೆಯಾದ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಪ್ರಸ್ತುತ ಸಾಲಿನಲ್ಲಿ ಸದರಿ ಯೋಜನೆಗೆ ಸೇರ್ಪಡೆ ಬಯಸಿ ಸಲ್ಲಿಕೆಯಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು ; ಸಲ್ಲಿಕೆಯಾಗಿರುವ ಅರ್ಜಿಗಳನ್ನು ಅನುಮೋದನೆಗೊಳಿಸಲಾಗಿದೆಯೇ ; ಇಲ್ಲವಾದಲ್ಲಿ, ಯಾವ ಕಾರಣಕ್ಕಾಗಿ ಯೋಜನೆಗೆ ಸೇರ್ಪಡೆಗೊಳಿಸಿರುವುದಿಲ್ಲ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ೨೦೨೪-೨೫ ಮತ್ತು ೨೦೨೫-೨೬ ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಯಾವ ತಿಂಗಳುಗಳವರೆಗೆ ಹಣ ಪಾವತಿ ಮಾಡಲಾಗಿದೆ ; ಹಣ ಪಾವತಿ ಬಾಕಿ ಎಷ್ಟು ತಿಂಗಳಿನಿಂದ ಇರುತ್ತದೆ ; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ ; ಬಾಕಿ ಉಳಿಸಿಕೊಂಡ ಹಣವನ್ನು ಪಾವತಿ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ; ೨೦೨೪-೨೫ನೇ ಸಾಲಿನ ಫೆಬ್ರವರಿ ಮತ್ತು ಮಾರ್ಚ್ ತಿಂಗಳಿನ ಬಾಕಿ ಹಣವನ್ನು ಪಾವತಿ ಮಾಡಲಾಗಿದೆಯೇ ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಗ್ರಾಮ ಪಂಚಾಯತ್‌ಗಳಲ್ಲಿ ಫ್ಲೆಕ್ಸ್ ಬ್ಯಾನರ್‌ಗೆ ಅನುಮತಿ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೭ (೫೧೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯಿತಿಗಳಿಗೆ ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಮತ್ತು ಹೋರ್ಡಿಂಗ್ ಅಳವಡಿಕೆಗೆ ಅನುಮತಿ ನೀಡುವ ಅಧಿಕಾರವಿದೆಯೇ ; ಇದ್ದಲ್ಲಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಯಾವ ಪ್ರಕರಣದಲ್ಲಿ ಅವಕಾಶ ನೀಡಲಾಗಿದೆ ; ಇಲ್ಲದಿದ್ದಲ್ಲಿ, ಅನುಮತಿ ನೀಡುವ ಪ್ರಾಧಿಕಾರ ಯಾವುದು ; ಯಾವ ನಿಯಮದಡಿ ಅವಕಾಶ ಕಲ್ಪಿಸಲಾಗಿದೆ ;

(ಆ) ಬ್ಯಾನರ್, ಫ್ಲೆಕ್ಸ್, ಬಂಟಿಂಗ್ಸ್ ಹೋರ್ಡಿಂಗ್ ಅಳವಡಿಕೆಗೆ ಇರುವ ನಿಯಮಗಳು ಮತ್ತು ಶುಲ್ಕಗಳು ಯಾವುವು ; ಇದಕ್ಕೆ ಸಂಬಂಧಿಸಿದ ಆದೇಶ/ನಿಯಮದ ಪ್ರತಿಯನ್ನು ಒದಗಿಸುವುದು ;

(ಇ) ರಸ್ತೆ ಬದಿಯಲ್ಲಿ ಖಾಯಂ ಆಗಿ ಅಳವಡಿಸುವ ಹೋರ್ಡಿಂಗ್‌ಗೆ ಸರ್ಕಾರವು ಏಜೆನ್ಸಿಯನ್ನು ಗೊತ್ತು ಮಾಡಿ ಅವರಿಗೆ ಲೈಸನ್ಸ್ ನೀಡಿದೆಯೇ ? (ಪಟ್ಟಿಯನ್ನು ಜಿಲ್ಲಾವಾರು ಒದಗಿಸುವುದು)

## ಹೊಸದಾಗಿ ಗ್ರಾಮ ಪಂಚಾಯತ್ ರಚನೆಗೆ ಮಾನದಂಡಗಳ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೮ (೫೧೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ ಪ್ರಕಾರ ಹೊಸದಾಗಿ ಗ್ರಾಮ ಪಂಚಾಯಿತಿಗಳನ್ನು ರಚಿಸಬೇಕಾದಲ್ಲಿ ಇರುವ ಮಾನದಂಡಗಳು ಯಾವುವು ; ರಾಜ್ಯಾದ್ಯಂತ ಇರುವ ಗ್ರಾಮಪಂಚಾಯಿತಿಗಳ ಪೈಕಿ ಎಷ್ಟು ಗ್ರಾಮ ಪಂಚಾಯಿತಿಗಳಿಂದ ಹೊಸ ಗ್ರಾಮ ಪಂಚಾಯಿತಿ ರಚನೆಗೆ ಬೇಡಿಕೆ ಬಂದಿದೆ ; ಬೇಡಿಕೆ ಬಂದಿದ್ದಲ್ಲಿ, ಪ್ರಸ್ತಾವನೆಯು ಯಾವ ಹಂತದಲ್ಲಿದೆ ; ಯಾವ ಕಾಲಮಿತಿಯಲ್ಲಿ ಹೊಸ ಗ್ರಾಮ ಪಂಚಾಯಿತಿಗಳ ರಚನೆಯಾಗುತ್ತದೆ ; (ಪಟ್ಟಿ ನೀಡುವುದು)

(ಆ) ಒಂದು ವೇಳೆ ಹೊಸ ಗ್ರಾಮ ಪಂಚಾಯಿತಿಗಳನ್ನು ಸರ್ಕಾರವು ರಚಿಸದೇ ಇದ್ದಲ್ಲಿ ಈಗಾಗಲೇ ಇರುವ ಪಂಚಾಯಿತಿಗಳನ್ನು ಪರಸ್ಪರ ಜೋಡಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; (ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಲಾದ ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ; ಯಾವ ಕಾರಣಗಳಿಗಾಗಿ ಸದರಿ ಗ್ರಾಮ ಪಂಚಾಯಿತಿಗಳನ್ನು ನಗರ ಸ್ಥಳೀಯ ಸಂಸ್ಥೆಗಳಾಗಿ ಪರಿವರ್ತಿಸಲಾಗಿದೆ ?

## ಸ್ಥಳೀಯ ಸಂಸ್ಥೆಗಳಿಗೆ ಜಮೀನು ಮಂಜೂರಾತಿ ಕುರಿತು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೪೯ (೫೨೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗ್ರಾಮೀಣ ಸ್ಥಳೀಯ ಸಂಸ್ಥೆಗಳು (ಗ್ರಾಮ ಪಂಚಾಯಿತಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ) ಮತ್ತು ನಗರ ಸ್ಥಳೀಯ ಸಂಸ್ಥೆಗಳು (ಪಟ್ಟಣ ಪಂಚಾಯಿತಿ, ಪುರಸಭೆ, ನಗರಸಭೆ) ವಿವಿಧ ಸಾರ್ವಜನಿಕ

ಉದ್ದೇಶಕ್ಕೆ ಜಮೀನು ಮಂಜೂರಾತಿ ಕೋರಿ ಸಲ್ಲಿಸಿದ ಪ್ರಸ್ತಾವನೆಗಳ ಪೈಕಿ ಜಮೀನು ಮಂಜೂರಾತಿಗೊಳಿಸಲು ಬಾಕಿ ಇರುವ ಮತ್ತು ತಿರಸ್ಕೃತಗೊಂಡ ಪ್ರಸ್ತಾವನೆಗಳು ಯಾವುವು ; ಪ್ರಸ್ತಾವನೆ ನೀಡಿದ ದಿನಾಂಕ ಸಹಿತಿ ವಿವರ ನೀಡುವುದು ;

(ಆ) ಸದರಿ ಸ್ಥಳೀಯ ಸಂಸ್ಥೆಗಳಿಗೆ ಈಗಾಗಲೇ ಮಂಜೂರಾದ ಜಮೀನನ್ನು ರದ್ದುಪಡಿಸಲಾದ ಪ್ರಕರಣಗಳು ಇವೆಯೇ ; (ವಿವರ ನೀಡುವುದು)

(ಇ) ಗ್ರಾಮೀಣ ಸ್ಥಳೀಯ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳು ವಿವಿಧ ಸಾರ್ವಜನಿಕ ಉದ್ದೇಶಕ್ಕೆ ಭೂ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ಯಾವ ಕಾಲಮಿತಿಯೊಳಗೆ ಭೂ ಮಂಜೂರಾತಿಗೊಳಿಸಲು ಕ್ರಮ ವಹಿಸಲಾಗುತ್ತಿದೆ ;

(ಈ) ವಿವಿಧ ಸರ್ಕಾರಿ ಕಛೇರಿಗಳಿಂದ ಭೂ ಮಂಜೂರಾತಿ ಕೋರಿ ಸಲ್ಲಿಸುವ ಪ್ರಸ್ತಾವನೆಗಳನ್ನು ಈಡೇರಿಸಲು ಸದರಿ ಅರ್ಜಿಗಳ ಸೂಕ್ತ ವಿಲೇವಾರಿಗೆ ಮೇಲುಸ್ತುವಾರಿ ಪ್ರಾಧಿಕಾರ ಯಾವುದು ;

(ಉ) ಸದರಿ ಜಿಲ್ಲೆಗಳಲ್ಲಿ ಸಾರ್ವಜನಿಕ ಉದ್ದೇಶಕ್ಕೆ ಲಭ್ಯವಿರುವ ಸರ್ಕಾರಿ ಜಮೀನುಗಳು ಎಷ್ಟು ? (ಸರ್ವೆ ನಂಬರ್ ಸಹಿತ ವಿಸ್ತೀರ್ಣ ವಿವರಣೆ ನೀಡುವುದು)

## ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸೌಲಭ್ಯದ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೦ (೫೨೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೊಳವೆಬಾವಿ, ತೆರೆದಬಾವಿ ಮತ್ತು ಕೆರೆಗಳ ನೀರನ್ನು ಮೇಲೆತ್ತುವ ಪಂಪ್‌ಸೆಟ್‌ಗಳಿಗೆ ವಿದ್ಯುತ್

ಸಂಪರ್ಕ ಪಡೆಯಲು ನಿರಾಕ್ಷೇಪಣಾ ಪತ್ರವನ್ನು ಯಾರಿಂದ ಪಡೆಯಬೇಕು ; ನಿರಾಕ್ಷೇಪಣಾ ಪತ್ರ ಪಡೆಯಲು ಅರ್ಜಿಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳು ಯಾವುವು ; (ಆದೇಶದ ಪ್ರತಿ ನೀಡುವುದು)

(ಆ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರು ಮತ್ತು ಕೃಷಿಗೆ ಕೊಳವೆಬಾವಿ ಕೊರೆಯಲು ಅನುಮತಿ ನೀಡುವ ಸಕ್ಷಮ ಪ್ರಾಧಿಕಾರ ಯಾವುದು ; (ನಿಯಮದ ಪ್ರತಿ ಲಗತ್ತಿಸುವುದು)

(ಇ) ಮಿತಿಮೀರಿದ ಅಂತರ್ಜಲ ಬಳಕೆ ಅಥವಾ ಅಧಿಸೂಚಿತವಲ್ಲದ ಪ್ರದೇಶದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲದಿಂದ ೫೦೦ ಮೀಟರ್ ದೂರದಲ್ಲಿ ಕೊಳವೆಬಾವಿ ಕೊರೆಯಲು ಅನುಮತಿ ನೀಡಲು ಗ್ರಾಮ ಪಂಚಾಯಿತಿಗೆ ಅಧಿಕಾರವಿದೆಯೇ ; (ಅದೇಶದ ಪ್ರತಿ ನೀಡುವುದು)

(ಈ) ೫೦೦ ಮೀಟರ್ ಅಂತರದಲ್ಲಿ ಸಾರ್ವಜನಿಕ ಕುಡಿಯುವ ನೀರಿನ ಮೂಲಗಳು ಇದ್ದಲ್ಲಿ, ಕುಡಿಯುವ ನೀರಿನ ಉದ್ದೇಶಕ್ಕೆ ಕೊಳವೆಬಾವಿ ಕೊರೆಯಲು ಅನುಮತಿ ನೀಡುವ ಅಧಿಕಾರ ಗ್ರಾಮ ಪಂಚಾಯಿತಿಗೆ ಇದೆಯೇ; ಅದೇಶದ ಪ್ರತಿ ನೀಡುವುದು ;

(ಉ) ಕೊಳವೆಬಾವಿ ಅನುಮತಿ ಪಡೆಯುವ ಅರ್ಜಿಯನ್ನು ಎಲ್ಲಿಂದ ಪಡೆಯಬೇಕು ಹಾಗೂ ಅರ್ಜಿಯ ಜೊತೆ ಲಗತ್ತಿಸಬೇಕಾದ ದಾಖಲೆಗಳು ಯಾವುವು ; ಸಕಾಲ ಅಧಿನಿಯಮದಡಿ ಇದಕ್ಕೆ ಕಾಲಮಿತಿ ಏನು ?

## ರಾಜ್ಯದಲ್ಲಿರುವ ಕುಬ್ಜ ಮಕ್ಕಳ ಕುಬ್ಜತೆಯನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೧ (೫೨೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಅತಿ ಹೆಚ್ಚು ಕುಬ್ಜ ಮಕ್ಕಳ ಸಂಖ್ಯೆ ದಾಖಲಾಗಿರುವ ಜಿಲ್ಲೆಗಳು ಯಾವುವು ; (ಜಿಲ್ಲಾವಾರು ಸಂಖ್ಯೆಯನ್ನು ಒದಗಿಸುವುದು)

(ಆ) ದೇಶದಲ್ಲಿಯೇ ರಾಯಚೂರು ಜಿಲ್ಲೆಯಲ್ಲಿ ಕುಬ್ಜ ಮಕ್ಕಳ ಸಂಖ್ಯೆ ಹೆಚ್ಚು ಎಂಬ ಮಾಹಿತಿ ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಅದನ್ನು ದೃಢೀಕರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಕುಬ್ಜತೆಯನ್ನು ತಡೆಗಟ್ಟಲು ಮತ್ತು ಕಡಿಮೆ ಮಾಡಲು ಪೌಷ್ಠಿಕಾಂಶ, ಆರೋಗ್ಯ ತಪಾಸಣೆ ಮತ್ತು ಪೂರಕ ಆಹಾರ ಕಾರ್ಯಕ್ರಮಗಳ ಮೂಲಕ ಸರ್ಕಾರ ಯಾವ ಯಾವ ಕ್ರಮಗಳನ್ನು ಜಾರಿಗೆ ತಂದಿದೆ ;

(ಈ) ಅಂಗನವಾಡಿ ಕೇಂದ್ರಗಳಲ್ಲಿ ಸಮರ್ಪಕ ಪೌಷ್ಠಿಕ ಆಹಾರ ಪೂರೈಕೆ ಆಗುತ್ತಿಲ್ಲ ಎಂಬ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ, ಆಹಾರ ಪೂರೈಕೆಯನ್ನು ಖಾತ್ರಿಪಡಿಸಲು ತೆಗೆದುಕೊಂಡ ಕ್ರಮಗಳೇನು ;

(ಉ) ಅಂಗನವಾಡಿ ಕೇಂದ್ರಗಳಲ್ಲಿ ಶುದ್ಧ ಕುಡಿಯುವ ನೀರು, ಶೌಚಾಲಯ ಮತ್ತು ಮೂಲಸೌಲಭ್ಯಗಳ ಕೊರತೆ ಬಗ್ಗೆ ಬಂದಿರುವ ದೂರಿನ ಹಿನ್ನಲೆಯಲ್ಲಿ ಈ ಸೌಲಭ್ಯಗಳನ್ನು ಒದಗಿಸಲು ಅಥವಾ ಸುಧಾರಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ ?

## ಮೆಟ್ರಿಕ್ ಪೂರ್ವ ನಂತರದ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿ ವಸತಿ ನಿಲಯಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೨ (೫೨೪) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಭಾಗದಲ್ಲಿ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್

ನಂತರದ ವಸತಿ ಶಾಲೆಗಳು ಮತ್ತು ವಿದ್ಯಾರ್ಥಿ ವಸತಿ ನಿಲಯಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ಕಲ್ಯಾಣ ಕರ್ನಾಟಕದ ಯಾವ ಯಾವ ಜಿಲ್ಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ವಸತಿ ನಿಲಯಗಳ ಕೊರತೆ ಇದೆ ; (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು)

(ಇ) ಕೆಲವು ಜಿಲ್ಲೆಗಳಲ್ಲಿ ಅಗತ್ಯವಿರುವಷ್ಟು ವಸತಿ ನಿಲಯಗಳು ಇಲ್ಲದಿರುವುದರಿಂದ ಬಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಮುದಾಯದ ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದಲ್ಲಿ, ವಸತಿ ನಿಲಯಗಳ ಕೊರತೆಯನ್ನು ನಿವಾರಿಸಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಶಿಕ್ಷಣ ಹಕ್ಕು ರಕ್ಷಿಸಲು ಸರ್ಕಾರ ಇದುವರೆಗೆ ಯಾವ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿದೆ ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ಕುರಿತು

**ಶ್ರೀ ಕುಶಲಾಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೩ (೫೪೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಕೊಡಗು ಜಿಲ್ಲೆಗೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ವಿವಿಧ ಯೋಜನೆಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆಯಾದ ಒಟ್ಟು ಅನುದಾನ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಕೈಗೊಂಡಿರುವ ಕಾಮಗಾರಿಗಳು ಪ್ರಗತಿಯಲ್ಲಿರುವ ಕಾಮಗಾರಿ, ಪೂರ್ಣಗೊಂಡಿರುವ ಕಾಮಗಾರಿಗಳು ಮತ್ತು ಬಾಕಿ ಇರುವ ಕಾಮಗಾರಿಗಳ ವಿವರವನ್ನು ಹಾಗೂ ಮೀಸಲಿಟ್ಟ ಅನುದಾನ ಎಷ್ಟು ? (ತಾಲ್ಲೂಕುವಾರು ವಿವರ ನೀಡುವುದು)

## ಆಶಾ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಗೌರವಧನದ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೫೪ (೫೨೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ಆಶಾ ಕಾರ್ಯಕರ್ತೆಯರಿಗೆ ಮಾಸಿಕ ರೂ.೧೦,೦೦೦ ನಿಶ್ಚಿತ ಗೌರವಧನ ನೀಡುವುದಾಗಿ ಘೋಷಿಸಿದ್ದರೂ ಈವರೆಗೆ ಈ ಭರವಸೆ ಅನುಷ್ಠಾನಗೊಂಡಿಲ್ಲ ; ಈ ಭರವಸೆಯನ್ನು ಮರೆತ ಸರ್ಕಾರದ ನೈತಿಕ ಹೊಣೆಗಾರಿಕೆ ಏನು ;

(ಆ) ಪ್ರಸ್ತುತ ಆಶಾ ಕಾರ್ಯಕರ್ತೆಯರಿಗೆ ನೀಡಲಾಗುತ್ತಿರುವ ಗೌರವಧನದ ಪ್ರಮಾಣ ಎಷ್ಟು ; ಕಳೆದ ೩ ವರ್ಷಗಳಲ್ಲಿ ಗೌರವಧನ ಪಾವತಿಯಲ್ಲಿ ಎಷ್ಟು ಬಾರಿ ವಿಳಂಬವಾಗಿದೆ ;

(ಇ) ಕೋವಿಡ್ ಸಂದರ್ಭದಲ್ಲಿ ಅತಿಯಾದ ಜವಾಬ್ದಾರಿ ಹೊತ್ತು ಶ್ರಮಿಸಿದ ಆಶಾ ಕಾರ್ಯಕರ್ತೆಯರಿಗೆ ಸರ್ಕಾರ ಈವರೆಗೆ ಸೂಕ್ತ ಮಾನ್ಯತೆ ಮತ್ತು ನಿಗದಿತ ವೇತನ ನೀಡದಿರುವುದು ತಾರತಮ್ಯವಲ್ಲವೆ ;

(ಈ) ಆಶಾ ಕಾರ್ಯಕರ್ತೆಯರಿಗೆ ನಿಗದಿತ ಗೌರವಧನ ಜಾರಿಗೆ ಯಾವುದೇ ಅಧಿಕೃತ ಆದೇಶ ಹೊರಡಿಸಲಾಗಿದೆಯೇ ; ಇಲ್ಲದಿದ್ದರೆ, ಈ ಭರವಸೆಯು ಕೇವಲ ಚುನಾವಣಾ ಚುಟುಕು ಮಾತಲ್ಲವೆ ;

(ಉ) ಆಶಾ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಯಾವಾಗ ಪರಿಷ್ಕೃತ ಆದೇಶ ಹೊರಡಿಸಲಿದೆ ; ಈ ಸಂಬಂಧ ಸ್ಪಷ್ಟವಾದ ಟೈಮ್ ಲೈನ್ ನೀಡಲಾಗುವುದೆ ?

## ಅಂಗನವಾಡಿ ಕಟ್ಟಡ ನಿರ್ಮಾಣ ಮಾಡಲು ಅನುದಾನ ಬಿಡುಗಡೆ ಮಾಡುವ ಬಗ್ಗೆ

**ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೫೫ (೫೪೮) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯ ಹುನಗುಂದ, ಇಳಕಲ್ ತಾಲ್ಲೂಕುಗಳಲ್ಲಿ ೧೭ ಹಾಗೂ ಬೀಳಗಿಯಲ್ಲಿ ೪ ಅಂಗನವಾಡಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಒಟ್ಟು ೨೧ ಸಿ.ಎ.ಸೈಟ್ ಗಳನ್ನು ಖರೀದಿ ಮಾಡಲು ತಗಲುವ ವೆಚ್ಚವನ್ನು ಸರ್ಕಾರವು ಬಿಡುಗಡೆ ಮಾಡಲು ಮುಂದಾಗದೇ ಇರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಅಂಗನವಾಡಿ ಕಟ್ಟಡಗಳನ್ನು ನಿರ್ಮಿಸಲು ಅನುದಾನ ಬಿಡುಗಡೆ ಮಾಡುವುದು ಯಾವಾಗ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ವಸತಿ ಶಾಲೆ/ಕಾಲೇಜು/ವಸತಿ ನಿಲಯಗಳಲ್ಲಿ ಸಾವನ್ನಪ್ಪಿರುವ ವಿದ್ಯಾರ್ಥಿಗಳ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೪೫೬ (೫೨೭) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದಲ್ಲಿ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ವಿವಿಧ ವಸತಿ ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ಕಳೆದ ೩ ವರ್ಷಗಳಲ್ಲಿ ಸಾವನ್ನಪ್ಪಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ;

(ಆ) ವಿದ್ಯಾರ್ಥಿಗಳ ಸಾವಿನ ಪ್ರಕರಣಗಳು ಹೇಗೆ (ಆತ್ಮಹತ್ಯೆ, ಅಸಹಜ ಅಥವಾ ಇತರೆ ಕಾರಣಗಳಿಗಾಗಿ) ಸಂಭವಿಸಿವೆ ; (ಜಿಲ್ಲಾವಾರು, ವರ್ಷವಾರು ಹಾಗೂ ವಸತಿ ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ಘಟಿಸಿದ ಒಟ್ಟು ಸಂಖ್ಯೆಯ ಮಾಹಿತಿ ನೀಡುವುದು)

(ಇ) ವಸತಿ ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ಲೈಂಗಿಕ ಶೋಷಣೆ/ದೌರ್ಜನ್ಯಕ್ಕೆ ಒಳಗಾದ ಪ್ರಕರಣಗಳಿವೆಯೇ ; ಇದ್ದಲ್ಲಿ, ಕಳೆದ ೩ ವರ್ಷಗಳಲ್ಲಿ ವರದಿಯಾದ ಪ್ರಕರಣಗಳ ಮಾಹಿತಿ ನೀಡುವುದು ; (ಜಿಲ್ಲಾವಾರು, ವರ್ಷವಾರು ಮಾಹಿತಿ ಒದಗಿಸುವುದು)

(ಈ) ಲೈಂಗಿಕ ದೌರ್ಜನ್ಯ/ಶೋಷಣೆ ಎದುರಾಗುವ ಸಂದರ್ಭದಲ್ಲಿ ತಮ್ಮನ್ನು ಸ್ವಯಂ ರಕ್ಷಿಸಿಕೊಳ್ಳಲು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಲಾಗಿದೆಯೇ ;

(ಉ) ವಸತಿ ಶಾಲೆ, ಕಾಲೇಜು ಮತ್ತು ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆ ಮತ್ತು ಭದ್ರತೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

## ಒಂಬುಡ್ಸ್‌ಮನ್ ಆದೇಶಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೪೫೭ (೫೨೮) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಒಂಬುಡ್ಸ್ ಮನ್ ಕಛೇರಿಯಲ್ಲಿ ಕಳೆದ ೩ ವರ್ಷಗಳಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ಈ ಪೈಕಿ ವಿಚಾರಣೆ ಹಂತದಲ್ಲಿರುವ, ವಿಲೇಯಾದ, ಸಾಬೀತಾದ, ವಸೂಲಾತಿಗೆ ಶಿಫಾರಸ್ಸು ಮಾಡಲಾದ ಪ್ರಕರಣಗಳ ಸಂಖ್ಯೆ ಎಷ್ಟು ; ವಸೂಲಾತಿಗೆ ಸೂಚಿಸಲಾದ ಮೊತ್ತ ಎಷ್ಟು ; (ಮಂಡ್ಯ, ಮೈಸೂರು, ಹಾಸನ, ಚಾಮರಾಜನಗರ, ಕೊಡಗು ಜಿಲ್ಲೆಗಳಿಗೆ ಸಂಬಂಧಿಸಿದಂತೆ ತಾಲ್ಲೂಕುವಾರು, ವರ್ಷವಾರು ಮಾಹಿತಿ ನೀಡುವುದು)

(ಆ) ಮೇಲ್ಕಾಣಿಸಿದ ಜಿಲ್ಲೆಗಳಲ್ಲಿ ಮತ್ತು ಅವಧಿಯಲ್ಲಿ ಒಂಬುಡ್ಸ್ ಮನ್ ಆದೇಶದ ಅನುಸಾರ ಆಯಾಯ ಜಿಲ್ಲಾ ಪಂಚಾಯತ್ ಕಛೇರಿಗಳಲ್ಲಿ ವಸೂಲಾತಿ ಮಾಡಲಾದ ಮೊತ್ತ ಹಾಗೂ ವಸೂಲಾತಿಗೆ ಬಾಕಿ ಇರುವ ಮೊತ್ತ ಎಷ್ಟು ; (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಜಿಲ್ಲಾ ಒಂಬುಡ್ಸ್‌ಮನ್ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಪ್ರಕರಣಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಪ್ರಕರಣಗಳಲ್ಲಿ ಜಿಲ್ಲಾ ಒಂಬುಡ್ಸ್ ಮನ್ ಆದೇಶದ ಪರವಾಗಿ ಹಾಗೂ ವಿರುದ್ಧ ಆದೇಶವಾಗಿದೆ ; (ವರ್ಷವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಮಹಾತ್ಮ ಗಾಂಧಿ ನರೇಗಾ ಯೋಜನೆಯ ನಿಯಮಾವಳಿ/ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ ಅಧಿಕಾರಿಗಳು/ ಅಧಿಕಾರಿಯೇತರರುಗಳ ವಿರುದ್ಧ ತೆಗೆದುಕೊಂಡಿರುವ ಶಿಸ್ತು ಕ್ರಮಗಳೇನು ; (ಇಲಾಖಾ ವಿಚಾರಣೆ, ದಂಡ, ದಂಡನೆ, ಸೇವೆಯಿಂದ ಅಮಾನತು, ದಾಖಲಿಸಿರುವ ಕ್ರಿಮಿನಲ್ ಮೊಕದ್ದಮ್ಮೆ (ಅಧಿಕಾರಿ/ನೌಕರರು/ಜನಪ್ರತಿನಿಧಿಗಳು) ದಂಡನಾದೇಶ/ವಸೂಲಾತಿ ಆದೇಶಗಳ ಮೇಲೆ ನ್ಯಾಯಾಲಯದಿಂದ ತಡೆಯಾಜ್ಞೆ ಪಡೆದಿರುವುದು, ಸೇವೆಯಿಂದ ವಜಾ.. ಇತ್ಯಾದಿ) ; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ವಸೂಲಾತಿ ಆದೇಶಗಳ ಮೇಲೆ ತ್ವರಿತವಾಗಿ ಕ್ರಮ ವಹಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; ಯಾವ ಕಾಲಮಿತಿಯಲ್ಲಿ ಬಾಕಿ ಹಣ ವಸೂಲಾತಿ ಮಾಡಲಾಗುವುದು ; (ಸಂಪೂರ್ಣ ವಿವರ ನೀಡುವುದು)

(ಊ) ಜಿಲ್ಲಾ ಒಂಬುಡ್ಸ್‌ಮನ್ ಕಛೇರಿಗೆ ಬರುವ ದೂರುಗಳು ಯಾವ ಸ್ವರೂಪದ್ದಾಗಿರುತ್ತದೆ ; ಈ ದೂರುಗಳನ್ನು ಮುಕ್ತಾಯಗೊಳಿಸಲು ನಿಗದಿಪಡಿಸಿರುವ ಕಾಲಮಿತಿ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ನ್ಯಾಯಾಲಯ ಪ್ರಕರಣಗಳಲ್ಲಿ ಪಾವತಿಸಬೇಕಿರುವ ಗೌರವಧನ/ಶುಲ್ಕ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೪೫೮ (೫೨೯) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ನ್ಯಾಯಾಲಯ (ಘನ ನ್ಯಾಯಾಲಯಗಳಾದ ಸುಪ್ರೀಂ ಕೋರ್ಟ್, ಹೈಕೋರ್ಟ್, ಕೆಎಟಿ ಹಾಗೂ ಇನ್ನಿತರೆ ಕೆಳ ಹಂತದ ನ್ಯಾಯಾಲಯಗಳಲ್ಲಿ) ಪ್ರಕರಣಗಳಲ್ಲಿ ಇಲಾಖೆಗಳು ನೇಮಿಸಿಕೊಂಡಿರುವ ಪ್ಯಾನೆಲ್ ಅಡ್ವಕೇಟ್‌ಗೆ ಗೌರವಧನ ಅಥವಾ ಶುಲ್ಕ ಪಾವತಿಸುವಾಗ ಇಡೀ ಪ್ರಕರಣಕ್ಕೆ ಅನ್ವಯಿಸಿ ಪಾವತಿಸಲಾಗುವುದೇ ಅಥವಾ ಪ್ರತಿ ಬಾರಿಯ effective hearing and ineffective hearing ಗೆ ಪಾವತಿಸಲಾಗುತ್ತದೆಯೇ ; (ಸಂಪೂರ್ಣ ವಿವರ ನೀಡುವುದು)

(ಆ) ಗೌರವ ಸಂಭಾವನೆ ಮೊತ್ತವು ಇಡೀ ಪ್ರಕರಣಕ್ಕೆ ಸಂಬಂಧಿಸಿದ್ದಲ್ಲಿ, Effective hearing and ineffective hearing ಅನ್ನು

(ಆದೇಶವಾಗುವವರೆಗೂ) ಒಳಗೊಂಡಿರುತ್ತದೆಯೇ ; ಅಥವಾ ಪ್ರತ್ಯೇಕವಾಗಿರುತ್ತದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ವಿವಿಧ ಹಂತದ ಘನ ನ್ಯಾಯಾಲಯಗಳಲ್ಲಿರುವ ಪ್ರಕರಣಗಳಲ್ಲಿ ಇಲಾಖೆಗಳ ಪರ ವಕಾಲತ್ತು ವಹಿಸಲು ಪ್ಯಾನೆಲ್ ಅಡ್ವಕೇಟ್‌ಗೆ ಪ್ರತ್ಯೇಕ ಶುಲ್ಕ ನಿಗದಿಪಡಿಸಲಾಗಿದೆಯೇ ಅಥವಾ ಶುಲ್ಕ ಏಕರೂಪವಾಗಿರಲಿದೆಯೇ ;

(ಈ) ಪ್ರತ್ಯೇಕವಾಗಿದ್ದಲ್ಲಿ, ವಿವಿಧ ಶ್ರೇಣಿಯ ನ್ಯಾಯಾಲಯಗಳಲ್ಲಿ ಪ್ರತಿನಿಧಿಸಿದಾಗ ಪ್ಯಾನೆಲ್ ಅಡ್ವಕೇಟ್‌ಗೆ ಪಾವತಿಸಬೇಕಿರುವ ಗರಿಷ್ಠ ಗೌರವಧನ ಅಥವಾ ಶುಲ್ಕ ಎಷ್ಟು ; (ನ್ಯಾಯಾಲಯದ ಹಂತವಾರು ಆದೇಶ ಪ್ರತಿಯೊಂದಿಗೆ ಸಂಪೂರ್ಣ ವಿವರ ನೀಡುವುದು)

(ಉ) ಮಾನ್ಯ ಉಚ್ಚ ನ್ಯಾಯಾಲಯದಲ್ಲಿನ ಪ್ರಕರಣಗಳಿಗೆ Senior Counsel ಗಳನ್ನೇ ಪ್ಯಾನೆಲ್ ಅಡ್ವಕೇಟ್ ಆಗಿ ನೇಮಕ ಮಾಡಿಕೊಳ್ಳಬೇಕೇ ; (ಆದೇಶ ಪ್ರತಿ ಒದಗಿಸುವುದು)

(ಊ) ಇಲಾಖಾ ವ್ಯಾಪ್ತಿಯ ಕೆಲವು ಕಛೇರಿಗಳಲ್ಲಿ ಮನಸೋಇಚ್ಛೆ ಶುಲ್ಕವನ್ನು ಪಾವತಿಸಲಾಗುತ್ತಿದ್ದು, ಇದನ್ನು ತಪ್ಪಿಸಲು ಸರ್ಕಾರದ ಕ್ರಮವೇನು ಹಾಗೂ ನ್ಯಾಯಾಲಯ ಪ್ರಕರಣಗಳಲ್ಲಿ ಶುಲ್ಕ ಪಾವತಿಸಲು ಪ್ರಸ್ತುತ ಅನುಸರಿಸುತ್ತಿರುವ ಆದೇಶದ ಪ್ರತಿಯನ್ನು ನೀಡುವುದು ?

## ZP/TP/GP ಸ್ವಾಮ್ಯದಲ್ಲಿರುವ ವಾಣಿಜ್ಯ ಮಳಿಗೆಗಳ ಬಾಡಿಗೆ ವಸೂಲಾತಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೪೬೯ (೫೩೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಸ್ವಾಮ್ಯದಲ್ಲಿದ್ದು ಬಾಡಿಗೆಗೆ ನೀಡಲಾಗಿರುವ ಅಂಗಡಿ ಮಳಿಗೆಗಳು, ವಾಣಿಜ್ಯ ಮಳಿಗೆಗಳು ಹಾಗೂ ಇನ್ನಿತರೆ ವಾಣಿಜ್ಯ ಉದ್ದೇಶದ ಖಾಲಿ ನಿವೇಶನಗಳ ಬಾಡಿಗೆ ಮೊತ್ತವನ್ನು ಸಕಾಲದಲ್ಲಿ ವಸೂಲಾತಿ ಮಾಡದಿರುವುದರಿಂದ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟವುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದ್ದಲ್ಲಿ, ಬಾಕಿ ಮೊತ್ತ ವಸೂಲಾತಿ ಹಾಗೂ ಬಾಡಿಗೆ ಪಾವತಿಸಲು ಹಿಂದೇಟು ಹಾಕುತ್ತಿರುವವರನ್ನು ತೆರವುಗೊಳಿಸಲು ತೆಗೆದುಕೊಂಡಿರುವ ಕಠಿಣ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿಗಳ ಸ್ವಾಮ್ಯದಲ್ಲಿರುವ ಅಂಗಡಿ ಮಳಿಗೆಗಳು, ವಾಣಿಜ್ಯ ಮಳಿಗೆಗಳು ಮತ್ತು ಇನ್ನಿತರೆ ವಾಣಿಜ್ಯ ಉದ್ದೇಶದ ಖಾಲಿ/ ನಿವೇಶನಗಳ ಸಂಖ್ಯೆ ಎಷ್ಟು ; ಇವುಗಳಿಂದ ಬರುವ ವಾರ್ಷಿಕ ಆದಾಯ ಹಾಗೂ ವಸೂಲಾತಿಸಲು ಬಾಕಿ ಇರುವ ಮೊತ್ತ ಎಷ್ಟು ; (ಜಿಲ್ಲಾವಾರು, ಜಿಲ್ಲಾ/ತಾಲ್ಲೂಕು/ಗ್ರಾಮ ಪಂಚಾಯಿತಿಗಳ ಸಂಪೂರ್ಣ ವಿವರ ನೀಡುವುದು)

(ಈ) ಬಾಡಿಗೆಗೆ ನೀಡಲಾಗುವ ಅಂಗಡಿ/ವಾಣಿಜ್ಯ ಮಳಿಗೆಗಳ ಕರಾರು ಅಥವಾ ಹರಾಜು ಪ್ರಕ್ರಿಯೆಯನ್ನು ಎಷ್ಟು ವರ್ಷಕ್ಕೊಮ್ಮೆ ಮಾಡಿಕೊಳ್ಳಬೇಕು ಅಥವಾ ನವೀಕರಿಸಬೇಕು ? (ವಿವರ ನೀಡುವುದು)

## ವಸತಿ ನಿಲಯಗಳ (Hostels) ಸ್ಥಿತಿಗತಿ ಬಗ್ಗೆ

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೦ (೫೩೧) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಯುತ್ತಿರುವ ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಸತಿ ನಿಲಯಗಳ ಸಂಖ್ಯೆ ಎಷ್ಟು ;

(ಆ) ಕಳೆದ ಮೂರು ವರ್ಷಗಳಲ್ಲಿ ಈ ವಸತಿ ನಿಲಯಗಳ ನಿರ್ವಹಣೆಗಾಗಿ ಬಿಡುಗಡೆಯಾದ ಮತ್ತು ಬಳಕೆಯಾದ ಅನುದಾನ ಎಷ್ಟು ;

(ಇ) ಸ್ವಂತ ಕಟ್ಟಡವಿಲ್ಲದ ವಸತಿ ನಿಲಯಗಳೆಷ್ಟು ; ಹೊಸ ಕಟ್ಟಡ ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೀದರ್ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟ ಕುಸಿದಿರುವುದರಿಂದ ನದಿ ಮೂಲದ ನೀರು ಸರಬರಾಜಿನ ಬಗ್ಗೆ

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೧ (೫೩೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಔರಾದ್ ಮತ್ತು ಭಾಲ್ಕಿ ತಾಲ್ಲೂಕುಗಳಲ್ಲಿ ಹಮ್ಮಿಕೊಂಡಿರುವ ಬಹುಗ್ರಾಮ ಕುಡಿಯುವ ನೀರು ಯೋಜನೆಗಳು (Multi Village Schemes) ಪ್ರಸ್ತುತ ಯಾವ ಹಂತದಲ್ಲಿವೆ ;

(ಆ) ಮಾಂಜ್ರಾ ನದಿಯಿಂದ ನೀರು ಪೂರೈಸುವ ಯೋಜನೆಗಳು ವಿಳಂಬವಾಗಲು ಕಾರಣವೇನು ; ಈ ಯೋಜನೆಗಳನ್ನು ಪೂರ್ಣಗೊಳಿಸಲು ನಿಗದಿಪಡಿಸಿದ ಕಾಲಮಿತಿ ಏನು ;

(ಇ) ಜಿಲ್ಲೆಯಲ್ಲಿ 'ಮನೆ ಮನೆಗೆ ಗಂಗೆ' ಯೋಜನೆಯಡಿ ಎಷ್ಟು ಗ್ರಾಮಗಳಲ್ಲಿ ಕಾಮಗಾರಿಗಳು ಅರ್ಧಕ್ಕೆ ನಿಂತಿವೆ ; ಕಳಪೆ ಕಾಮಗಾರಿ ಮಾಡಿದ ಗುತ್ತಿಗೆದಾರರ ಮೇಲೆ ಕೈಗೊಂಡ ಕ್ರಮವೇನು ?

## ಬೆಳೆ ವಿಮೆ (Fasal Bima Yojana) ಮತ್ತು ಪರಿಹಾರದ ಕುರಿತು

**ಡಾ|| ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೨ (೫೩೩) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯಲ್ಲಿ ೨೦೨೪–೨೫ನೇ ಸಾಲಿನಲ್ಲಿ "ಪ್ರಧಾನ ಮಂತ್ರಿ ಫಸಲ್ ಭಿಮಾ ಯೋಜನೆ" ಯಡಿ ಎಷ್ಟು ರೈತರು ನೋಂದಾಯಿಸಿಕೊಂಡಿದ್ದಾರೆ ;

(ಆ) ಕಳೆದ ಸಾಲಿನಲ್ಲಿ ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ಬೆಳೆ ಹಾನಿಗೊಳಗಾದ ಎಷ್ಟು ರೈತರಿಗೆ ಇನ್ನೂ ವಿಮಾ ಮೊತ್ತ ಪಾವತಿಯಾಗಿಲ್ಲ ; ವಿಳಂಬಕ್ಕೆ ಕಾರಣವೇನು ;

(ಇ) ಜಿಲ್ಲೆಯಲ್ಲಿ ಒಣ ಬೇಸಾಯ ಮಾಡುವ ರೈತರಿಗೆ ಸರ್ಕಾರದಿಂದ ಘೋಷಿಸಲಾದ ಬರ ಪರಿಹಾರದ ಮೊತ್ತವು ಪೂರ್ಣ ಪ್ರಮಾಣದಲ್ಲಿ ವಿತರಣೆಯಾಗಿದೆಯೇ ?

## ಹಿಂದುಳಿದ ವರ್ಗಗಳ ಯುವಕರಿಗೆ ನೀಡಲಾಗುವ "ಸ್ವಯಂ ಉದ್ಯೋಗ ನೇರ ಸಾಲ" ಬಗ್ಗೆ

**ಡಾ|| ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೩ (೫೩೪) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಡಿ ದೇವರಾಜ ಅರಸು ಅಭಿವೃದ್ಧಿ ನಿಗಮದ ಮೂಲಕ ಬೀದರ್ ಜಿಲ್ಲೆಯ ನಿರುದ್ಯೋಗಿ ಹಿಂದುಳಿದ ವರ್ಗಗಳ ಯುವಕರಿಗೆ ನೀಡಲಾಗುವ "ಸ್ವಯಂ ಉದ್ಯೋಗ ನೇರ ಸಾಲ" ಯೋಜನೆಯ ಗುರಿಯನ್ನು ಕಳೆದ ಮೂರು ವರ್ಷಗಳಿಂದ ಕಡಿಮೆ ಮಾಡುತ್ತಾ ಬರುತ್ತಿರುವುದು ನಿಜವೇ ;

(ಆ) ಇದರಿಂದ ಜಿಲ್ಲೆಯ ಯುವ ಜನರಿಗಾಗುತ್ತಿರುವ ಹಿನ್ನಡೆಯನ್ನು ಸರಿಪಡಿಸಲು ಸರ್ಕಾರದ ನಿಲುವೇನು ?

## ಮಕ್ಕಳ ಅಪೌಷ್ಟಿಕತೆ ಮತ್ತು ಪುಷ್ಟಿ ಯೋಜನೆ ಕುರಿತು

**ಡಾ॥ ಎಂ. ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು):–**

೪೬೪ (೫೩೫) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಔರಾದ್ ಮತ್ತು ಬಸವಕಲ್ಯಾಣ ತಾಲ್ಲೂಕುಗಳಲ್ಲಿ ಮಕ್ಕಳಲ್ಲಿ ಅಪೌಷ್ಟಿಕತೆ ಪ್ರಮಾಣ ರಾಜ್ಯದ ಸರಾಸರಿಗಿಂತ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಒಂದು ವರ್ಷದಲ್ಲಿ ಅಪೌಷ್ಟಿಕತೆ ನಿವಾರಣೆಗೆ ಈ ಜಿಲ್ಲೆಗೆ ಪೂರೈಕೆಯಾದ ಪೌಷ್ಟಿಕ ಆಹಾರದ ಮೊತ್ತವೆಷ್ಟು ;

(ಇ) ಜಿಲ್ಲೆಯಲ್ಲಿ 'ಬಾಲ ಸಂಜೀವಿನಿ' ಮತ್ತು 'ಕ್ಷೀರ ಭಾಗ್ಯ' ಯೋಜನೆಯಡಿ ಎಷ್ಟು ಮಕ್ಕಳು ಪ್ರಯೋಜನ ಪಡೆಯುತ್ತಿದ್ದಾರೆ ;

(ಈ) ಈ ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಜಿಲ್ಲೆಯಲ್ಲಿರುವ ಕೊರತೆಗಳೇನು ?

## ರಾಜ್ಯದಲ್ಲಿನ ಭಿಕ್ಷುಕರು, ಮಕ್ಕಳೊಂದಿಗೆ ಭಿಕ್ಷಾಟನೆ ಹಾಗೂ ಇದರ ಕುರಿತು ಸರ್ಕಾರ ಕೈಗೊಂಡ ಕ್ರಮದ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೬೫ (೫೩೭) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ನೋಂದಾಯಿತ ಭಿಕ್ಷುಕರ ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ನಗರ ಮತ್ತು ಗ್ರಾಮಾಂತರ ಪ್ರದೇಶಗಳ ವಿಂಗಡಣೆಯೊಂದಿಗೆ ಸಂಪೂರ್ಣ ವಿವರ ನೀಡುವುದು)

(ಆ) ಇವರಲ್ಲಿ ಮಕ್ಕಳೊಂದಿಗೆ ಭಿಕ್ಷಾಟನೆಯಲ್ಲಿ ತೊಡಗಿರುವವರ ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ ಭಿಕ್ಷುಕರ ಪುನರ್ವಸತಿ, ನಿಯಂತ್ರಣ ಮತ್ತು ಅವರಿಗೆ ಸಾಮಾಜಿಕ ಭದ್ರತೆ ಒದಗಿಸಲು ಸಮಾಜ ಕಲ್ಯಾಣ ಇಲಾಖೆಯು ಜಾರಿಗೆ ತಂದಿರುವ ಯೋಜನೆಗಳು ಯಾವುವು ; ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರು ಮಾಡಿದ ಅನುದಾನ ಹಾಗೂ ವ್ಯಯಿಸಲಾದ ಮೊತ್ತ ಎಷ್ಟು ; (ವಿವರ ನೀಡುವುದು)

(ಈ) ಇತರ ರಾಜ್ಯಗಳಿಂದ ಬಂದಿರುವ ವ್ಯಕ್ತಿಗಳು ಅಥವಾ ಜಾಲಗಳು, ನವಜಾತ ಶಿಶುಗಳು ಸೇರಿದಂತೆ ಅಪ್ರಾಪ್ತ ಮಕ್ಕಳನ್ನು ಭಿಕ್ಷಾಟನೆಗೆ ಬಳಸಿಕೊಳ್ಳುತ್ತಿರುವ ಗಂಭೀರ ಆರೋಪಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಇಲಾಖೆಯ ಬಳಿ ಇರುವ ಅಧಿಕೃತ ವರದಿಗಳೇನು ; ಕಳೆದ ಎರಡು ವರ್ಷಗಳಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಉ) ಮಕ್ಕಳನ್ನು ಭಿಕ್ಷಾಟನೆಗೆ ಬಳಸುವ ದಂಧೆಯನ್ನು ನಿರ್ಮೂಲನೆ ಮಾಡಲು ಸಮಾಜ ಕಲ್ಯಾಣ ಇಲಾಖೆ, ಗೃಹ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಕಾರ್ಮಿಕ ಇಲಾಖೆಗಳ ಸಮನ್ವಯದೊಂದಿಗೆ ಸರ್ಕಾರವು ಹಮ್ಮಿಕೊಂಡಿರುವ ಕಠಿಣ ಕ್ರಮಗಳು ಮತ್ತು ಭವಿಷ್ಯದ ಕಾರ್ಯಯೋಜನೆಗಳೇನು ? (ವಿವರ ನೀಡುವುದು)

## ಬೆಳೆ ನಷ್ಟ, ಪರಿಹಾರ ವಿತರಣೆ ಮತ್ತು ಭವಿಷ್ಯದ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೬೬ (೫೩೮) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಸಂಭವಿಸಿದ ಅಕಾಲಿಕ ಮಳೆ, ಬರ, ಪ್ರವಾಹ, ಆಲಿಕಲ್ಲು ಮಳೆ ಹಾಗೂ ಕೀಟಭಾದೆಗಳಿಂದಾಗಿ ತೊಂದರೆಗೊಳಗಾದ ರೈತರ ಸಂಖ್ಯೆ ಎಷ್ಟು; ಬೆಳೆವಾರು ಹಾನಿಯ ವಿಸ್ತೀರ್ಣ ಮತ್ತು ಅಂದಾಜು ನಷ್ಟದ ಮೊತ್ತವೆಷ್ಟು ; (ಜಿಲ್ಲಾವಾರು ವಿವರಗಳನ್ನು ಒದಗಿಸುವುದು)

(ಆ) ಬೆಳೆ ನಷ್ಟ ಅನುಭವಿಸಿದ ರೈತರಿಗೆ ಪರಿಹಾರ ವಿತರಿಸುವಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ ಎರಡು ವರ್ಷಗಳಲ್ಲಿ ಜಿಲ್ಲಾವಾರು ಎಷ್ಟು ರೈತರಿಗೆ ಪರಿಹಾರ ವಿತರಿಸಲಾಗಿದೆ ಮತ್ತು ಎಷ್ಟು ರೈತರ ಪಾವತಿ ಬಾಕಿ ಉಳಿದಿದೆ; ಈ ವಿಳಂಬಕ್ಕೆ ಕಾರಣಗಳೇನು ಹಾಗೂ ಬಾಕಿ ಇರುವ ಪರಿಹಾರವನ್ನು ಪಾವತಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಎಷ್ಟು ;

(ಇ) ಪ್ರಸ್ತುತ ನೀಡಲಾಗುತ್ತಿರುವ ಬೆಳೆ ನಷ್ಟ ಪರಿಹಾರದ ಮೊತ್ತವು ರೈತರ ನೈಜ ನಷ್ಟಕ್ಕೆ ಹೋಲಿಸಿದರೆ ಅತ್ಯಲ್ಪವಾಗಿದೆ ಎಂಬ ದೂರುಗಳ ಹಿನ್ನೆಲೆಯಲ್ಲಿ ಪರಿಹಾರದ ಮೊತ್ತವನ್ನು (SDRF/NDRF ಮಾರ್ಗಸೂಚಿ ಮೀರಿ) ಪರಿಷ್ಕರಿಸಿ ಹೆಚ್ಚಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ ; ಇಲ್ಲದಿದ್ದಲ್ಲ, ರೈತರ ಹಿತದೃಷ್ಟಿಯಿಂದ ಮೊತ್ತವನ್ನು ಹೆಚ್ಚಿಸಲು ಇರುವ ತಾಂತ್ರಿಕ ಅಥವಾ ಆರ್ಥಿಕ ಅಡಚಣೆಗಳೇನು ;

(ಈ) ಭವಿಷ್ಯದಲ್ಲಿ ಇಂತಹ ನಷ್ಟಗಳನ್ನು ತಡೆಗಟ್ಟಲು ಮತ್ತು ನಷ್ಟ ಸಂಭವಿಸಿದ ತಕ್ಷಣ ರೈತರಿಗೆ ತ್ವರಿತವಾಗಿ ನೆರವು ನೀಡಲು ಇಲಾಖೆಯು ರೂಪಿಸಿರುವ ತುರ್ತು ಮತ್ತು ದೀರ್ಘಕಾಲೀನ ಯೋಜನೆಗಳೇನು ; ಈ ನಿಟ್ಟಿನಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ ಅಥವಾ ಬೆಳೆ ವಿಮೆ ಪಾವತಿಯಲ್ಲಿ ತರಲು ಉದ್ದೇಶಿಸಿರುವ ಸುಧಾರಣೆಗಳೇನು ?

## ಅಪೌಷ್ಟಿಕ ಮಕ್ಕಳ ದತ್ತು ಯೋಜನೆ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೬೭ (೫೩೯) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೭ ವರ್ಷದೊಳಗಿನ ಮಕ್ಕಳಲ್ಲಿ ತೀವ್ರ ಮತ್ತು ಸಾಧಾರಣ ಅಪೌಷ್ಟಿಕತೆ ಇರುವ ಮಕ್ಕಳ ಸಂಖ್ಯೆ ಎಷ್ಟು ; (ಶಿವಮೊಗ್ಗ ಸೇರಿದಂತೆ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)

(ಆ) ರಾಜ್ಯದಲ್ಲಿ ಅಪೌಷ್ಟಿಕ ಮಕ್ಕಳನ್ನು ದತ್ತು ತೆಗೆದುಕೊಳ್ಳುವ ಯೋಜನೆ ಜಾರಿಯಲ್ಲದೆಯೇ ; ಹಾಗಿದ್ದಲ್ಲಿ, ಸದರಿ ಯೋಜನೆ ಅಡಿ ಎಷು ಅಪೌಷ್ಟಿಕ/ಸಾಧಾರಣ ಅಪೌಷ್ಟಿಕ ಮಕ್ಕಳನ್ನು ದತ್ತು ತೆಗೆದುಕೊಳ್ಳಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಮಕ್ಕಳಲ್ಲಿ ಅಪೌಷ್ಟಿಕತೆ ತಗ್ಗಿಸಲು ಸರ್ಕಾರ ಜಾರಿ ಮಾಡಿರುವ ವಿವಿಧ ಯೋಜನೆಗಳಾವುವು ; ಸದರಿ ಯೋಜನೆಗಳಿಗೆ ೨೦೨೫–೨೬ನೇ ಸಾಲಿನಲ್ಲಿ ಕಾಯ್ದಿರಿಸಿದ, ಬಿಡುಗಡೆಯಾದ ಮತ್ತು ಖರ್ಚಾದ ಮೊತ್ತವೆಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

## ರಾಯಚೂರು ಜಿಲ್ಲೆಯಲ್ಲಿ ಭತ್ತ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೬೮ (೫೪೦) ಮಾನ್ಯ ಕೃಷಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕೃಷಿ ಆರ್ಥಿಕತೆಯಲ್ಲಿ ಭತ್ತವು ಒಂದು ಪ್ರಮುಖ ಆಹಾರ ಧಾನ್ಯವಾಗಿದ್ದು, ಉತ್ತರ ಕರ್ನಾಟಕ ಭಾಗದ ರಾಯಚೂರು,

ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಹೆಚ್ಚು ಪ್ರಮಾಣದ ಭತ್ತದ ಬೆಳೆಯನ್ನು ಬೆಳೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬೆಳೆಯ ಸಂಶೋಧನೆ, ಸೂಕ್ತ ಮಾರುಕಟ್ಟೆ ವ್ಯವಸ್ಥೆ, ಬೆಲೆ ಸ್ಥಿರತೆ ಹಾಗೂ ರೈತರ ಹಿತಾಸಕ್ತಿಯ ರಕ್ಷಣೆಗಾಗಿ 'ಕರ್ನಾಟಕ ತೊಗರಿ ಅಭಿವೃದ್ಧಿ ಮಂಡಳಿ' ಹಾಗೂ 'ಕಾಫಿ ಅಭಿವೃದ್ಧಿ ಮಂಡಳಿ'ಯ ರೀತ್ಯಾ ಭತ್ತದ ಬೆಳೆಗೆ ಪ್ರತ್ಯೇಕವಾಗಿ ರಾಯಚೂರು ಜಿಲ್ಲೆಯಲ್ಲಿ 'ಕರ್ನಾಟಕ ಭತ್ತ ಅಭಿವೃದ್ಧಿ ಮಂಡಳಿ'ಯನ್ನು ಸ್ಥಾಪಿಸುವ ಅಗತ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದ ನಿಲುವೇನು ;

(ಈ) ರಾಜ್ಯ ಸರ್ಕಾರದಿಂದ ಯಾವ ಕಾಲಮಿತಿಯೊಳಗೆ ರಾಯಚೂರು ಜಿಲ್ಲೆಯಲ್ಲಿ ಭತ್ತ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಗುತ್ತದೆ ? (ಮಾಹಿತಿ ನೀಡುವುದು)

## ಸಿಂಧನೂರು ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿ ನಿಲಯಗಳನ್ನು ನಿರ್ಮಾಣ ಮಾಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೬೯ (೫೪೧) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಪ್ರಸ್ತುತ ಸಮಾಜ ಕಲ್ಯಾಣ ಇಲಾಖೆಯ ೦೫ ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ೨೦೨೫–೨೬ನೇ ಸಾಲಿನಲ್ಲಿ ೧೫೭೩ ವಿದ್ಯಾರ್ಥಿಗಳಿಗೆ ಪ್ರವೇಶಾತಿ ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹೆಚ್ಚಿನ ವಿದ್ಯಾರ್ಥಿಗಳು ದಾಖಲಾಗಿರುವ ಹಿನ್ನೆಲೆಯಲ್ಲಿ ಪ್ರಸ್ತುತ ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಇಲಾಖೆಯ ೦೫

ಮೆಟ್ರಿಕ್ ನಂತರದ ಬಾಲಕರ/ಬಾಲಕಿಯರ ವಿದ್ಯಾರ್ಥಿನಿಲಯಗಳ ಮೇಲೆ ಹೆಚ್ಚಿನ ಒತ್ತಡವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸದರಿ ವಸತಿ ನಿಲಯಗಳಿಗೆ ದಾಖಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ಪ್ರಸ್ತುತ ಮಂಜೂರಾಗಿರುವ ಸಂಖ್ಯೆಗಿಂತ ಹೆಚ್ಚಾಗಿದ್ದು, ಸಮರ್ಪಕವಾಗಿ ಸೌಲಭ್ಯಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಕಷ್ಟಸಾಧ್ಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಸರ್ಕಾರವು ಸಿಂಧನೂರು ತಾಲ್ಲೂಕಿನ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಸೂಕ್ತ ವಸತಿ ಸೌಲಭ್ಯವನ್ನು ಕಲ್ಪಿಸಲು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳೊಂದಿಗೆ ಇನ್ನೂ ಕನಿಷ್ಟ ೦೫ ವಿದ್ಯಾರ್ಥಿ ನಿಲಯಗಳನ್ನು ಸರ್ಕಾರದಿಂದ ಹೊಸದಾಗಿ ಮಂಜೂರು ಮಾಡಬೇಕಿದ್ದು, ಈ ಕುರಿತು ಸರ್ಕಾರದ ನಿಲುವೇನು ;

(ಉ) ಯಾವ ಕಾಲಮಿತಿಯೊಳಗೆ ಹೆಚ್ಚುವರಿ ವಿದ್ಯಾರ್ಥಿ ನಿಲಯಗಳನ್ನು ಸರ್ಕಾರದಿಂದ ಮಂಜೂರು ಮಾಡಲಾಗುತ್ತದೆ ?

## ಸಿಂಧನೂರು ತಾಲ್ಲೂಕಿನಲ್ಲಿ 'ಜಲಜೀವನ್ ಮಿಷನ್' ಯೋಜನೆಯ ಕಾಮಗಾರಿಯ ಗುಣಮಟ್ಟದ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೦ (೫೪೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಕೇಂದ್ರ ಸರ್ಕಾರದ 'ಜಲಜೀವನ್ ಮಿಷನ್' (ಜೆಜೆಎಂ) ಯೋಜನೆಯ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಸದರಿ ಕಾಮಗಾರಿಯಿಂದ ತಾಲ್ಲೂಕಿಗೆ ಜನರಿಗೆ ಸೂಕ್ತ ಕುಡಿಯುವ ನೀರಿನ ಪೂರೈಕೆಯಾಗುತ್ತಿದೆಯೇ ;

(ಇ) ಜೆಜೆಎಂ ಕಾಮಗಾರಿಗೆ ಎಷ್ಟು ಅನುದಾನ ಬಿಡುಗಡೆಯಾಗಿದೆ ;

(ಈ) ಜೆಜೆಎಂ ಕಾಮಗಾರಿಯ ಗುಣಮಟ್ಟವು ಕಳಪೆಯಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದಿಂದ ಯಾವ ಕ್ರಮವಹಿಸಲಾಗಿದೆ ?

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿನ ಸಹಾಯಕ ನಿರ್ದೇಶಕರಿಗೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಹುದ್ದೆಗೆ ಬಡ್ತಿ ನೀಡುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೧ (೫೪೩) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಖಾಲಿಯಿರುವ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಖಾಲಿ ಹುದ್ದೆಗಳಿಗೆ ಬೇರೆ ಇಲಾಖೆಗಳಿಂದ ನಿಯೋಜನೆ ಮೇರೆಗೆ ಅಧಿಕಾರಿಗಳು ಬಂದು ಕರ್ತವ್ಯ ನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಹಲವಾರು ಹಿರಿಯ ಸಹಾಯಕ ನಿರ್ದೇಶಕರುಗಳು ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿಯವರುಗಳಿಗೆ ಹಾಲಿ ಖಾಲಿಯಿರುವ ಕಾರ್ಯನಿರ್ವಾಹಕ ಹುದ್ದೆಗೆ ಬಡ್ತಿ/ಪ್ರಭಾರ ನೀಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಈ) ಇದ್ದಲ್ಲಿ, ಬೇರೆ ಇಲಾಖೆಯ ಅಧಿಕಾರಿಗಳನ್ನು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಾಗಿ ನಿಯೋಜಿಸುವುದನ್ನು ನಿಲ್ಲಿಸಿ ಹಾಲಿಯಿರುವ ಹಿರಿಯ ಸಹಾಯಕ

ನಿರ್ದೇಶಕರಿಗೆ ಯಾವ ಕಾಲಮಿತಿಯೊಳಗೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಹುದ್ದೆಗೆ ಮುಂಬಡ್ತಿ ನೀಡಲಾಗುವುದು ?

## ಕಾರ್ಮಿಕ ಇಲಾಖೆಯಿಂದ ೨೦೨೫-೨೬ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿನ ಕಟ್ಟಡ ಕೂಲಿ ಕಾರ್ಮಿಕರಿಗೆ ನೀಡಲಾಗಿರುವ ಸೌಲಭ್ಯಗಳ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೨ (೫೪೪) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾರ್ಮಿಕ ಇಲಾಖೆಯಿಂದ ಕಟ್ಟಡ ಕೂಲಿ ಕಾರ್ಮಿಕರಿಗೆ ನೀಡಲಾಗುವ ವಿವಿಧ ಸೌಲಭ್ಯಗಳೇನು ;

(ಆ) ೨೦೨೫-೨೬ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿನ ವಿವಿಧ ಕಟ್ಟಡ ಕೂಲಿ ಕಾರ್ಮಿಕರಿಗೆ ಎಷ್ಟು ಮೊತ್ತದ ಅನುದಾನವನ್ನು ವಿವಿಧ ಯೋಜನೆಗಳಡಿ ಬಿಡುಗಡೆ ಮಾಡಲಾಗಿದೆ ;

(ಇ) ೨೦೨೫-೨೬ನೇ ಸಾಲಿನಲ್ಲಿ ಸೌಲಭ್ಯ ಪಡೆದ ಸಿಂಧನೂರು ತಾಲ್ಲೂಕಿನ ವಿವಿಧ ಫಲಾನುಭವಿಗಳ ಸಂಖ್ಯೆ ಎಷ್ಟು ; (ವಿವರವನ್ನು ಯೋಜನೆವಾರು ನೀಡುವುದು)

(ಈ) ಸಿಂಧನೂರು ತಾಲ್ಲೂಕಿನಲ್ಲಿ ಕಾರ್ಮಿಕ ಇಲಾಖೆಯಿಂದ ಕಾರ್ಮಿಕರ ಕ್ಷೇಮಾಭಿವೃದ್ಧಿಗೆ ಅನುಕೂಲವಾಗುವಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲು 'ಕಾರ್ಮಿಕ ಭವನ'ವನ್ನು ನಿರ್ಮಾಣ ಮಾಡುವ ಕುರಿತು ಸರ್ಕಾರದ ನಿಲುವೇನು ?

## ಆನೇಕಲ್ ಮತಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಗ್ರಾಮೀಣ ರಸ್ತೆಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೪೭೩ (೫೫೦) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆನೇಕಲ್ ಮತಕ್ಷೇತ್ರ ವ್ಯಾಪ್ತಿಯಲ್ಲಿ ಜಿಲ್ಲಾ ಪಂಚಾಯತ್ ಗ್ರಾಮೀಣ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಗ್ರಾಮೀಣ ರಸ್ತೆಗಳ ಅಭಿವೃದ್ಧಿಗೆ ಎಷ್ಟು ಪ್ರಸ್ತಾವನೆಗಳು ಬಂದಿರುತ್ತದೆ ;

(ಇ) ಕಳೆದ ೩ ವರ್ಷಗಳಿಂದ ಗ್ರಾಮೀಣ ರಸ್ತೆ ಅಭಿವೃದ್ಧಿಗೆ ನೀಡಿರುವ ಅನುದಾನ ಎಷ್ಟು ? (ವಿವರ ನೀಡುವುದು)

## ಗ್ರಾಮ ಪಂಚಾಯಿತಿಗಳಲ್ಲಿ ಹಣ ದುರ್ಬಳಕೆ ಪ್ರಕರಣಗಳ ವಿಚಾರಣೆ ಬಾಕಿ ಇರುವ ವಿವರದ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೪ (೪೨೪) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು ; ಸದರಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗಳು, ಸದಸ್ಯರುಗಳು ಪಂಚಾಯಿತಿಗಳಲ್ಲಿ ಹಾಗೂ ಅಧ್ಯಕ್ಷರು ಹಣ ದುರ್ಬಳಕೆ ಮಾಡಿ ಸರ್ಕಾರಕ್ಕೆ ವಂಚಿಸಿದ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಗ್ರಾಮ ಪಂಚಾಯಿತಿವಾರು, ಪ್ರಕರಣವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ 3 ವರ್ಷಗಳಲ್ಲಿ ಅವ್ಯವಹಾರವಾಗಿರುವ ಗ್ರಾಮ ಪಂಚಾಯಿತಿಗಳನ್ನು ತನಿಖೆಗೆ ಒಳಪಡಿಸಿರುವ ಒಟ್ಟು ಪ್ರಕರಣಗಳು ಎಷ್ಟು ; ಅದಕ್ಕೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ; (ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು)

(ಇ) ಪ್ರಸ್ತುತ ತನಿಖೆ ಪೂರ್ಣಗೊಂಡು ಆದೇಶಕ್ಕಾಗಿ ಬಾಕಿ ಇರುವ ಪ್ರಕರಣಗಳು ಎಷ್ಟು ; ಯಾವ ಕಾರಣಕ್ಕಾಗಿ ಬಾಕಿ ಉಳಿಸಿಕೊಳ್ಳಲಾಗಿದೆ ಹಾಗೂ ಅವ್ಯವಹಾರದಿಂದ ಸರ್ಕಾರಕ್ಕೆ ಆದ ಒಟ್ಟು ನಷ್ಟ ಎಷ್ಟು ? (ಗ್ರಾಮ ಪಂಚಾಯಿತಿವಾರು ಮಾಹಿತಿ ನೀಡುವುದು)

(ಈ) ಗ್ರಾಮ ಪಂಚಾಯಿತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಸದಸ್ಯರುಗಳು ಹಾಗೂ ಅಧ್ಯಕ್ಷರುಗಳು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ ೧೯೯೩ ರ ಪ್ರಕರಣದ ೪೩(ಎ)(i) ರನ್ವಯ ತನಿಖೆ ಮೂಲಕ ಸಾಬೀತಾದರೂ ಸಹ ಸರ್ಕಾರ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ;

(ಉ) ಈ ಅಧಿನಿಯಮದನ್ವಯ ತನಿಖೆ ಮೂಲಕ ಸಾಬೀತಾದರು ಸಹ ಕಾನೂನು ಕ್ರಮಗಳನ್ನು ಜರುಗಿಸಲು ಸರ್ಕಾರವು ೩–೪ ವರ್ಷ ಸಮಯ ತೆಗೆದುಕೊಳ್ಳುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿಲ್ಲವೇ ; ಹಾಗಿದ್ದಲ್ಲಿ, ಸರ್ಕಾರದ ಕ್ರಮವೇನು ; ಈ ಸಂಬಂಧ ಸರ್ಕಾರವು ನೂತನ ಕಾನೂನು ಜಾರಿಗೊಳಿಸುವುದೇ ?

## ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ನಡೆದಿರುವ ಹಣ ದುರ್ಬಳಕೆ ಹಾಗೂ ಭ್ರಷ್ಟಾಚಾರ ಪ್ರಕರಣಗಳ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೫ (೪೫೧) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧-೨೨ ರಿಂದ ೨೦೨೫-೨೬ನೇ ಸಾಲಿನವರೆಗೆ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಹಂಚಿಕೆ, ಬಿಡುಗಡೆ ಹಾಗೂ ಬಳಕೆ ಮಾಡಿರುವ ಅನುದಾನದ ಮೊತ್ತವೆಷ್ಟು ; (ವರ್ಷವಾರು ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಆರ್ಥಿಕ ವರ್ಷದಲ್ಲಿ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯಲ್ಲಿ ಬೆಳಕಿಗೆ ಬಂದ ಯೋಜನೆಯ ಹಣ ದುರ್ಬಳಕೆ, ಭ್ರಷ್ಟಾಚಾರ ಹಾಗೂ ಇತ್ಯಾದಿ ಹಣ ದುರ್ಬಳಕೆ ಪ್ರಕರಣಗಳ ಸಂಖ್ಯೆ ಎಷ್ಟು ; ಎಷ್ಟು ಮೊತ್ತದ ಹಣ ದುರ್ಬಳಕೆಯಾಗಿದೆ ; ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು)

(ಇ) ಸದರಿ ಆರ್ಥಿಕ ವರ್ಷದಲ್ಲಿ ಯಾವ ಯಾವ ಕಾಮಗಾರಿಗಳಲ್ಲಿ ಹಣ ದುರ್ಬಳಕೆ, ಭ್ರಷ್ಟಾಚಾರ ನಡೆದಿರುತ್ತದೆ ; ಹಣ ದುರ್ಬಳಕೆ ಮತ್ತು ಭ್ರಷ್ಟಾಚಾರ ನಡೆದಿರುವ ಗ್ರಾಮ ಪಂಚಾಯತಿಗಳಾವುವು ; ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕೈಗೊಂಡು ದುರ್ಬಳಕೆಯಾದ ಹಣವನ್ನು ಮರು ವಸೂಲಿ ಮಾಡಿ ಯೋಜನೆಗಳಿಗೆ ಹಂಚಿಕೆ ಮಾಡಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳಿಗೆ ಅನುದಾನ ಹಂಚಿಕೆಯ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೬ (೪೫೨) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳೆಷ್ಟು ; ಸದರಿ ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ಸದರಿ ನಿಗಮಗಳಿಂದ ಫಲಾನುಭವಿಗಳಿಗೆ ಲಭ್ಯವಿರುವ ಯೋಜನೆಗಳಾವುವು ; ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೩-೨೪, ೨೦೨೪-೨೫, ೨೦೨೫-೨೬ನೇ ಸಾಲುಗಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮಗಳಿಂದ ಜಾರಿಯಲ್ಲಿರುವ ಎಲ್ಲಾ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿರುತ್ತದೆ ; ಯಾವ ಯಾವ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ ; ಆಯ್ಕೆಯಾದ ಫಲಾನುಭವಿಗಳಿಗೆ ಸಹಾಯಧನದ ಅನುದಾನವನ್ನು ಯಾವ ಕಾಲಮಿತಿಯೊಳಗೆ ನೀಡಲಾಗಿರುತ್ತದೆ ; ಪ್ರತಿಯೊಂದು ಯೋಜನೆಗಳಲ್ಲಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ? (ಪ್ರತ್ಯೇಕವಾಗಿ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳಿಗೆ ಅನುದಾನ ಹಂಚಿಕೆಯ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೭೭ (೪೫೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳೆಷ್ಟು ; ಸದರಿ ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ಸದರಿ ನಿಗಮಗಳಿಂದ ಫಲಾನುಭವಿಗಳಿಗೆ ಲಭ್ಯವಿರುವ ಯೋಜನೆಗಳಾವುವು ; ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೩-೨೪, ೨೦೨೪-೨೫, ೨೦೨೫-೨೬ನೇ ಸಾಲುಗಳ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮಗಳಿಂದ ಜಾರಿಯಲ್ಲಿರುವ ಎಲ್ಲಾ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿರುತ್ತದೆ ; ಯಾವ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಆಯ್ಕೆ ಮಾಡಲಾಗಿರುತ್ತದೆ ; ಆಯ್ಕೆಯಾದ ಫಲಾನುಭವಿಗಳಿಗೆ ಸಹಾಯಧನದ ಅನುದಾನವನ್ನು ಯಾವ ಕಾಲಮಿತಿಯೊಳಗೆ ನೀಡಲಾಗಿರುತ್ತದೆ ; ಪ್ರತಿಯೊಂದು ಯೋಜನೆಗಳಲ್ಲಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ? (ಪ್ರತ್ಯೇಕವಾಗಿ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳಿಗೆ ಅನುದಾನ ಹಂಚಿಕೆಯ ಕುರಿತು

**ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೪೭೮ (೪೫೪) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮ ಮಂಡಳಿಗಳೆಷ್ಟು; ಸದರಿ ನಿಗಮ ಮಂಡಳಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ಸಂಖ್ಯೆ ಎಷ್ಟು ; ಸದರಿ ನಿಗಮಗಳಿಂದ ಫಲಾನುಭವಿಗಳಿಗೆ ಲಭ್ಯವಿರುವ ಯೋಜನೆಗಳಾವುವು ; ಫಲಾನುಭವಿಗಳನ್ನು ಆಯ್ಕೆ ಮಾಡಲು ಅನುಸರಿಸುತ್ತಿರುವ ಕ್ರಮಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ೨೦೨೩-೨೪, ೨೦೨೪-೨೫, ೨೦೨೫-೨೬ನೇ ಸಾಲುಗಳ ಸಮಾಜ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ನಿಗಮಗಳಿಂದ ಜಾರಿಯಲ್ಲಿರುವ ಎಲ್ಲಾ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳಿಗೆ ಸಹಾಯ ಧನವನ್ನು ನೀಡಲಾಗಿರುತ್ತದೆ ; ಯಾವ ಯೋಜನೆಗಳಲ್ಲಿ ಎಷ್ಟು ಜನ ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿರುತ್ತದೆ ; ಆಯ್ಕೆಯಾದ ಫಲಾನುಭವಿಗಳಿಗೆ ಸಹಾಯಧನದ ಅನುದಾನವನ್ನು ಯಾವ ಕಾಲಮಿತಿಯೊಳಗೆ ನೀಡಲಾಗಿರುತ್ತದೆ; ಪ್ರತಿಯೊಂದು ಯೋಜನೆಗಳಲ್ಲಿರುವ ಫಲಾನುಭವಿಗಳ ಸಂಖ್ಯೆ ಎಷ್ಟು ? (ಪ್ರತ್ಯೇಕವಾಗಿ ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ಶುದ್ಧ ಕುಡಿಯುವ ನೀರಿನ ಘಟಕಗಳ ಬಗ್ಗೆ

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :-**

೪೭೯ (೪೭೨) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸರ್ಕಾರದಿಂದ ನಿರ್ಮಿಸಿರುವ ಶುದ್ಧ ಕುಡಿಯುವ ನೀರಿನ ಘಟಕಗಳ ಸಂಖ್ಯೆ ಎಷ್ಟು ; ದುರಸ್ತಿಯಲ್ಲಿರುವ/ಮುಚ್ಚಿ ಹೋಗಿರುವ ಘಟಕಗಳೆಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಮರ್ಪಕವಾಗಿ ನಿರ್ವಹಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಅಂಗನವಾಡಿ ಕೇಂದ್ರಗಳ ಬಗ್ಗೆ

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೦ (೪೭೩) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಹೊಸದಾಗಿ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆಯೇ ; ಮಂಜೂರು ಮಾಡಲಾಗಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; (ವಿಧಾನಸಭಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಮಂಜೂರಾದ ಅಂಗನವಾಡಿಗಳ ಪೈಕಿ ಸ್ವಂತ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿಗಳ ಸಂಖ್ಯೆ ಎಷ್ಟು ; ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವುದು ಎಷ್ಟು ;

(ಇ) ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ಅಂಗನವಾಡಿಗಳಿಗೆ ಸ್ವಂತ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## SCP / TSP ಅನುದಾನದ ಬಗ್ಗೆ

**ಶ್ರೀ ಎನ್.ನಾಗರಾಜು (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೧ (೪೭೪) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯಲ್ಲಿ ಸಮಾಜ ಕಲ್ಯಾಣ ಇಲಾಖೆಯ ಎಸ್‌ಸಿಪಿ/ಟಿಎಸ್‌ಪಿ ಗಂಗಾಕಲ್ಯಾಣ ಯೋಜನೆಯಡಿ ಮಂಜೂರಾದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿಧಾನಸಭಾವಾರು ಮಾಹಿತಿ ನೀಡುವುದು)

(ಆ) ಸದರಿ ಯೋಜನೆ ಅಡಿಯಲ್ಲಿ ಕೊಳವೆ ಬಾವಿಗಳಿಗೆ ಬಿಡುಗಡೆಗೊಳಿಸಲಾದ ಅನುದಾನವೆಷ್ಟು ;

(ಇ) ಹಾಗಿದ್ದಲ್ಲಿ, ಮಂಜೂರಾದ ಕೊಳವೆ ಬಾವಿಗಳ ಪೈಕಿ ಎಷ್ಟು ಕೊಳವೆ ಬಾವಿಗಳನ್ನು ಕೊರೆಯಲಾಗಿದೆ ; ಬಾಕಿ ಕೊರೆಯಬೇಕಾಗಿರುವ ಕೊಳವೆ ಬಾವಿಗಳೆಷ್ಟು ?

## Menstrual Cup ಖರೀದಿಯಲ್ಲಿನ ಅವ್ಯವಹಾರಗಳ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೨ (೯೯೫) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ Menstrual Cup ಖರೀದಿಯಲ್ಲಿನ ದೊಡ್ಡ ಮಟ್ಟದ ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಆ) Menstrual Cup ಖರೀದಿಗಾಗಿ ಟೆಂಡರ್ ಕರೆಯಲಾಗಿದೆಯೇ; ಯಾವ ಯಾವ ಎನ್.ಜಿ. ಓ. ಗಳು ಟೆಂಡರ್‌ನಲ್ಲಿ ಭಾಗವಹಿಸಿದ್ದವು ; ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಸಂಸ್ಥೆಗಳ ಸಮಗ್ರ ವಿಳಾಸ ಹಾಗೂ ಸಂಸ್ಥೆಯ ಮೂಲ ಮಾಲೀಕರು/ ನಿರ್ದೇಶಕರ ಹೆಸರಿನೊಂದಿಗೆ ವಿವರ ನೀಡುವುದು ;

(ಇ) Menstrual Cup ಖರೀದಿಗಾಗಿ ನಿಗದಿಪಡಿಸಲಾದ ಒಟ್ಟು ಮೊತ್ತ ಎಷ್ಟು ; ಒಂದು Menstrual Cup ಗೆ ಎಷ್ಟು ಮೊತ್ತ

ನಿಗದಿಪಡಿಸಿದೆ ; ಸದರಿ Menstrual Cup ಗಳನ್ನು ವರ್ಷಕ್ಕೆ ಎಷ್ಟು ಬಾರಿ ಫಲಾನುಭವಿಗಳಿಗೆ ಒದಗಿಸಲಾಗುತ್ತದೆ ; ಒಬ್ಬ ಫಲಾನುಭವಿಗೆ ವರ್ಷಕ್ಕೆ ಎಷ್ಟು Menstrual Cup ಒದಗಿಸಲಾಗುತ್ತದೆ ; ಈ ಕಾರ್ಯಕ್ರಮ ಎಷ್ಟು ವರ್ಷ ಜಾರಿಯಲ್ಲಿರುತ್ತದೆ ; (ಸಮಗ್ರ ವಿವರ ನೀಡುವುದು)

(ಈ) Menstrual Cup ಖರೀದಿಗಾಗಿ ಟೆಂಡರ್ ಪಡೆದಿರುವ ಸಂಸ್ಥೆ ಯಾವುದು ; ಎಷ್ಟು ಮೊತ್ತಕ್ಕೆ ಟೆಂಡರ್ ನೀಡಲಾಗಿದೆ ; ಸದರಿ ಸಂಸ್ಥೆಯು ಒಂದು Menstrual Cup ಸರಬರಾಜು ಮಾಡಲು ನಿಗದಿ ಪಡಿಸಿದ ಮೊತ್ತ ಎಷ್ಟು ; (ಸದರಿ ಸಂಸ್ಥೆಯ ನಿರ್ದೇಶಕರ ಹೆಸರಿನೊಂದಿಗೆ ಸಮಗ್ರ ವಿವರ ನೀಡುವುದು)

(ಉ) Menstrual Cup ಖರೀದಿಗಾಗಿ ಟೆಂಡರ್ ಪಡೆದಿರುವ ಸಂಸ್ಥೆಯು ಎಷ್ಟು ವರ್ಷಗಳ ಕಾಲ ಎಷ್ಟು ಸಂಖ್ಯೆಯ Menstrual Cup ಸರಬರಾಜು ಮಾಡುವ ಟೆಂಡರ್ ಪಡೆದಿದೆ ? (ವರ್ಷವಾರು ವಿವರ ನೀಡುವುದು)

## ಕನ್ನಡ ಭಾಷೆಯ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೩ (೪೯೬) ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ಶೇ.೫೨% ಕ್ಕಿಂತಲೂ ಕಡಿಮೆ ಮತ್ತು ರಾಜ್ಯದಲ್ಲಿ ಸುಮಾರು ಶೇ. ೬೮% ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ;

(ಆ) ಕನ್ನಡ ರಾಜ್ಯ ಆಡಳಿತ ಭಾಷೆಯಾಗಿದ್ದರೂ ಸಹ ಸರ್ಕಾರವೇ ಹಲವಾರು ಆದೇಶಗಳನ್ನು ಆಂಗ್ಲ ಭಾಷೆಯಲ್ಲಿ ಹೊರಡಿಸುತ್ತಿರುವುದು ಕನ್ನಡ ಭಾಷೆಗೆ ಅಪಮಾನ ಮಾಡಿದಂತಲ್ಲವೇ ; ಸರ್ಕಾರದ ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಕಡತದ ಟಿಪ್ಪಣಿಯನ್ನು ಆಂಗ್ಲ ಭಾಷೆಯಲ್ಲಿ ಬರೆಯುತ್ತಿರುವ ಕುರಿತು ಸರ್ಕಾರ ಯಾವ ಕ್ರಮ ಕೈಗೊಂಡಿದೆ ;

(ಇ) ಕೆ.ಪಿ.ಎಸ್.ಸಿ ಹಾಗೂ ಕೆ.ಇ.ಎ. ಮುಖಾಂತರ ಸರ್ಕಾರಿ ನೌಕರರ ನೇಮಕಾತಿಗಾಗಿ ನಡೆಯುವ ಪರೀಕ್ಷೆಗಳು ಕನ್ನಡ ಮಾಧ್ಯಮದಲ್ಲಿ ಮಾತ್ರವೇ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು ; ಆಡಳಿತ ಭಾಷೆ ಕನ್ನಡ ಎಂದ ಮೇಲೆ ಇಂಗ್ಲೀಷ್ ಭಾಷೆಯ ಪರೀಕ್ಷೆ ನಡೆಸುವ ಅವಶ್ಯಕತೆ ಇದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಈ) ಗ್ಯಾರಂಟಿ ಯೋಜನೆಗಳ ಫಲಾನುಭವಿಗಳಿಗೆ ಕನ್ನಡ ಭಾಷೆ ಕಡ್ಡಾಯ ಕುರಿತು ಇಲಾಖೆಯ ನಿಲುವೇನು ? (ವಿವರ ನೀಡುವುದು)

## ಕಟ್ಟಡ ಕಾರ್ಮಿಕರಿಗೆ ನೀಡಲಾಗಿರುವ ಸುರಕ್ಷತಾ ಕಿಟ್‌ಗಳ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೮೪ (೪೯೭) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕ ಇಲಾಖೆಯ ಕಾರ್ಮಿಕರಿಗೆ ವಿತರಿಸಲಾಗುವ ಸುರಕ್ಷತಾ ಕಿಟ್‌ಗಳಿಗೆ ಸಂಬಂಧಿಸಿದಂತೆ ಹಿಂದೆ ಖರೀದಿಸಿರುವ ಸುರಕ್ಷತಾ ಕಿಟ್‌ಗಳು ಇನ್ನೂ ಸಂಪೂರ್ಣವಾಗಿ ವಿತರಣೆ ಆಗದೇ ಇದ್ದು, ಸುಮಾರು ೪ ಲಕ್ಷ ಹೊಸ ಸುರಕ್ಷತಾ ಕಿಟ್‌ಗಳನ್ನು ಖರೀದಿಸಲಾಗಿದೆ ಎಂಬ ಮಾಹಿತಿ ಕುರಿತು ಸರ್ಕಾರದ ಉತ್ತರವೇನು ;

(ಆ) ಕಿಟ್‌ಗಳನ್ನು ಸ್ವೀಕರಿಸಲು ಯಾವ ಮಾನದಂಡಗಳನ್ನು (ಪ್ಯಾರಾಮೀಟರ್) ಅನುಸರಿಸಲಾಗುತ್ತಿದೆ ; ಸುರಕ್ಷತಾ ಕಿಟ್‌ಗಳಲ್ಲಿ ಇರುವ ಪರಿಕರಗಳನ್ನು ಉತ್ಪಾದನೆ ಮಾಡುವ ಕಂಪನಿಯ ಹೆಸರು ಹಾಗೂ ಪರಿಕರಗಳ ಮೂಲ ಬೆಲೆಯ ಮಾಹಿತಿ ಒದಗಿಸುವುದು ;

(ಇ) ಸದರಿ ಸುರಕ್ಷತಾ ಕಿಟ್‌ಗಳನ್ನು ಸಂಗ್ರಹಿಸಲು (ಸ್ಟೋರೇಜ್) ಎಷ್ಟು ವಿಸ್ತೀರ್ಣದ ಜಾಗದ ಅಗತ್ಯವಿದೆ ; ಅಷ್ಟು ವಿಸ್ತೀರ್ಣವಾದ ಜಾಗ ಎಲ್ಲೆಲ್ಲಿ ಲಭ್ಯವಿದೆ ಹಾಗೂ ಈಗಾಗಲೇ ಖರೀದಿಸಿರುವ ಸುರಕ್ಷತಾ ಕಿಟ್‌ಗಳನ್ನು ಸಂಗ್ರಹಿಸಿಟ್ಟಿರುವ ಜಾಗಗಳ ಕುರಿತು ಮಾಹಿತಿ ಒದಗಿಸುವುದು ;

(ಈ) ಹಿಂದೆ ಖರೀದಿಸಿರುವ ಸುರಕ್ಷತಾ ಕಿಟ್‌ಗಳ ವಿತರಣೆ ಇನ್ನೂ ಪೂರ್ಣಗೊಳ್ಳದೇ ಇರುವಾಗ ೨೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವ ತುರ್ತು ಅಗತ್ಯವೇನು ; (ವಿವರ ಒದಗಿಸುವುದು)

(ಉ) ಸುರಕ್ಷತಾ ಕಿಟ್ ವಿತರಣೆಗೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಯಾವ ರೀತಿಯಾಗಿದೆ ; ಕಾರ್ಮಿಕರ ಆಧಾರ್ ಕಾರ್ಡ್ ಅಥವಾ ಕಾರ್ಮಿಕ ಗುರುತಿನ ಚೀಟಿ ಆಧಾರದ ಮೇಲೆ ಕಾರ್ಮಿಕರಿಗೆ ಸುರಕ್ಷತಾ ಕಿಟ್ ವಿತರಣೆ ಮಾಡಲಾಗಿದೆಯೇ ; ಕಿಟ್ ನೀಡಿರುವುದಕ್ಕೆ ಸ್ವೀಕೃತಿ (Receipt) ಪಡೆದುಕೊಳ್ಳಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಊ) ಕಿಟ್‌ಗಳ ಸಂಗ್ರಹಣೆ, ಲಭ್ಯವಿರುವ ಸಂಗ್ರಹಣಾ ಜಾಗದ ಹೊಂದಾಣಿಕೆ ಹಾಗೂ ಪಾರದರ್ಶಕ ಮತ್ತು ದೋಷರಹಿತ ವಿತರಣಾ ವ್ಯವಸ್ಥೆಗೆ ಸಂಬಂಧಿಸಿದ ಸಂಪೂರ್ಣ ಸ್ಟ್ಯಾಂಡರ್ಡ್ ಅಪರೇಟಿಂಗ್ ಪ್ರೊಸೀಜರ್ (SOP) ಏನು ; (ವಿವರಗಳನ್ನು ಒದಗಿಸುವುದು)

(ಋ) ಸುರಕ್ಷತಾ ಕಿಟ್ ಗಳನ್ನು ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆಯೇ ; ಟೆಂಡರ್ ನ ಮೊತ್ತ ಎಷ್ಟು ; ಸುರಕ್ಷತಾ

ಕಿಟ್‌ನ ಪರಿಕರಗಳ ಗುಣಮಟ್ಟ ಪರಿಶೀಲಿಸಲಾಗಿದೆಯೇ ; ಹೌದಾದಲ್ಲಿ, ಗುಣಮಟ್ಟ ಪರಿಶೀಲಿಸಿರುವ ಅಧಿಕಾರಿಗಳ ಹೆಸರು ಹಾಗೂ ಹುದ್ದೆಯ ಮಾಹಿತಿ ಒದಗಿಸುವುದು ; ಸುರಕ್ಷತಾ ಕಿಟ್ ಗಳಲ್ಲಿರುವ ಪರಿಕರಗಳು – ISI ಪ್ರಮಾಣೀಕೃತವಾಗಿದೆಯೇ ? (ಮಾಹಿತಿ ಒದಗಿಸುವುದು)

## ಮೊಬೈಲ್ ಮೆಡಿಕಲ್ ಯೂನಿಟ್‌ಗಳ ಕುರಿತು

**ಶ್ರೀ ಎನ್.ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೪೮೫ (೪೯೮) ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಟ್ಟಡ ಕಾರ್ಮಿಕರು, ಕಲ್ಯಾಣ ಮಂಡಳಿಯಿಂದ ನೋಂದಾಯಿತ ಕಟ್ಟಡ ಕಾರ್ಮಿಕರು ಮತ್ತು ಅವರ ಅವಲಂಬಿತರ ವೈದ್ಯಕೀಯ ತಪಾಸಣೆಗಾಗಿ ಎಷ್ಟು ಮೊಬೈಲ್ ಮೆಡಿಕಲ್ ಯೂನಿಟ್ ಗಳನ್ನು ನಿರ್ವಹಿಸಲಾಗುತ್ತಿದೆ ; ಸದರಿ ಮೊಬೈಲ್ ಮೆಡಿಕಲ್ ಯೂನಿಟ್‌ಗಳ ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು ; ಸದರಿ ಸಂಸ್ಥೆಯವರು ಯಾವ ಹೆಸರಿನ ಸಂಸ್ಥೆಯ ಮೂಲಕ ನಿರ್ವಹಣಾ ಮೊತ್ತವನ್ನು ಪಡೆದುಕೊಳ್ಳುತ್ತಿದ್ದಾರೆ ; (ಹೆಸರು, ಮೂಲ ಮಾಲೀಕರು/ ನಿರ್ದೇಶಕರ ಹೆಸರಿನೊಂದಿಗೆ ಸಮಗ್ರ ವಿವರ ನೀಡುವುದು)

(ಆ) ಕಳೆದ ವರ್ಷದಲ್ಲಿ ಈ ಮೊಬೈಲ್ ಮೆಡಿಕಲ್ ಯೂನಿಟ್‌ಗಳ ನಿರ್ವಹಣೆಗೆ ಎಷ್ಟು ಮೊತ್ತ ವೆಚ್ಚ ಮಾಡಲಾಗಿದೆ ; ಸದರಿ ಮೊತ್ತವನ್ನು ಟೆಂಡರ್ ಪಡೆದಿರುವ ಯಾವ ಸಂಸ್ಥೆಯ ಹೆಸರಿನಲ್ಲಿ ನೀಡಲಾಗಿದೆ ; ಸಂಸ್ಥೆಯ ಹೆಸರು, ವಿಳಾಸ ಹಾಗೂ ಸದರಿ ಸಂಸ್ಥೆಗೆ ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಪಾವತಿಸಲಾದ ಮೊತ್ತವೆಷ್ಟು ; ಸಮಗ್ರ ವಿವರ ನೀಡುವುದು;

ಸದರಿ ಮೊತ್ತವನ್ನು ಡ್ರಾ ಮಾಡಲಾದ ದಿನಾಂಕ, ಎಷ್ಟು ಮೊತ್ತದ ಬಿಲ್ ಡ್ರಾ ಮಾಡಲಾಗಿದೆ ? (ಬಿಲ್ ಸಂಖ್ಯೆ, ಪಾವತಿದಾರರ ಹೆಸರು, ಯಾವ ಬ್ಯಾಂಕಿನ ಮೂಲಕ ಎಂಬುದರ ಮಾಹಿತಿ ಒದಗಿಸುವುದು)

## ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನವನ್ನು ನಿಯಮ ಮೀರಿ ಬಳಕೆ ಮಾಡುತ್ತಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೮೬ (೫೩೬) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿಯ ವಾಲ್ಮೀಕಿ (ಎಸ್‌ಪಿ) ವೃತ್ತದ ಸುಂದರೀಕರಣ ಮತ್ತು ವಾಲ್ಮೀಕಿ ಪುತ್ಥಳಿ ಪ್ರತಿಷ್ಠಾಪನೆಗೆ ಹಂಚಿಕೆಯಾಗಿರುವ ಅನುದಾನ ಎಷ್ಟು ; ಈ ಎರಡು ಯೋಜನೆಗಳ ಅಂದಾಜು ಪಟ್ಟಿ, ಮಂಜೂರು ಮಾಡಿರುವ ಅನುದಾನದ ಕುರಿತು ಸಂಪೂರ್ಣ ಮಾಹಿತಿ ಒದಗಿಸುವುದು ;

(ಆ) ಈ ಕಾಮಗಾರಿಯನ್ನು ಜಾರಿ ಮಾಡುತ್ತಿರುವವರು ಮತ್ತು ಗುತ್ತಿಗೆ ಪಡೆದುಕೊಂಡಿರುವ ಗುತ್ತಿಗೆದಾರರ ಮಾಹಿತಿ ಒದಗಿಸುವುದು ;

(ಇ) ಬಳ್ಳಾರಿಯ ವಾಲ್ಮೀಕಿ (ಎಸ್‌ಪಿ) ವೃತ್ತದ ವಾಲ್ಮೀಕಿ ಪುತ್ಥಳಿ ಕೆತ್ತನೆಗೆ ಯಾವ ಅನುದಾನ ಹಂಚಿಕೆ ಮಾಡಲಾಗಿದೆ ;

(ಈ) ಸುಂದರೀಕರಣ ಮತ್ತು ಪುತ್ಥಳಿ ಕೆತ್ತನೆಗೆ ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಬಳಕೆ ಮಾಡಿರುವುದು ನಿಜವೇ ; ನಿಜವಾಗಿದ್ದರೆ, ಇಂಥ ಕೆಲಸಗಳಿಗೆ ಕ್ಷೇತ್ರಾಭಿವೃದ್ಧಿ ನಿಧಿ ಬಳಸಲು ನಿಯಮಗಳ ಪ್ರಕಾರ ಅವಕಾಶವಿದೆಯೇ ; (ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಉ) ಶಾಸಕರ ಸ್ಥಳೀಯ ಕ್ಷೇತ್ರಾಭಿವೃದ್ಧಿ ನಿಧಿ ಬಳಕೆಗೆ ಇರುವ ಮಾನದಂಡಗಳೇನು ? (ಮಾಹಿತಿ ಒದಗಿಸುವುದು)

## ನವ್ಯೋದ್ಯಮಗಳಿಗೆ ಬಿಡುಗಡೆ ಮಾಡಿರುವ ಸಹಾಯಧನದ ಬಗ್ಗೆ

**ಡಾ. ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೪೮೭ (೫೪೬) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನವ್ಯೋದ್ಯಮ ಎಂದರೇನು ; ಇದರಲ್ಲಿ ಎಷ್ಟು ವಿಧ ; ಅವು ಯಾವುವು: ಹಾಲಿ ನವ್ಯೋದ್ಯಮ ನೀತಿ ಏನಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಪ್ರಾರಂಭದಿಂದ ಇಲ್ಲಿಯವರೆಗೆ ಸರ್ಕಾರ ಎಷ್ಟು ನವೋದ್ಯಮಗಳಿಗೆ ಸಹಾಯಧನ/ಪ್ರೋತ್ಸಾಹಧನವನ್ನು ಬಿಡುಗಡೆ ಮಾಡಿದೆ ; (ವಿವರವಾಗಿ ನವ್ಯೋದ್ಯಮದ ಹೆಸರು, ವಿಳಾಸ, ಉದ್ಯಮದ ವಿವರ, ಬಿಡುಗಡೆ ಮಾಡಿದ ಹಣ ಹಾಗೂ ಇತರೆ ವಿವರಗಳೊಂದಿಗೆ ಜಿಲ್ಲಾವಾರು, ವರ್ಷವಾರು ಮಾಹಿತಿ ನೀಡುವುದು)

(ಇ) ಗ್ರಾಮೀಣ ಭಾಗದಲ್ಲಿ ನವ್ಯೋದ್ಯಮವನ್ನು ಪ್ರಾರಂಭಿಸಬಹುದೇ ; ಹಾಗಿದ್ದಲ್ಲಿ, ಇದರ ಸಂಬಂಧ ಪ್ರಕ್ರಿಯೆಗಳ ವಿವರಣೆಯೊಂದಿಗೆ ಮಾಹಿತಿ ನೀಡುವುದು ;

(ಈ) ನವ್ಯೋದ್ಯಮವು ರಾಜ್ಯದ ಯುವ ಪದವೀಧರ/ಉದ್ಯಮಿಗೆ ಯಾವ ರೀತಿ ಸಹಾಯವಾಗಲಿದೆ ; (ವಿವರದೊಂದಿಗೆ ಮಾಹಿತಿ ನೀಡುವುದು)

(ಉ) ನವ್ಯೋದ್ಯಮವನ್ನು ಜಾರಿಗೆ ತರುವ ಜವಾಬ್ದಾರಿಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ ; ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಯಾರು ; ಅವರ ಕರ್ತವ್ಯಗಳೇನು ? (ವಿವರವಾಗಿ ಸಿಬ್ಬಂದಿ ಹೆಸರು, ಹುದ್ದೆಯ ಪದನಾಮ, ಹಾಲಿ ಪಡೆಯುತ್ತಿರುವ ಮಾಸಿಕ ವೇತನದೊಂದಿಗೆ ವಿವರವಾದ ಮಾಹಿತಿ ನೀಡುವುದು)

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O 156/500 ಪ್ರತಿಗಳು/27–01–2026